# ಸಾಂಬ ಗಳಹಸ್ತಿಕಾ ಎರಡನೇ ಭಾಗ

## ಸಪ್ತಮೋಲ್ಲಾಸವು.

## ಅದ್ವೈತಮತದ ಉತ್ಸೂತ್ರ ಭಾಷ್ಯತ್ವ ಸಮರ್ಥನವು.

ಈ ರೀತಿಯಾಗಿ ತಮ್ಮಿಂದಲೇ ರಚಿತವಾದ, ಪರಂಪರೆಯಿಂದ ಪ್ರಾಪ್ತವಲ್ಲದ ಐಕ್ಯವಾದವನ್ನು ಗೌಡಪಾದ, ಶಂಕರಾ ಚಾರ್ಯರು ವೇದದಲ್ಲೂ, ಬ್ರಹ್ಮಸೂತ್ರದಲ್ಲೂ, ಭಗವದ್ಗೀತೆಯಲ್ಲೂ ಪ್ರವೇಶಿಸಬೇಕೆಂದು ಯತ್ನಿಸಿದರು. ವೇದದಲ್ಲಿ ಪ್ರವೇಶವು ಎಷ್ಟು ಅವಶ್ಯಕವಾದುದೆಂಬುದನ್ನು ನಾವು ತೃತೀಯಾಧ್ಯಾಯದಲ್ಲಿಯೇ ವಿವರಿಸಿರುವೆವು. ಇನ್ನು ಬ್ರಹ್ಮಸೂತ್ರದ ಕಟ್ಟನ್ನು ಸಡಲಿಸು ವುದಕ್ಕೆ ಅವರು ಮಾಡಿದ ಯತ್ನವನ್ನು ತೋರಿಸುವೆವು. ಶಂಕರಭಗವತ್ಪಾದರೇ ಬ್ರಹ್ಮಸೂತ್ರವು ಸರ್ವಸ್ಥಳಗಳಲ್ಲಿಯೂ ಬಿಗಿಯಾಗಿ ಅಚ್ಛೇದ್ಯವಾಗಿ ಕೀಳುವುದಕ್ಕೆ ಅಶಕ್ಯವಾಗಿರುವುದೆಂದು ಹೇಳಿರುತ್ತಾರೆ:-

(1) ''ಪ್ರತಿಪಾದ್ಯಂತು ಶಾಸ್ತ್ರಾರ್ಥಮಾತ್ಮೈಕತ್ವಮೇವ ದರ್ಶಯತಿ'' ಶಾಸ್ತ್ರದೃಷ್ಟ್ಯಾತೂಪದೇಶೋ ವಾಮದೇವವತ್॥ ಇತ್ಯಾದಿನಾ॥ ಶಾಂಕರಭಾಷ್ಯಂ

(2) ಆನಂದಗಿರಿ ಟೀಕಾ :- ''ನನು ಜೀವಬ್ರಹ್ಮಣೋರೈಕ್ಯಂ ನ ಕ್ವಾಪಿ ಸೂತ್ರಕಾರೋ ಮುಖತೋ ವದತಿ। ಕಿಂತು ಸರ್ವತ್ರ ಭೇದಮೇವಾತೋನೈಕ್ಯಮಿಷ್ಟಂ ತತ್ರಾಹ ಪ್ರತಿಪಾದ್ಯಂತ್ವಿತಿ - ಆದಿ ಪದಂ ಆತ್ಮೇತಿತೂಪಗಚ್ಛಂತೀತ್ಯಾದಿ ಸಂಗ್ರಹಾರ್ಥಂ॥

ಅರ್ಥವು:- ಜೀವಬ್ರಹ್ಮರ ಐಕ್ಯವನ್ನು ಯಾವ ಸೂತ್ರದಲ್ಲಿಯೂ ಕಂಠತಃ ಸೂತ್ರಕಾರರು ಹೇಳಿರುವುದಿಲ್ಲ; ಕಿಂಚ ಭೇದವನ್ನೇ ಕಂಠತಃ ಹೇಳಿರುತ್ತಾರೆ. ಆದುದರಿಂದ ಐಕ್ಯವು ಶಾಸ್ತ್ರಕಾರರಿಗೆ ಸಮ್ಮತವಲ್ಲ. ಹೀಗೆ ಆಶಂಕಿಸಿದರೆ ಐಕ್ಯತತ್ವವು ಶಾಸ್ತ್ರದೃಷ್ಟ್ಯಾತು ಉಪದೇಶೋ ವಾಮದೇವವತ್ ಎಂಬ ಪ್ರಥಮಾಧ್ಯಾಯದ ಸೂತ್ರದಲ್ಲಿಯೂ, ''ಆತ್ಮೇತಿತೂಪಗಚ್ಛಂತಿ ಗ್ರಾಹಯಂತಿ ಚ'' ಎಂಬ ಚತುರ್ಥಾಧ್ಯಾ ಯದ ಸೂತ್ರದಲ್ಲಿಯೂ ಹೇಳಿರುತ್ತದೆ.

ಏವಂ ಚ ಈ ಎರಡು ಮೂರು ಸ್ಥಳಗಳಲ್ಲಿ ಸೂತ್ರಗಳ ಹುರಿಯು ಸ್ವಲ್ಪ ಶಿಥಿಲವಾಗಿದೆ. ಇತರ ಸ್ಥಳಗಳಲ್ಲಿ ಕೀಳುವುದಕ್ಕಾ ಗಲೀ ಆಗುವುದಿಲ್ಲ ಎಂದು ಶಂಕರಾಚಾರ್ಯರು ಖುದ್ದು ಹೇಳಿದಂತಾಯಿತು.

'ಭೇದವ್ಯಪದೇಶಾಚ್ಚ', ಭೇದವ್ಯಪದೇಶಾಚ್ಚಾನ್ಯಃ, ಶಾರೀರಶ್ಚೋಭಯೇಪಿ ಹಿ ಭೇದೇನೈನಮಧೀಯತೇ, ಪೃಥಗುಪದೇಶಾತ್ ಇತ್ಯಾದಿ ಬಹು ಸ್ಥಳಗಳಲ್ಲಿ ಸೂತ್ರವೇ ಯಮಗಂಟಾಗಿರುವುದು. ಅಲ್ಲಿ ಶಂಕರಾಚಾರ್ಯರೂ ಕೂಡ ತಮ್ಮ ಐಕ್ಯಮಣಿಯನ್ನು ಪೋಣಿಸುವುದಕ್ಕೆ ಸ್ವಲ್ಪವೂ ಅವಕಾಶವಿಲ್ಲವೆಂದು ಒಪ್ಪಲೇ ಬೇಕು. ಸೂತ್ರವು ವಿಷ್ಣುಗುಣಗಳೆಂಬ ವಜ್ರದ ಮಣಿಗಳಿಂದ ಸಹಿತವಾಗಿ ಜೀವಬ್ರಹ್ಮರ ಭೇದವನ್ನೇ ಪ್ರಕಾಶಿಸುತ್ತಿರುವುದು. ಅಭೇದವು ಇದ್ದಲು ತುಂಡಿನಂತಿರುವುದರಿಂದ, ಮಂಗಳಸೂತ್ರಕ್ಕೆ ಪ್ರವೇಶಾರ್ಹ ವಲ್ಲವೆಂದು ಸೂತ್ರಕಾರರೇ ನಿಶ್ಚಯಿಸಿ, ಮಧ್ಯೇ ಮಧ್ಯೇ ದೃಢಗಂಟುಗಳನ್ನು ಹಾಕಿರುವರು. ಹೀಗಿರುವಲ್ಲಿ ಒಂದೆರಡು ಸ್ಥಳಗಳಲ್ಲಿ ಸಡಿಲವಾಗಿ ದಾರವನ್ನು ಹಾಗೆಯೇ ಬಿಟ್ಟಿರುವರೆಂದು ಹೇಳುವುದು ಅಸಂಭಾವಿತವು.

ಇದರ ಮೇಲೆ ''ಶಾಸ್ತ್ರಾದೃಷ್ಟ್ಯಾತು'', ''ಆತ್ಮೇತಿ ತು'' ಎಂಬ ಎರಡು ಸೂತ್ರಗಳಲ್ಲಿಯೂ ಐಕ್ಯವೆಂಬ ಹೆಸರೇ ಇಲ್ಲ. ಸ್ವಕಪೋಲ ಕಲ್ಪಿತವಾದ ಅರ್ಥವನ್ನು ಮಾಡುವುದಾದರೆ, ಭೇದಪರವಾಗಿ ಯಾತಕ್ಕೆ ಮಾಡಬಾರದು ಎಂಬ ಹರತಿ ಆಚಾರ್ರ ಪ್ರಶ್ನೆಯು ಗಣೆಯ ಮರದಂತೆ ನಿಂತೇ ಇರುವುದು. ಕಿಂಚ ದ್ವೈತ ಸಿದ್ಧಾಂತ ವಿಚಾರದಲ್ಲಿ ಈ ಎರಡು ಸೂತ್ರಗಳಿಗೂ ಭೇದಪರವಾಗಿ ಅರ್ಥಮಾಡುವುದರಲ್ಲಿ ಯುಕ್ತಿಗಳು ಹೇಳಲ್ಪಟ್ಟಿರುವುವು. (ಪುಟ 16-17)

ಆದರೂ ರಂಗಭೂಮಿಯಲ್ಲಿ ಕೇವಲಧರ್ಮಯುದ್ಧವನ್ನೇ ಮಾಡುವುದು ದುಷ್ಕರವು. ಶತ್ರುವನ್ನು ಯಾವುದಾದರೂ ಉಪಾಯದಿಂದ ತಿರಸ್ಕರಿಸಬೇಕು ಎಂದು ತೀಕ್ಷ್ಣವಾದ ಕಳಿಂಗ ಬ್ರಾಹ್ಮಣನ ನೀತಿಯು ಭಾರತದಲ್ಲಿ ಉಕ್ತವಾಗಿರುವುದು. ಈಗ ವೇದ ವ್ಯಾಸರಿಗೂ ಶಂಕರಾಚಾರ್ಯರಿಗೂ ಬುದ್ಧಿ ಯುದ್ಧವು ಪ್ರಾಪ್ತವಾಯಿತು. ಸಕಲಸೂತ್ರಗಳನ್ನೂ ಭೇದವೆಂಬ ಉಕ್ಕಿನ ತಂತಿಗಳಿಂದ ಜೋಡಿಸಿ, ಬಾದರಾಯಣರು ಶಂಕರಾಚಾರ್ಯರ ಐಕ್ಯವನ್ನು ವೇದವೆಂಬ ರಾಜಗೃಹಕ್ಕೆ ಪ್ರವೇಶಿಸುವುದಕ್ಕೆ ಅವಕಾಶವಾಗದಂತೆ ತಡೆದರು. ಅದಕ್ಕೇ ಶಂಕಾರಾಚಾರ್ಯರು ಶಾಠಿಯನ್ನು ನಡುವಿಗೆ ಕಟ್ಟಿ ವ್ಯಾಸರನ್ನು ಅವರ ಆಶ್ರಮದಲ್ಲೇ ಪಲ್ಟಿ ಹೊಡೆಯುವಂತೆ ಮಾಡಿದರು. ಭೇದಪರವಾಗಿ ರಚಿಸಲ್ಪಟ್ಟಿದ್ದ ವ್ಯಾಸಸೂತ್ರಗಳಿಗೇ ಅಭೇದಪರವಾಗಿ ಅರ್ಥಮಾಡಿಬಿಟ್ಟರು. ಇದು ಬುದ್ಧಿ ಚಾತುರ್ಯ ವು. ಶಂಕರವಿಜಯದಲ್ಲಿಯೇ ಈ ಅಮೋಘವಾದ ಶಂಕರಾಚಾರ್ಯರ ಕೌಶಲ್ಯವು ವರ್ಣಿಸಲ್ಪಟ್ಟಿದೆ.

**''ವ್ಯಾಸೋಪದಿಷ್ಟಸೂತ್ರಾಣಾಂ ದ್ವೈತವಾಕ್ಯಾತ್ಮನಾಂಶಿವೇ। ಅದ್ವೈತಮೇವ ಸೂತ್ರಾರ್ಥಂ ಪ್ರಾಮಾಣ್ಯೇನ ಕರಿಷ್ಯತಿ।**
**ಅವಿಮುಕ್ತೇ ಸಮಾಸೀನಂ ವ್ಯಾಸಂ ವಾಕ್ಯೈರ್ವಿಜಿಗ್ಯ ಚ॥''**

ವ್ಯಾಸರು ಈ ಸಂದರ್ಭದಲ್ಲಿ ಅದೃಶ್ಯರಾದರು. ಶಂಕರಾಚಾರ್ಯರು ಜಯಶೀಲರಾಗಿ ಶಂಖಧ್ವನಿಯನ್ನು ಮಾಡಿದರು. ಹೀಗಿದ್ದರೂ ಆನಂದಮಯಾಧಿಕರಣವು ಮಾತ್ರ ಶಂಕರಾಚಾರ್ಯರಿಗೆ ಸ್ವಲ್ಪ ತೊಂದರೆ ಕೊಟ್ಟುಬಿಟ್ಟಿತು. ಶಂಕರಾಚಾರ್ಯರು ಏನು ಮಾಡಿದರು? ಸೂತ್ರವನ್ನೇ ಹೊಡೆದು ಹಾಕಿ ಬಿಟ್ಟರು. ವೇದಗಂಧವನ್ನೇ ತಿಳಿಯದ ಈ ವ್ಯಾಸರು ಈ ಸೂತ್ರರಚನೆಯಲ್ಲಿ ತಪ್ಪು ಮಾಡಿರುತ್ತಾರೆ. ಆದುದರಿಂದ ''ಸೂತ್ರಾಣ್ಯನ್ಯಥಾ ಯೋಜನೀಯಾನಿ '' ಎಂದು ಹೇಳಿಬಿಟ್ಟರು. ಶ್ರುತಿಯಲ್ಲಿ ಆನಂದಮಯನ ಬಾಲವು (ಪುಚ್ಛವು) ಬ್ರಹ್ಮನೆಂದು ಹೇಳಿರುತ್ತದೆ. ವ್ಯಾಸರಾದರೋ, ಆನಂದಮಯನೇ ಬ್ರಹ್ಮನೆಂದು ಹೇಳಿದರು. ಅದು ಐಕ್ಯವಾದಿ ಗಳ ತತ್ವವಲ್ಲ. ಯಾತಕ್ಕೆಂದರೆ, ಆನಂದಮಯನು ಸಗುಣ ಬ್ರಹ್ಮನು. ವಿಷ್ಣುವು. ಅವನು ವೈಷ್ಣವರಾದ ದೇವತೆಗಳ ಬ್ರಹ್ಮನು. ಆನಂದಮಯ ಪುಚ್ಛವಾದ, ಎಲ್ಲಾದಿಕ್ಕಿಂತಲೂ ಹಿಂದಿರುವ 'ನೇತಿ ನೇತಿ' ಎಂಬ ಉಪನಿಷತ್ಪ್ರತಿಪಾದ್ಯನಾದ ಶುದ್ಧ ಚಿನ್ಮಾತ್ರನಷ್ಟೇ ಅವೈಷ್ಣವರ ಬ್ರಹ್ಮನು. ಕೃಷ್ಣಮಿತ್ರರಾದ ವ್ಯಾಸರು ಮೋಸಮಾಡುವುದಕ್ಕೆ ಎಣಿಸಿದರು. ಇವರಿಗೆ ಇಷ್ಟು ಬುದ್ಧಿಯಿದ್ದಮೇಲೆ, ವೀರರೆಂದೆ ನಿಸಿಕೊಂಡು, ಹಿಂದೆ ಬೌದ್ಧರಿಂದ ಅಪಹೃತವಾದ ತಮ್ಮ ತತ್ವವನ್ನು ಪಡೆಯುವ ಕೆಲಸದಲ್ಲಿ ಮಾಹಾತ್ಮ್ಯವನ್ನು ಸಂಪಾದಿಸಿರುವ ಶಂಕರಾಚಾರ್ಯರಿಗೆ ಇನ್ನೆಷ್ಟು ಬುದ್ಧಿ ಇರಬೇಕು? ಆದುದರಿಂದ ಅವರು ಬಾದರಾಯಣರ ಅಭಿಪ್ರಾಯಾನುಸಾರವಾಗಿ ಸೂತ್ರಕ್ಕೆ ಪೂರ್ವಪಕ್ಷವನ್ನು ಮಾಡಿ ತಮ್ಮ ಐಕ್ಯಮತಾನುಸಾರವಾಗಿ ಒಂದೇ ಲೈನ್ ನಿಂದ ಖಂಡಿಸಿಬಿಟ್ಟರು. ಈ ವಿಷಯದಲ್ಲಿ ಆಧಾರವು :-

(1) " ..... Or we may suppose that Sankara disagrees with Badarayana here, that he therefore interprets the Sutras first in Badarayana's sense and then rejects this interpretation, in order to give another in its place in the sense of which he finally interprets the sutras as the standard authority of the school consciously changing their original meaning"---- Paul Deussen.

ದ್ವೈತಪರವಾದ ಸೂತ್ರಾರ್ಥವನ್ನು ಶಂಕರಾಚಾರ್ಯರು ಅದ್ವೈತಪರವಾಗಿ ಪಲ್ಟಿಹೊಡಿಸಿದರು ಎಂಬಲ್ಲಿ ಶಂಕರವಿಜಯದ ಶ್ಲೋಕ ವನ್ನೇ ನಾವು ಉದಾಹರಿಸಿರುತ್ತೇವೆ. ವಿಶೇಷ ಸಮಾಚಾರ ಬಗ್ಗೆ ಇನ್ನೂ ಒಂದೆರಡು ಸಮ್ಮತಿಗಳನ್ನೂ ಕೊಡುತ್ತೇವೆ.

(2) One cannot be certain on the point whether or not Samkara is a faithful interpreter of Badarayana's work..... The author of the Sutras could not have refuted the Sankhya and discussed the theories of creation so seriously, if he had held that the world was an appearance, in which case its creatorship was out of question-------S.Radhakrishnan .M.A. D.Litt.

(3) The fact...... goes to show that the Brahmasutras were originally regarded as an authoritative work of the dualists.

(4) I am myself inclined to believe that the dualistic interpretations of the Brahmasutras were probably more faithful to the Sutras than the interpretations of Sankara--- Dasgupta, M.A. Ph.D

(5) " I must give it as my opinion that they (the sutras), do not set forth the distinction of a higher and a lower knowledge of Brahman, that they do not acknowledge the distinction of Brahma and Iswara in Sankara's sense, that they do not hold the doctrine of the unreality of the universe, and that they do not with Sankara proclaim the identity of the individual and the Higher Self "-------- George Thibaut.

ಇವುಗಳಲ್ಲೆಲ್ಲಾ ಬ್ರಹ್ಮಸೂತ್ರಗಳಿಗೂ ಶಂಕರಭಾಷ್ಯಕ್ಕೂ ಅಸಂಗವೇ ಸಂಬಂಧವೆಂದು ಹೇಳಿರುತ್ತದೆ. ಸೂತ್ರವು ಬದರೀ ಹಾದಿಯನ್ನು ಹಿಡಿದು ಉತ್ತರದಿಗ್ಗಮನವನ್ನು ಮಾಡುತ್ತಿದೆ. ಭಾಷ್ಯವು ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡುತ್ತಿದೆ. ಅಥವಾ ಸೂತ್ರವು ದೇವತೆಗಳಿಗೆ ಹರ್ಷಪ್ರದಾನಾರ್ಥವಾಗಿ ಊರ್ಧ್ವ ಲೋಕಗಳನ್ನು ಕುರಿತು ಮೇಲಕ್ಕೆ ಹೋಗುತ್ತಿದೆ. ಭಾಷ್ಯವು ಪಾತಾಳಾದಿ ಲೋಕನಿವಾಸಿಗಳಾದ ದಾನವ ಚೂಡಾಮಣಿಗಳ ಮನಸ್ಸಂತೋಷಾರ್ಥವಾಗಿ ಅಧೋಮುಖವಾಗಿ ಇಳಿಯುತ್ತಿದೆ. ಹರತೀ ಆಚಾರ್ಯರೇ! ಇನ್ನು ನಿಮಗೆ ಉಪಮಾನವು

ಬೇಕೋ? ಸೂತ್ರವು ಉದಯಗಿರಿಯನ್ನುಕುರಿತು ಪೂರ್ವಕ್ಕೆ ಹೋಗುತ್ತಿದೆ. ಶಂಕರಭಾಷ್ಯವು ಮಧ್ಯಾನ್ಹಸೂರ್ಯನಿಂದ ತಪ್ತರಾದ ಜನರಿಗೆ ಶಾಂತಿಯನ್ನುಕೊಡುವುದಕ್ಕಾಗಿ ಅಸ್ತಾಚಲವನ್ನುಕುರಿತು ಪ್ರಯಾಣ ಮಾಡುತ್ತಿದೆ. ಸೂತ್ರವು ವಾಯವ್ಯಕ್ಕೆ ಹೋಗುತ್ತಿದೆ. ಭಾಷ್ಯವು ಆಗ್ನೇಯದಿಕ್ಕಿಗೆ ಚಲಿಸುತ್ತಿದೆ. ಸೂತ್ರವು ಈಶಾನ್ಯಮುಖವನ್ನು ನೋಡುತ್ತಿದೆ. ಭಾಷ್ಯವು ನೈರುತ್ಯಕ್ಕೆ ತಿರುಗಿಕೊಂಡಿದೆ. ಇತ್ಯಾದಿ ರೀತಿಯಾಗಿ ನೀವು ತಿಳಿಯಬಹುದು. ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅದ್ವೈತ ಮತದ ಉತ್ಸೂತ್ರ ಭಾಷ್ಯತ್ವ ಸಮರ್ಥನವೆಂಬ ಸಪ್ತಮೋಲ್ಲಾಸವು ಮುಗಿದುದು.

## VIII

### ಅದ್ವೈತತತ್ವದ ಗೀತಾತಿಕ್ರಮಣ ಪ್ರದರ್ಶನವು.

ಸಪಾದ ಲಕ್ಷಾತ್ಮಕವಾದ ಶಂಕರ ಭಗವತ್ಪಾದರ ಗ್ರಂಥಗಳೆಲ್ಲವೂ ಅರಣ್ಯರೋದನೆಗೆ ತುಲ್ಯರಾಗಿರುವುದು. ಯಾತಕ್ಕೆಂದರೆ ಅವುಗಳು ಐಕ್ಯವಾದಕ್ಕೂ ಮಾಯಾವಾದಕ್ಕೂ ಸುತರಾಂ ದ್ವೇಷಿಯಾದ ಶ್ರೀಕೃಷ್ಣನ ವಾಗ್ವಜ್ರಗಳಿಂದ ಖಂಡಿಸಲ್ಪಟ್ಟಿರುವುದು.

ಪೂರ್ವೋಕ್ತ ರೀತಿಯಲ್ಲಿ ಬೌದ್ಧರ ವಿಜಯವೂ, ಸೂತ್ರಕಾರರ ಪರಾಭವವೂ ಆಗಿಹೋಯಿತು. ಇಲ್ಲಿಗೆ ಈ ಯುದ್ಧದಲ್ಲಿ ಹೊಡೆದಾಡಿ ಶಂಕರಾಚಾರ್ಯರಿಗೆ ಸ್ವಲ್ಪದಣಿವು ಬಂದಿತ್ತು. ಈ ಮಧ್ಯೇ ಕಾಮಶಾಸ್ತ್ರದ ಜ್ಞಾನವನ್ನು ಸಂಪಾದಿಸುವುದಕ್ಕೋಸ್ಕರ, ತಮ್ಮ ಯೋಗಾಭ್ಯಾಸದ ಬಲದಿಂದ ಪರಕಾಯ ಪ್ರವೇಶವನ್ನು ಮಾಡಿದ್ದರು. ಇಷ್ಟಾದರೂ ಅಳ್ಳಾಡದ ಮೋಟುಮರದಂತೆ ಒಬ್ಬ ಪೆಡಂಭೂತ ಶತ್ರುವು ಉಳಿದುಹೋದನು. ಇವನೀಗ ಐಕ್ಯವಾದಕ್ಕೂ ಪುರಾತನವಾದ ಮಾಯಾವಾದದ ಪ್ರಬಲದ್ವೇಷಿಯು. ಇವನು ಯೋಗೇಶ್ವರೇಶ್ವರನು. ಅವನು ದೇವಪಕ್ಷಪಾತಿಯಾದ ವೈದಿಕಮತ ಪ್ರವರ್ತಕನಾದ ಶ್ರೀಕೃಷ್ಣನು. ಗೋಕುಲದ ಹಾಲು, ಬೆಣ್ಣೆ, ತುಪ್ಪ ಮುಂತಾದುವುಗಳನ್ನು ತಿಂದುತಿಂದು ಕೃಷ್ಣನು ಕೊಬ್ಬಿದ್ದನು. ಗೋಪಿಕಾ ಕ್ರೀಡಾಗಳಿಂದಲೂ, ಬಲರಾಮಾದಿಗಳಿಂದ ಸಹಿತವಾಗಿ ಅಭ್ಯಾಸಮಾಡಿದ ಗರಡಿಯಿಂದಲೂ ಪುಷ್ಟನಾಗಿದ್ದನು. ಶಂಕರಾಚಾರ್ಯರು ಯುದ್ಧಮಾಡಿಮಾಡಿ ಕಂಗೆಟ್ಟದ್ದರು. ಆದರೂ ಅವರು ಒಂದು ದಮ್ ಕಟ್ಟಿಕೃಷ್ಣನ ಮೇಲೆ ಬಿದ್ದರು. "Like unto a dying lion" or " like a fallen hero" ಎಂದು ಇಂಗ್ಲೀಷ್‌ನಲ್ಲಿ ಹೇಳಿರುವ ಮೇರೆ, ತಮ್ಮ ಪರಾಕ್ರಮವನ್ನೆಲ್ಲಾ ಎರಡು ಕೈ ತುದಿಗಳಲ್ಲಿತುಂಬಿ ಒಂದು ಗುದ್ದು ಹೊಡೆದರು. ಇದು ಮಾಧ್ವವಾಕ್ಯಾರ್ಥವೆಂದು ಅವರಿಗೆ ಮರೆತು ಹೋಗಿತ್ತು. ವಿನಾಶಕಾಲೇ ವಿಪರೀತ ಬುದ್ಧಿಃ ಎಂದರೆ ಪರಾಭವಕಾಲದಲ್ಲಿ ಎಂಥಹವ ನಿಗೂ ಬುದ್ಧಿವಿಸ್ಮೃತಿಯು ಬರುವುದು. ಪರಿಣಾಮವೇನಾಯಿತು? ಚಾಣೂರನ ಅಶನಿಘಾತದಂಥಾ ಗುದ್ದನ್ನುತಡೆದ ವಜ್ರಶರೀರ ನಾದ, ತಿಂದು ತೇಗಿದ್ದಕೃಷ್ಣನು ಇದರಿಂದ ಒಂದು ಇಂಚೂ ಅಳ್ಳಾಡಲಿಲ್ಲ. ಹಿಮಾಚಲದಂತೆ ನಿಶ್ಚಲನಾಗಿ ನಿಂತು ಬಿಟ್ಟನು. ಶಂಕರಾಚಾರ್ಯರಿಗೆ ತಮ್ಮ ಗುದ್ದಿನಿಂದ ತಮ್ಮ ಕೈಯೇ ಮುರಿದು ಹೋಯಿತು. ಅವರು ಬಿದ್ದರು, ಮೂರ್ಛಿತರಾದರು. ಪಟಿಂಗ ಕೃಷ್ಣನು ಒರೆಸಿಬಿಟ್ಟನು. ಅದ್ವೈತತತ್ವವು ವಿಲೀನವಾಗಿ ಹೋಯಿತು.

ಇದು ತಾತ್ಪರ್ಯವು. ಸಕಲಶಾಸ್ತ್ರಗಳಿಗೂ ಐಕ್ಯಪರವಾಗಿ ಅರ್ಥವನ್ನುಜೋಡಿಸಿ, ಅರ್ಥವನ್ನು ತೂರಿಸಿ ಕೃಷ್ಣಗೀತೆಗೂ ಅದೇ ಕೆಲಸವನ್ನು ಮಾಡಬೇಕೆಂದು ಗೀತಾಭಾಷ್ಯವನ್ನುಶಂಕರಾಚಾರ್ಯರು ಬರೆದರು. ಕೃಷ್ಣನ ಮೊದಲೇ ಬಂದೋಬಸ್ತುಮಾಡಿದ್ದನು. ಶಂಕರಾಚಾರ್ಯರಿಗೆ ಅಷ್ಟು ಸಾವಕಾಶವಿರಲಿಲ್ಲ. ಅವರ ಗೀತಾರ್ಥವು ದುರರ್ಥವಾಯಿತು.

(1) ಕೃಷ್ಣನು ಸಕಲ ಮುಮುಕ್ಷುಗಳೂ ಕರ್ಮವನ್ನು ಮಾಡಬೇಕೆಂದು ಹೇಳಿದನು. ''ನಿಯತಂ ಕುರು ಕರ್ಮತ್ವಂ॥ ''--3.8

ಶಂಕರಾಚಾರ್ಯರಾದರೋ, ''ಮುಮುಕ್ಷೋಃ ಕರ್ಮಸಂನ್ಯಾಸ ವಿಧಾನಾತ್'' ಎಂದು ನಿಯತಕರ್ಮವನ್ನು ಸರ್ವಮುಮುಕ್ಷುಗಳೂ ಪರಿತ್ಯಾಗಮಾಡಬೇಕೆಂದು ಹೇಳಿದರು.

(2) ಕೃಷ್ಣನು ನಾನೇ ಸರ್ವೋತ್ತಮನು, ಜಗದಾಧಾರನು, ಮೋಕ್ಷಪ್ರದನು ಎಂದು ಹೇಳಿದನು.

''ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ। ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥ ಮತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ॥''

ಶಂಕರಾಚಾರ್ಯರು ನೀನು (ಕೃಷ್ಣನು) ಮೊದಲಾದವರೆಲ್ಲಾ ನಿರ್ಜೀವ ದೇಹಗಳು, ಮಿಥ್ಯಾ, ಐಕ್ಯಾನುಭವವೇ ಮುಕ್ತಿಯು ಎಂದು ಹೇಳಿದರು.

(3) ಕೃಷ್ಣನು ಜೀವ ಪರಮಾತ್ಮರು ಭಿನ್ನರೆಂದು ಹೇಳಿದನು. '' ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ।''

ಶಂಕರಾಚಾರ್ಯರು ನಾನೇ ಬ್ರಹ್ಮನು; ಜೀವಬ್ರಹ್ಮ ಭೇದವು ಮಿಥ್ಯಾ ಎಂದು ಹೇಳಿದರು:- ''ವಿಧಿರಹಮಸ್ಮಿಹರೋಸ್ಮ್ಯಹಂ ಹರಿರಹಮಸ್ಮಿ ಕಾರಣಂ ತೇಷಾಂ॥''

(4) ಕೃಷ್ಣನು ''ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ'' ಎಂದು ಶಾಶ್ವತ ಸುಖದ ಅನುಭವವು ಮುಕ್ತಿಯು ಎಂದು ಹೇಳಿದನು. ಶಂಕರಾಚಾರ್ಯರು 'ನಾನು' ಎಂಬ ಜೀವಭಾವವದ ನಾಶವು ಮುಕ್ತಿಯು ಎಂದು ಹೇಳಿದರು. ವ್ಯಾಸರನ್ನು ಪಲ್ಟಿ ಹೊಡೆಯಿಸುವುದಕ್ಕೆ

ಯತ್ನಮಾಡಿದಂತೆ. ಕೃಷ್ಣನನ್ನೂ ಪಲ್ಟಿಹೊಡೆಸುವುದಕ್ಕೆ ಯತ್ನಮಾಡಿದರು. ಆದರೆ ಏನುಮಾಡುವುದು? ನಾವು ಕಾರಣಗಳನ್ನು ನಿರೂಪಿಸಿರುತ್ತೇವಷ್ಟೇ? ಅಂತೂ ಇಂತೂ ಶಾಂಕರಗೀತಾಭಾಷ್ಯವು ಒಬ್ಬರಿಂದಲೂ ಆದೃತವಾಗಲಿಲ್ಲ. ಜನರೆಲ್ಲರು ಕೃಷ್ಣನು ದ್ವೈತಿಯೆಂದೇ ತಿಳಿದುಬಿಟ್ಟರು. ಕರ್ಮಮಾಡಬೇಕೆಂದೇ ಒಪ್ಪಿಬಿಟ್ಟರು. ಜಗತ್ತು ಸತ್ಯವೆಂತಲೇ ನಂಬಿಬಿಟ್ಟರು. ಇದಕ್ಕೆ ವಿಶೇಷ ಸಮ್ಮತಿಗಳು:--

(1) The keynote of the religion of Gita is not non-activity, but the right activity according to the injuctions of scriptures(Dharma), having as its opposite Adharma.

(2) Many scholars agree that the Bhagavdgita is a Moksha Shastra produced in a Vaishnava church descended from the Katha Upanishad ------ Paul Yevtic, B.Litt; Ph.D

(3) It can easily be seen that ..... such a work as the Gita would naturally give encourage ment to dualistic tendencies ------- W.S.Urquhart, M.A. D.Litt

(4) Shankara's Gita Bhashya or commentary on the Bhagavadgita is rather an independent religio-philosophic treatise than a commentary in the strict sense. From the Gita, he tries to adduce proofs for his own doctrine...................

A.A. Macdonnel, Emritus Professor of
Sanskrit in the University of Oxford.

ಶ್ರೀಕೃಷ್ಣನು ಅಭೇದೋಪಾಸನೆಯನ್ನೂ, ಜಗನ್ಮಿಥ್ಯಾತ್ವವಾದವನ್ನೂ, ಭಾವಿ ಅನರ್ಥಫಲಗಳನ್ನೂ ಹೇಳುವುದರ ಮೂಲಕ ನಿರಾಕರಿಸಿರುತ್ತಾನೆ. :-(ಪುಟ 43. ದ್ವೈತಸಿದ್ಧಾಂತ ವಿಚಾರ)

''ಈಶ್ವರೋಹಮಹಂ ಭೋಗೀಸಿದ್ಧೋಹಂ ಬಲವಾನ್ ಸುಖೀ। ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಂ॥
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್। ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವಯೋನಿಷು॥
ಆಸುರೀಯೋನಿಮಾಪನ್ನಾ ಮೂಢಾ ಜನ್ಮವಿಜನ್ಮನೀ। ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ॥

ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅದ್ವೈತತತ್ವದ ಗೀತಾತಿಕ್ರಮಣ ಪ್ರದರ್ಶನವೆಂಬ
ಅಷ್ಟಮೋಲ್ಲಾಸವು ಮುಗಿದುದು.

## IX ಅದ್ವೈತತತ್ವದ ಪರಮನಾಸ್ತಿಕತ್ವ ಪ್ರದರ್ಶನವು

ಸುಧಾಕರ ಪತ್ರಿಕೆಯಲ್ಲಿ ಶಂಕರಾಚಾರ್ಯರ ಅದ್ವೈತವಾದವು ಪರಮನಾಸ್ತಿಕವಾದವೆಂದು ಕರೆಯಲ್ಪಟ್ಟಿರುವುದು. ಇದು ಸರಿಯೇ. ಹೇಗೆಂದರೆ, ಸ್ವರ್ಗನರಕಗಳು ಇರುವುದಿಲ್ಲ; ವೇದವು ಪ್ರಮಾಣವಲ್ಲ. ಇಷ್ಟು ಹೇಳುವ ಚಾರ್ವಾಕಾದಿಗಳು ನಾಸ್ತಿಕರೆಂದು ಸರ್ವಸಮ್ಮತರಾಗಿರುತ್ತದೆ.

ಶಂಕರಾಚಾರ್ಯರಾದರೋ,

(1) ಸ್ವರ್ಗವು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

(2) ವೇದವು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

(3) ಸ್ವರ್ಗಸಾಧನವಾದ ಕರ್ಮಾದಿಗಳು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

(4) ದುಷ್ಕರ್ಮಫಲವಾದ ನರಕವು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

(5) ಸತ್ಕರ್ಮಾದಿಸಾಧನಗಳಾದ ಯಜ್ಞಶಾಲೆ, ಬ್ರಾಹ್ಮಣ್ಯಾದಿ ವರ್ಣಗಳು , ಸ್ರುಕ್, ಸ್ರುವಾದಿ ಉಪಕರಣ ಸಾಮಗ್ರಿಗಳು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

(6) ನಮ್ಮ ದೇಹವೇ ಮೊದಲುಗೊಂಡು ವಿಷ್ಣು, ಬ್ರಹ್ಮ, ರುದ್ರ , ವಿಯದಾದಿ ಸಕಲ ಪ್ರಪಂಚವೂ ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ;

ಎಂದು ಹೇಳಿದರು. ಪ್ರಪಂಚದ ಗತಿ ಹೀಗಾಯಿತು.

ಪರಬ್ರಹ್ಮನು ಇದ್ದಾನೆ ಎಂದಾದರೂ ಹೇಳುವರೇ? ಅದೂ ಇಲ್ಲ.

(7) ಪರಬ್ರಹ್ಮನು ಅಜ್ಞೇಯನು. ಅವನ ದರ್ಶನಾದಿಗಳು ಆಗಲಾರವು; ಅವನು ಬ್ರಹ್ಮವಿಚಾರಕ್ಕೂ ವಿಷಯನಾಗುವುದಿಲ್ಲ, ನಾವು

''ಬ್ರಹ್ಮಜಿಜ್ಞಾಸಾ'' ಇತ್ಯಾದಿ ಪದಕದಂಬಗಳಲ್ಲಿ ವ್ಯವಹರಿಸುವ ಬ್ರಹ್ಮನು ಶುದ್ಧಬ್ರಹ್ಮನಲ್ಲ. ಇವನು ಅಶುದ್ಧಸಗುಣಬ್ರಹ್ಮನು. ''ಶುದ್ಧ ಬ್ರಹ್ಮನು'' ಎಂದು ಹೇಳಲ್ಪಡುವವನೂ ಸಹ ಸ್ವಲ್ಪ ಅಶುದ್ಧನೇ. ಚಿನ್ಮಾತ್ರನಿರ್ಗುಣ ನಾನಾ ಬ್ರಹ್ಮವಿಷಯಕವಾದ ಅಭಿಲಪನಾದಿ ವ್ಯವಹಾರಗಳಾಗಲೀ, ವಿಚಾರರೂಪವಾದ ಜ್ಞಾನಕಲಹವಾಗಲೀ ಅಸಂಭಾವಿತವು. ಶುದ್ಧಬ್ರಹ್ಮನಿಗೆ ಸತ್ತಾ ಎಂದರೆ ಇರೋಣವೆಂಬ ಗುಣವೂ ಇರುವುದಿಲ್ಲ. ಅದ್ವೈತಿಗಳು ಆರು ಪ್ರಮಾಣಗಳನ್ನು ಒಪ್ಪಿರುತ್ತಾರೆ. ವೇದದಿಂದ ಸಹಿತವಾದ ಈ ಆರು ಪ್ರಮಾಣಗ ಳಿಂದಲೂ ಅವನು ಪ್ರತಿಪಾದ್ಯನಲ್ಲ. ಏಳನೆಯ ಪ್ರಮಾಣವನ್ನು ಅದ್ವೈತಿಗಳು ಒಪ್ಪಿರುವುದಿಲ್ಲ.

(8) ಮುಕ್ತಿಯೂ ಇಂಥಾ ಕುರುಡು ಮುರುಡು ಪದಾರ್ಥವೇ. ಮುಕ್ತಿಯು ನಮ್ಮ ಸಾಧನದಿಂದ ಮುಂದೆ ಬರತಕ್ಕ ಒಂದು ಸುಖವಿಶೇಷವು ಎಂದು ಶಂಕರಾಚಾರ್ಯರು ಹೇಳುವುದಿಲ್ಲ. ಮುಕ್ತಿಯು ಬ್ರಹ್ಮಸ್ವರೂಪನಾದುದರಿಂದ, ಮುಕ್ತಿಯು ಹಿಂದೂ ಇತ್ತು, ಈಗಲೂ ಇರುವುದು, ಮುಂದೂ ಇರುವುದು. ಮುಕ್ತಿಗೋಸ್ಕರ ಪ್ರಯತ್ನಾದಿಗಳು ವ್ಯರ್ಥವು. ಜೀವ ವಿವಕ್ಷೆಯಿಂದ ಮುಕ್ತಿಯನ್ನು ವರ್ಣನೆ ಮಾಡಿದರೆ, ಆತ್ಮನಾಶವು ಮುಕ್ತಿಯು. ''ಅಹಂ'' ''ನಾನು'' ''ನಾನು'' ಎಂಬ ಜೀವಭಾವದ ನಾಶವು ಮುಕ್ತಿಯು. ತನ್ನನಾಶವು ತನಗೆ ಮುಕ್ತಿಯು ಎಂದು ಪ್ರಾಪ್ತವಾಯಿತು.

ಪರಿಣಾಮವೇನಾಯಿತೆಂದರೆ, ಪರಬ್ರಹ್ಮನು ಶಶವಿಷಾಣಪ್ರಾಯನಾದನು. ಅವನು ನಮ್ಮ ಜ್ಞಾನಕ್ಕೆ ವಿಷಯನಾಗತಕ್ಕವನಲ್ಲ. ಪ್ರಪಂಚವೂ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ. ಮುಕ್ತಿಯು ಪ್ರಯತ್ನದಿಂದ ಪ್ರಾಪ್ಯವಾದ ಸ್ಥಾನವಲ್ಲ. ಅಷ್ಟೇ ಅಲ್ಲ, ಅದು ಆತ್ಮನಾಶಸ್ವರೂಪವಾದುದರಿಂದ ಯಾರಿಂದಲೂ ಅಪೇಕ್ಷಣೀಯವಾದ ಪುರುಷಾರ್ಥವೂ ಅಲ್ಲ.

ಇದರಿಂದ ನಿಶ್ಶಂಕಸ್ವೇಚ್ಛಾಪ್ರವೃತ್ತಿಯು ಉಂಟಾಗುವುದರಲ್ಲಿ ಸಂದೇಹವೇನು? ಆದರೆ ಒಂದು ಚಮತ್ಕಾರವು ನಡೆದಿರುವುದು. ವಿಧವಾ ವಿವಾಹವು ಧರ್ಮವು ಎಂದು ಕೆಲವು ಜನರು ಪ್ರತಿಪಾದನೆ ಮಾಡುವರು. ಆದರೆ ತಾವು ಮಾತ್ರ ವಿಧವೆಯನ್ನು ವಿವಾಹ ಮಾಡಿಕೊಳ್ಳುವುದಿಲ್ಲ. ಇಂಥಾ ಧರ್ಮಹೇಡಿಗಳು ಲೋಕದಲ್ಲಿ ಎಷ್ಟೋ ಜನರಿರುವರು. ಹಾಗೆಯೇ ದೇವರ ದಯದಿಂದ, ಜಗತ್ತು ಪ್ರವೃತ್ತಿಗೆ ಯೋಗ್ಯವಲ್ಲ, ಧರ್ಮಾದಿಗಳು ಮಿಥ್ಯಾ, ಕರ್ಮಸನ್ಯಾಸವು ಉಚಿತವು ಇತ್ಯಾದಿ ರೀತಿಯಾಗಿ ಅದ್ವೈತಿಗಳು ಪರಮನಾಸ್ತಿಕ ತತ್ವವನ್ನು ಉಪಪಾದಿಸಿ ಹೇಳಿದರೂ, ವೇದೋಕ್ತ ಕರ್ಮಗಳನ್ನು ಸಾಧ್ಯವಾದಷ್ಟು ಮಾಡುತ್ತಲೇ, ಮಡಿ ಮಡಿ ಎಂದು ಹಾರಾಡುತ್ತಲೇ ಇರುವರು. ಆದರೆ ಕರ್ಮಾಚರಣೆಗೆ ಸ್ವಲ್ಪ ಕಷ್ಟವು ಸಂಭವಿಸಿದರೆ, ತತ್ವಾನುಸಂಧಾನವು ಪ್ರಾಪ್ತವಾಗಿ ಕರ್ಮದ ನಿರರ್ಥಕತೆಯು ತೋರಿ ಕರ್ಮಭ್ರಂಶದಿಂದ ದುಃಖವು ಹುಟ್ಟುವ ಹಾಗಿಲ್ಲ. ಅದ್ವೈತಿಗಳು ಕರ್ಮಮಾಡುವುದು ಅವರ ತತ್ವವಿರೋಧರೂಪವಾದುದು. ಶಂಕರಾಚಾರ್ಯರ ಉಪದೇಶದಲ್ಲಿ ನಂಬಿಕೆ ಇಲ್ಲದಿದ್ದರೆ, ಕರ್ಮದಲ್ಲಿ ಪ್ರವೃತ್ತಿಯು ಸಂಭವಿಸುವುದು. ಗುರೂಪದೇಶವನ್ನು ನಂಬಿ ಜಗತ್ತು ಮೊದಲಾದುವುಗಳು ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರಲಿಲ್ಲ, ಎಂದು ತಿಳಿದು ಕರ್ಮಮಾರ್ಗದಲ್ಲಿ ಪ್ರವರ್ತಿಸುವುದು ಒಂದು ವಿಧವಾದ ಹೇಡಿತನವೇ ಸರಿ.

1) ಅದ್ವೈತಾರ್ಥವಾದ ವಾದದಲ್ಲಿ ಬಹಳ ಜುಗುಪ್ಸೆಯನ್ನು ಹೊಂದಿ ಸುಪ್ರಸಿದ್ಧನಾದ ಬೋಸ್ ನಾಮಕ ಗ್ರಂಥಕರ್ತನು, ಹಿಂದೂ ತತ್ವವು ಅದ್ವೈತವು ಒಂದೇ ಎಂದು ಭ್ರಮಿಸಿ, ಹೀಗೆ ಬರೆದಿರುತ್ತಾನೆ.

"Hindu Philosophy is pessimism. It begins with a recognition of human sorrow, goes out in vain in quest of a proper remedy and ultimately arrives at annihilation as the goal where human misery terminates only in the extinction of life --- Hindu Philosophy--- Bose.

(2) It must be clear to everyone who has mastered the framework of the true Vedanta philosphy, as I have tried to explain it, that there is really but little room in it for Psychology , or Cosmology, may even for Ethics ----------- F. Max Muller, K.M.

(3) "The new school (Advaita Philosophy) calls the whole universe, in fact all that it is visible and perceptible-Maya(illusion) in the sense that it never existed, does not exist now, and never exists.

(4) His Maya is inexplicable. It is the arguement of one in darkness himself. This new vedantic thought has done and is doing more harm to the world than any other religious theory. It is a worse delusion than the delusion of Maya------- Edward B. Warman, M.A.

ಈ ವಿಷಯದಲ್ಲಿ ಪರ್ಯಾಲೋಚನೆಯಿಂದ, ಅದ್ವೈತ ತತ್ವವನ್ನು ಅವಲಂಬಿಸಿದವರು ಸತ್ಯವಂತರಾದರೆ ಸ್ಥಾಣುವಂತೆ

ಅಚಲಭಾವವನ್ನು ಪಡೆದವರಾಗಿ ಕರ್ಮಾದಿಗಳ ಪರಿತ್ಯಾಗ ಮಾಡಬೇಕು. ತತ್ವವನ್ನು ಒಪ್ಪಿಕೊಂಡು ಕರ್ಮಾದಿಗಳಲ್ಲಿ ಪ್ರವೃತ್ತರಾಗುವುದು ಜ್ಞಾನಮಾರ್ಗದ ಹೇಡಿತನವನ್ನು ಅಥವಾ ಗುರುವಾಕ್ಯದಲ್ಲಿ ದೃಢತರವಾದ ವಿಶ್ವಾಸಾಭಾವವನ್ನು ಪ್ರದರ್ಶಿಸುತ್ತದೆ. ಚಾರ್ವಾಕನು ಧರ್ಮಾದಿ ಅತೀಂದ್ರಿಯ ಪದಾರ್ಥಗಳು ಇರುವುವೆಂದು ತಿಳಿಯುವ ಜ್ಞಾನವು ಭ್ರಮವು ಎಂದು ಹೇಳಿದ್ದನು. ಅಷ್ಟಕ್ಕೇ ನಾವೆಲ್ಲರೂ ಅವನನ್ನು ಅಪಹಾಸ ಮಾಡಿದೆವು. ಶಂಕರಾಚಾರ್ಯರು ಈಶ್ವರನು, ವೇದವು, ಸ್ವರ್ಗ ನರಕಗಳು, ಘಟಪಟಾದಿ ಪ್ರತ್ಯಕ್ಷಸಿದ್ಧವಾದ ಜಗತ್ತು ಇವುಗಳು ಇರುವುವೆಂದು ತಿಳಿಯುವ ಎಲ್ಲಾ ಜ್ಞಾನವೂ ಭ್ರಮವು ಎಂದು ನಿಶ್ಶಂಕವಾಗಿ ಹೇಳಿಬಿಟ್ಟರು. ಯಾವುದೂ ವಸ್ತುತಃ ಇಲ್ಲವೇ ಇಲ್ಲ. ಎಲ್ಲವೂ ಶುಕ್ತಿರಜತದಂತೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ. ಕಣ್ಣಿಗೆ ಕಾಣುತ್ತಿರುವುದು ಸಹ ಸುಳ್ಳು ಎಂದು ವಾದಿಸಿದ ಶಂಕರಾಚಾರ್ಯರ ಪರಾಕ್ರಮವು ಶ್ಲಾಘನೀಯತಮವೇ ಸರಿ. ತತ್ವಾಪಲಾಪಗಳಿಗೆ ಮತ್ತು ಪ್ರಮಾಣಾತಿಕ್ರಮಕ್ಕೆ ಇದಕ್ಕಿಂತ ಅಧಿಕವಾದ ದೃಷ್ಟಾಂತವು ಹಿಂದೆ ಇರಲಿಲ್ಲ ಈಗ ಇಲ್ಲ, ಮುಂದೂ ಇರುವುದಿಲ್ಲ , ಹಿಂದೆ ಇರಲಿಲ್ಲ ಎಂದು ನಾವು ಬರೆದವು. ಅದು ಕೈ ಮೀರಿದ ಬರವಣಿಗೆಯು ; ಯಾತಕ್ಕೆಂದರೆ, ಪ್ರಸಿದ್ಧನಾದ ಬೌದ್ಧನು ಭ್ರಾತೃಭಾವದಿಂದ ಅದೇ ಕೆಲಸವನ್ನು ಮಾಡಿರುವನು. ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅದ್ವೈತತತ್ವದ ಪರಮ ನಾಸ್ತಿಕತ್ವ ಪ್ರದರ್ಶನವೆಂಬ ನವಮೋಲ್ಲಾಸವು ಮುಗಿದುದು.

## X ಅದ್ವೈತವಾದದ ಕಾಪಟ್ಯ ಪ್ರದರ್ಶನವು

''ಕ್ರಕಚಮಿವ ಸತಾಂ ಚೇತಸಃ ಕಷ್ಟಶಾಸ್ತ್ರಂ'' ಎಂದು ಪ್ರಾಚೀನ ಕವಿಗಳು ಅದ್ವೈತ ತತ್ತ್ವೋಪಪಾದನೆಯ ಕ್ರಮವನ್ನು ಕುರಿತು ವರ್ಣಿಸಿರುವರು. ಅದ್ವೈತವು ಸತ್ಪುರುಷರ ಮನಸ್ಸುಗಳನ್ನು ಗರಗಸದಂತೆ ಕುಯ್ಯತಕ್ಕ ಅಪ್ರಾಮಾಣಿಕವಾದ ಶಾಸ್ತ್ರವೆಂದು ಅರ್ಥವು. ಅದ್ವೈತ ತತ್ತ್ವೋಪಪಾದನೆಯಲ್ಲಿ ಶಂಕರಾಚಾರ್ಯರು ಮಾಡಿರುವಷ್ಟು ವಂಚನೋಪಾಯಗಳನ್ನು ಗೋಕುಲದಲ್ಲಿ ಕಳ್ಳ ಕೃಷ್ಣನು ಮಾಡಲಿಲ್ಲ. ಪ್ರಸಿದ್ಧ ಚೋರನಾದ ಶ್ರೀಕೃಷ್ಣನ ಮೋಸವು 'ಕರ್ಮಮಾರ್ಗದ ವಂಚನೆ' (ಕರ್ಮಮಾರ್ಗವೆಂಬ ವಂಚನೆ) ಯು. ಅದು ಪರಿಣಾಮದಲ್ಲಿ ಭಕ್ತರ ಕಷ್ಟಪರಿಹಾರಕ್ಕೆ ಕಾರಣವಾಯಿತು. ಜ್ಞಾನಮಾರ್ಗದ ಶಂಕರಾಚಾರ್ಯರ ವಂಚನೆ ಯು ಅಜ್ಞಾನ ಗಾಢಾಂಧಕಾರಕ್ಕೆ ಕಾರಣವಾಗುವುದರಿಂದ, ಪರಿಣಾಮದಲ್ಲಿ ಕಷ್ಟಪ್ರಾಪ್ತಿಗೇ ಕಾರಣವಾಗುವುದೆಂದು ಅನೇಕ ಶ್ರುತಿಸ್ಮೃತಿ ಇತಿಹಾಸ ಪುರಾಣಗಳು ಪುನಃ ಪುನಃ ಹೇಳುವುವು. ದೃಷ್ಟಾಂತರೂಪದಿಂದ ಕೆಲವು ಭಂಗಾರದ ತುಂಡುಗಳನ್ನು ಒರೆಹಚ್ಚಿನೋಡೋಣ.

(1) ನಿರ್ಗುಣಬ್ರಹ್ಮನು ನಿಷ್ಕ್ರಿಯನು ಅಜ್ಞೇಯನು. ಅವನಿಗೆ ಯಾವ ಲಕ್ಷಣಗಳನ್ನೂ ಹೇಳಲಾಗುವುದಿಲ್ಲ. ಯಾವ ಪ್ರಮಾಣಗ ಳಿಂದಲೂ ಅವನು ಪ್ರತಿಪಾದ್ಯನಲ್ಲ. ''ಲಕ್ಷಣಪ್ರಮಾಣಾಭ್ಯಾಂ ಹಿ ವಸ್ತು ನಿರ್ಣಯಃ''. ಒಂದು ವಸ್ತುವು ಇರುವುದೆಂದು ತಿಳಿಯ ಬೇಕಾದರೆ ಅದರ ಲಕ್ಷಣಗಳಿಂದಲೂ ಅದನ್ನು ಪ್ರತಿಪಾದನೆ ಮಾಡುವ ಪ್ರಮಾಣಗಳಿಂದಲೂ ತಿಳಿಯಬೇಕು. ಅದ್ವೈತಮತದಲ್ಲಿ ಲಕ್ಷಣ ಪ್ರಮಾಣಗಳ ಸಮನ್ವಯಕ್ಕೆ ಅವಕಾಶವಿಲ್ಲವಾದುದರಿಂದ, ಮೌನವೇ ಉಚಿತವೆಂದು ಶಂಕೆಯು ಬರುವುದು. ಶಂಕರಾ ಚಾರ್ಯರೂ ಒಂದೊಂದು ಸಾರಿ ಸ್ಪಷ್ಟವಾಗಿ ತಾವೂ ಹಾಗೆಯೇ ಹೇಳುವರು. ಅವರ ಬ್ರಹ್ಮಸೂತ್ರಭಾಷ್ಯದಲ್ಲಿ ಶಂಕರಾಚಾರ್ಯರು ಬ್ರಹ್ಮವಿಷಯಕ ಪ್ರಶ್ನೆಗಳನ್ನು ಶಿಷ್ಯನು ಕೇಳಿದಾಗ ''ಸ ತೂಷ್ಣೀಂ ಬಭೂವ'' ಎಂದರೆ ಗುರುಗಳು ಮೌನವನ್ನು ಈ ಕಾರಣಗಳಿಂದಲೇ ಧರಿಸಿದರೆಂದು ಬರೆದುಬಿಟ್ಟರು.

ಹೀಗೆ ಹೇಳಿದ ಭಗವತ್ಪಾದರೇ ಸಪಾದ ಲಕ್ಷಗ್ರಂಥವನ್ನು ಬರೆದರು. ಈ ಗ್ರಂಥಗಳನ್ನು ಬ್ರಹ್ಮಜ್ಞಾನವನ್ನು ಹುಟ್ಟಿಸುವುದ ಕ್ಕೋಸ್ಕರವಷ್ಟೇ ಬರೆದರು. ಇವರ ಆಚರಣೆಯಿಂದ ಸಜ್ಜನರಿಗೆ ಸಂದೇಹವು ಬಂದು ಯಥಾರ್ಥಾನ್ವೇಷಿಗಳಿಗೆ ಬಹು ಕಷ್ಟವಾಗು ವುದು. ಬ್ರಹ್ಮನು ಅಜ್ಞೇಯನೆಂದು ಹೇಳಿ ಬ್ರಹ್ಮ ವಿಚಾರಕ್ಕೆ ಹೊರಟಿರುವುದು ಮೊದಲನೆಯ ವಂಚನೆಯು.

(2) ಬ್ರಹ್ಮಜ್ಞಾನವನ್ನು ಶಾಸ್ತ್ರವು ಹುಟ್ಟಿಸುವುದೇ ಇಲ್ಲವೆಂದು ಅದ್ವೈತಿಗಳು ಕೆಲವು ಕಡೆ ಹೇಳಿರುತ್ತಾರೆ. ಹಾಗಿದ್ದರೆ ಸಪಾದ ಲಕ್ಷಗ್ರಂಥ ಗಳನ್ನು ಬರೆದುದು ಯಾತಕ್ಕೆ? ಬೀದಿಯ ಕಸವನ್ನು ಗುಡಿಸುವುದಕ್ಕೋಸ್ಕರ ಬರೆದಿದ್ದು ಎಂದು ಹೇಳುವರು; ಎಂದರೆ ಬ್ರಹ್ಮವಿಷಯಕ ಅಜ್ಞಾನ ನಿವೃತ್ತಿಗೋಸ್ಕರ ಬರೆದದ್ದು, ಬ್ರಹ್ಮಜ್ಞಾನವನ್ನು ಹುಟ್ಟಿಸುವ ಉದ್ದಿಶ್ಯವಲ್ಲ ಎಂದು ಹೇಳಿ ಎರಡನೇ ಸಾರಿ ಮಂಕುಬೂದಿ ಎರಚಿರುತ್ತಾರೆ.

ಬ್ರಹ್ಮವಿಷಯಕ ಜ್ಞಾನದಿಂದಲೇ ಬ್ರಹ್ಮವಿಷಯಕ ಅಜ್ಞಾನವು ನಾಶವಾಗಬೇಕು. ಘಟವಿಷಯಕ ಅಜ್ಞಾನವು ಘಟ ವಿಷಯಕ ಜ್ಞಾನದಿಂದ ನಾಶವಾಗಬೇಕು. ಕುಟುಂಬ ವಿಷಯಕ ಅಜ್ಞಾನವು ಕಾಗದಾದಿಗಳಿಂದ ಕುಟುಂಬ ವಿಷಯಕಜ್ಞಾನೋತ್ಪತ್ತಿಯಾದ ನಂತರವೇ ನಾಶವಾಗಬೇಕು. ಹೀಗೆ, ಬ್ರಹ್ಮನಿಗೆ ವಿಚಾರ ಮಾಡಿದರೆ ಜ್ಞೇಯತ್ವವು ಬಂದೇ ಬರುವುದು. ಶಾಸ್ತ್ರದಲ್ಲೇನೋ ಬ್ರಹ್ಮನು ಅಜ್ಞೇಯನು ಎಂದು ಶಂಕರಾಚಾರ್ಯರೇ ಹೇಳಿಬಿಟ್ಟರು.

(3) ಬ್ರಹ್ಮನು ಜ್ಞೇಯನಾದರೂ ಚಿಂತಿಲ್ಲ ಎಂದು ಕೆಲವು ವೇಳೆ ಶಂಕರಾಚಾರ್ಯರು ಉಪಪಾದಿಸುತ್ತಾರೆ. ಜನರು ಕಕ್ಕುಬೆಕ್ಕಾಗುತ್ತಾರೆ. ಶಂಕರಾಚಾರ್ಯರು ಹೇಳುತ್ತಾರೆ:- ಬ್ರಹ್ಮನು ಅಜ್ಞೇಯನೂ ಹೌದು; ಜ್ಞೇಯನೂ ಹೌದು. ಪರಸ್ಪರ ವಿರೋಧ ಬರುವುದಿಲ್ಲ, ಹೇಗೆಂದರೆ, ಬ್ರಹ್ಮನು ಜ್ಞೇಯನೆಂದರೆ ಆರೋಪಿತಜ್ಞೇಯನೆಂದರ್ಥವು. ಇದನ್ನು ಶ್ರವಣಮಾಡಿದ ಮಂದರು ಇದರಲ್ಲಿ ಏನೋ ಅಗಾಧವಾದ

ಪ್ರಮೇಯವು ಹೂತಿಟ್ಟಿರುವುದು. ಗುರುಗಳ ತಾತ್ಪರ್ಯವು ನಮಗೆ ಗೊತ್ತಾಗಲಿಲ್ಲ. ಅವರು ಬುದ್ಧಿವಂತರು. ನಾವು ಮೂಢರು. ನಮಗೆ ಏನು ತಿಳಿಯುವುದು? ನಾವು ಅವರು ಹೇಳಿದುದನ್ನು ತೆಪ್ಪಗಿರಬೇಕು ಎಂದು ಮನೆಗೆ ಹೋಗುವರು. ವಸ್ತುತಃ ಇದು ದೊಡ್ಡ ವಂಚನೆಯು. ನಿನ್ನ ಪತ್ನಿಯು ಕುರೂಪಿಯು ಎಂದು ಹೇಳಿದರೆ ಸಂಕಟವಾಗುವುದು. ಸೌಂದರ್ಯವುಳ್ಳವಳು ನಿನ್ನ ಪತ್ನಿ ಎಂದು ಹೇಳಿದರೆ ಅದು ವಸ್ತುತತ್ವಾನುಗುಣವಾದುದಲ್ಲ. ಆದುದರಿಂದ ನಿನ್ನ ಪತ್ನಿಯು ಆರೋಪಿತಸುರೂಪವುಳ್ಳವಳು ಎಂದು ನಯದಿಂದ ಹೇಳಿದ ಮಾತಿನಿಂದ ಯಾವ ಪ್ರಾಜ್ಞನಾದರೂ ಆನಂದ ಪಡುವನೇ? ಆರೋಪಿತಜ್ಞೇಯನು=ಸುಳ್ಳುಜ್ಞೇಯನು = ಅಜ್ಞೇಯನು ಎಂದೇ ಅರ್ಥವು.

ಆರೋಪಿತಸೌಂದರ್ಯ=ಸುಳ್ಳುಸೌಂದರ್ಯ=ಕುರೂಪವು ಎಂದೇ ಅರ್ಥವು. ಆದರೆ ಇಷ್ಟು ವಂಚನೆಯನ್ನು ಶಿಷ್ಯನು ಕಂಡುಹಿಡಿಯುವ ಪರಾಕ್ರಮವು ಬರುವ ಹೊತ್ತಿಗೆ ಗುರುಗಳು ಕೇದಾರದ ಗುಹೆಯಲ್ಲಿರುವರು. ಶಿಷ್ಯನು ಸಂಕಟಪಡುವುದೊಂದೇ ಫಲವು. ಇದು ಮೂರನೆಯ ಜ್ಞಾನಮಾರ್ಗದ ವಂಚನೆಯು.

(4) ಹೀಗೆಯೇ ಬ್ರಹ್ಮನು ಅಕ್ರಿಯನು ಎಂದರೆ ಸೃಷ್ಟ್ಯಾದಿಕ್ರಿಯಾರಹಿತನು ಎಂದು ಹೇಳಿರುವರು. ಹಾಗಾದರೆ ಬ್ರಹ್ಮಾತಿರಿಕ್ತ ಚೇತನರೇ ಇಲ್ಲವಾದುದರಿಂದ ಸೃಷ್ಟಿಸ್ಥಿತ್ಯಾದಿಗಳೇ ಕೂಡುವುದಿಲ್ಲವಲ್ಲಾ ಎಂದು ಶಿಷ್ಯನು ಕಷ್ಟಪಡುವನು. ಶಂಕರಾಚಾರ್ಯರು ಬ್ರಹ್ಮನು ಸಕ್ರಿಯನು ''ಜನ್ಮಾದ್ಯಸ್ಯ ಯತಃ'' ಎಂದು ಹೇಳಿರುವುದು; ಬ್ರಹ್ಮನು ಸೃಷ್ಟಿಸ್ಥಿತಿ ಸಂಹಾರಗಳನ್ನು ಮಾಡುವನು ಎಂದು ಹೇಳಿದರು. ಇದನ್ನು ಶ್ರವಣಮಾಡಿದ ಶಿಷ್ಯನಿಗೆ ಮೂರ್ಛೆಯು ಬಂತು. ಶಂಕರಾಚಾರ್ಯರು ಹೇಳುತ್ತಾರೆ:- ಬ್ರಹ್ಮನು ಕ್ರಿಯೆಯುಳ್ಳವನು ಎಂದರೆ ಆರೋಪಿತ ಕ್ರಿಯೆಯನ್ನುಳ್ಳವನು ಎಂದರ್ಥವು. ನಿನ್ನ ಪತ್ನಿಯು ನಿನಗೆ ಆರೋಪಿತ ಸೇವೆಯನ್ನು ಮಾಡುವಳು ಎಂದು ಶ್ರವಣಮಾಡಿದ ಗೃಹಸ್ಥನಿಗೆ ಎಷ್ಟು ಸಂತೋಷವೋ ಬ್ರಹ್ಮನು ಆರೋಪಿತ ಸೃಷ್ಟ್ಯಾದಿಗಳನ್ನು ಮಾಡಿದನೆಂದು ಕೇಳಿದರೂ ಅಷ್ಟೇ ಫಲವು. ವಸ್ತುತಃ ಆರೋಪಿತ ಕ್ರಿಯಾವಂತನು=ಸುಳ್ಳುಕ್ರಿಯಾವಂತನು=ಅಕ್ರಿಯನು. ಆದರೂ ಅಜ್ಞರಿಗೆ ಶಂಕರಾಚಾರ್ಯರು ಒಂದು ವಜ್ರಕೊಟ್ಟಂತೆ ಆನಂದ. ವಸ್ತುತಃ ಅದು ಒಡೆದ ಹೆಂಚಿನ ಚೂರು. ಇದು ನಾಲ್ಕನೆಯ ವಂಚನೆಯು.

(5) ಬ್ರಹ್ಮನು ನಿರ್ಗುಣನು ಎಂದು ಹೇಳಿ ಆ ಮೇಲೆ ಆರೋಪಿತ ಅನಂತಗುಣವುಳ್ಳವನು ಎಂದು ಸಹ ಶಂಕರಾಚಾರ್ಯರು ಹೇಳಿರುತ್ತಾರೆ. ಇಲ್ಲಿಯೂ ಇಂಥಾ ಮೋಸವೇ ನಡೆದಿರುತ್ತದೆ. ನಿನ್ನ ಪತ್ನಿಯು ನಿರ್ಗುಣಳು ಎಂದು ಹೇಳಿ, ನಂತರ ಮನಸ್ಸಮಾಧಾನಾರ್ಥವಾಗಿ, ಆರೋಪಿತ ಬಹುಗುಣಭರಿತಳು ಎಂದು ಹೇಳಿದಂತೆಯೇ ಆಯಿತು. ವಸ್ತುತಃ ಆರೋಪಿತಗುಣವುಳ್ಳ ವನು=ಸುಳ್ಳುಗುಣವುಳ್ಳವನು=ಇಲ್ಲದ ಗುಣವುಳ್ಳವನು=ನಿರ್ಗುಣನು. ಇದು ಐದನೆಯ ವಂಚನೆಯು.

(6) ಸುಳ್ಳು ಎಂಬ ಅರ್ಥವನ್ನು ಸೂಚಿಸುವುದಕ್ಕೆ ಸುಳ್ಳು, ಅನೃತ, ಮೃಷಾ, ಮಿಥ್ಯಾ ಮುಂತಾದ ನಾಲ್ಕೈದು ನಾಮಗಳು ಪ್ರಸಿದ್ಧವಾಗಿ ರುವುವು. ಅದ್ವೈತತತ್ವದಲ್ಲಿ ಶಂಕರಾಚಾರ್ಯರು ಒಂದು ಕೋಶವನ್ನೇ ಕಲ್ಪಿಸಿ ಸಮಯಕ್ಕೆ ಅನುಗುಣವಾಗಿ ಬೇರೆಬೇರೆ ಪರ್ಯಾಯ ಪದಗಳನ್ನು ಪ್ರಯೋಗಮಾಡಿ ಜನರ ಜ್ಞಾನದೃಷ್ಟಿಗೆ ಮಣ್ಣು ಹಾಕುವರು. ಪ್ರಕೃತದಲ್ಲಿ ಬ್ರಹ್ಮನಿಗೆ ಲಕ್ಷಣಗಳು ಯಾವುವು ಎಂಬ ಪ್ರಶ್ನೆಗೆ ಉತ್ತರವೇ ಅದ್ವೈತಮತದಲ್ಲಿ ಅಶಕ್ಯವು; ಸೃಷ್ಟಿಕರ್ತೃತ್ವಾದಿಗಳು ಬ್ರಹ್ಮನ ಲಕ್ಷಣಗಳೆಂದು ಸೂತ್ರಕಾರರು ಹೇಳುತ್ತಾರೆ; ಆದುದರಿಂದ ಬ್ರಹ್ಮನು ನಿರ್ಗುಣನಾಗಲಾರನು ಎಂದು ಖಂಡನೆ ಬರಲು, ಶಂಕರಾಚಾರ್ಯರು ಧೈರ್ಯವಾಗಿ ಒಂದು ಮಾತನ್ನು ಹೇಳಿದರು. ನಮ್ಮ ಬ್ರಹ್ಮನಿಗೆ ಸ್ವರೂಪಲಕ್ಷಣವನ್ನು ಒಪ್ಪಿಕೊಂಡರೆ ನಿರ್ಗುಣತ್ವವು ನಾಶವಾಗುವುದು. ನಾವು ಹಾಗೆ ಹೇಳುವುದಿಲ್ಲ. ಬ್ರಹ್ಮನಿಗೆ ಲಕ್ಷಣಗಳುಂಟು; ಆದರೆ ಅವು ತಟಸ್ಥಲಕ್ಷಣಗಳು ಎಂದು ಹೇಳಿದರು. ತತ್ವಜ್ಞಾನಶೂನ್ಯರಾದ ಮಂಕರು ಇಲ್ಲಿ ಏನೋ ಒಂದು ಪದಕವು ಇರುವುದು. ಪರಬ್ರಹ್ಮನಿಗೆ ಲಕ್ಷಣವನ್ನು ಹೇಳಿದ ಹಾಗೂ ಆಯಿತು, ''ಜನ್ಮಾದ್ಯಸ್ಯಯತಃ'' ಎಂಬ ಸೂತ್ರವೂ ಅನುಕೂಲಿಸಿತು; ಅವನ ಲಕ್ಷಣರಾಹಿತ್ಯವನ್ನೂ ಬಿಟ್ಟ ಹಾಗಾಗಲಿಲ್ಲ ಎಂದು ತಿಳಿದರು. ಇದು ಸುಣ್ಣದ ಹರಳು, ಪದಕವಲ್ಲ. ಬ್ರಹ್ಮನಿಗೆ ಸೃಷ್ಟಿಕರ್ತೃತ್ವಾದಿಗಳು ತಟಸ್ಥಲಕ್ಷಣಗಳು=ಲಕ್ಷ್ಯಸಂಬಂಧವಿಲ್ಲದ ಬಹಿರ್ಭೂತವಾದ ಲಕ್ಷಣಗಳು=ಲಕ್ಷಣಗಳಲ್ಲದ ಲಕ್ಷಣಗಳು= ಲಕ್ಷಣವಿಲ್ಲ ಎಂದು ಅರ್ಥವು. ತಟಸ್ಥಲಕ್ಷಣವು ಉಂಟು ಎಂದರೆ ಲಕ್ಷಣವು ಇರುವುದಿಲ್ಲ ಎಂದು ಶುದ್ಧವಾದ ಅರ್ಥವು. ಇದು ಆರನೆಯ ವಂಚನೆಯು.

(7) ಇದೆಲ್ಲಕ್ಕೂ ಮೀರಿದ ಕಲ್ಪನೆಯೂ ಶಂಕರಾಚಾರ್ಯರಿಗೆ ತಿಳಿದಿರುವುದು. ಬ್ರಹ್ಮನು ಒಬ್ಬನೇ ಸತ್ಯನು ಎಂಬುದು ನಿಮ್ಮ ಮತವು; ಹಾಗಾದರೆ ಜಗತ್ತು ಇಲ್ಲವೇ ಇಲ್ಲ ಎಂದಾಯಿತು; ಎಂದು ದ್ವೈತಿಗಳು ಖಂಡನೆಯನ್ನು ಹೇಳಿದರೆ, ಕೆಲವು ವೇಳೆ ''ಇಲ್ಲವೇ ಇಲ್ಲ! ಇದೆ ಎಂದು ಹೇಳಿದವರು ಯಾರು?'' ಎಂದು ಹೇಳಿಬಿಡುವರು. ಕೆಲವು ವೇಳೆಯಲ್ಲಿ ಅವರ ಮನಸ್ಸಿಗೇ ಅತೃಪ್ತಿಬಂದು, ಈ ರೀತಿ ಸಮಾಧಾನವನ್ನು ಹೇಳುವರು:- ಪಾರಮಾರ್ಥಿಕ ವಿವಕ್ಷೆ, ವ್ಯಾವಹಾರಿಕ ವಿವಕ್ಷೆ (point of view) ಎಂದು ಎರಡು ವಿವಕ್ಷೆಗಳು ಇರುವುವು. ವ್ಯಾವಹಾರಿಕ ವಿವಕ್ಷೆಯಿಂದ ಜಗತ್ತು ಇರುವುದು, ಪಾರಮಾರ್ಥಿಕ ವಿವಕ್ಷೆಯಿಂದ ಜಗತ್ತು ಇಲ್ಲವೆಂದು ಹೇಳಿ, ತಮ್ಮ ಕಲ್ಪನಾಕೌಶಲ್ಯವನ್ನು ನೋಡಿ ಆನಂದದಿಂದ ತಾವೇ ಕುಪ್ಪಳಿಸುವರು. ಇವರ ಅಟ್ಟಹಾಸ, ಧೈರ್ಯದಿಂದ ವಾಕ್ಯೋದ್ಗಿರಣ, ಶೈಲಿಯ ಝೋಕು, ಇವುಗಳನ್ನು ನೋಡಿ, ಆಚಾರ್ಯರು ಏನೋ

ಅಪ್ರತಿಹತವಾದ ವಾಕ್ಯಾರ್ಥವನ್ನು ಹೇಳಿರುತ್ತಾರೆ. ಅದ್ವೈತವು ವೇದಾಂತ ಸಾಮ್ರಾಜ್ಯದಲ್ಲಿ ಸಾರ್ವಭೌಮ ಪದವಿಯನ್ನು ಹೊಂದಿತು ಎಂದು ಮಂಕು ಜನಗಳು ಮೋಸಹೋಗುವರು. ಸಕಲ ಅದ್ವೈತ ಪಂಡಿತರೂ ಈ ಉಪದೇಶದಲ್ಲಿ ಸಕಲ ತತ್ವಗಳೂ ಗರ್ಭೀಕೃತವಾಗಿವೆ ಎಂದು ತಿಳಿದಿರುತ್ತಾರೆ. ಮಹಾವೃಕ್ಷವು ಅಣುಬೀಜದಲ್ಲಿ ಅಡಗಿರುವಂತೆ, ಸಕಲವೇದಗಳೂ ಪ್ರಣವದಲ್ಲಿ ಅಡಗಿರುವಂತೆ , ಅನಂತ ಕೋಟಿ ಬ್ರಹ್ಮಾಂಡಗಳೂ ದಾಮೋದರನ ಉದರದ ಏಕ ದೇಶದಲ್ಲಿ ಅಡಗಿರುವಂತೆ, ಸಕಲ ಕರ್ಮಫಲವೂ ಜ್ಞಾನಫಲದಲ್ಲಿ ಅಡಗಿರುವಂತೆ, ತತ್ವ ವಿಚಾರದಲ್ಲಿ ಪ್ರಸಕ್ತವಾಗುವ ಸಕಲ ಅನೃತ ಪ್ರವಾಹಗಳೂ ಶಂಕರಾಚಾರ್ಯರ ವ್ಯಾವಹಾರಿಕ ಪಾರಮಾರ್ಥಿಕವೆಂಬ ಭೇದಕಲ್ಪನಾರೂಪವಾದ ಮೃಷಾಸಮುದ್ರದಲ್ಲಿ ಅಡಗಿರು ವುವು. ಇರುಳುಹಗಲು ಬ್ರಹ್ಮವಿಚಾರದಲ್ಲಿ ಮಗ್ನನಾಗಿ ತಲೆ ಚಚ್ಚಿಕೊಂಡಲ್ಲದೇ ಈ ಸುಳ್ಳನ್ನು ಕಂಡುಹಿಡಿಯುವುದು ಕಷ್ಟವು. ಅಥವಾ ಕಳ್ಳರನ್ನು ಹಿಡಿಯುವುದಕ್ಕೋಸ್ಕರ ಲಂಬಾಣಿಗರ ವೇಷವನ್ನು ಧರಿಸಿದ ಪೋಲೀಸು ಅಧಿಕಾರಿಯಂತೆ ಅದ್ವೈತಿಯೇ ಆಗಿ ಹೋಗಿ, ತನ್ಮಯನಾಗಿ ಅದರ ಸ್ವಾರಸ್ಯವನ್ನು ಸರಿಯಾಗಿ ನೋಡಿದವನಿಗೆ ಅದರ ಸ್ವರೂಪವು ತಿಳಿದುಬರುವುದು.

ಈ ವಾದದ ಜುಗುಪ್ಸತೆಯನ್ನು ಒಂದು ದೃಷ್ಟಾಂತದಿಂದ ತೋರಿಸುವೆವು. 4+3=7 ಇದಕ್ಕೆ ಭಿನ್ನವಾದ ನಿಜತತ್ವವು ಒಂದೂ ಇಲ್ಲ; ಎಂದು ಗಣಿತಜ್ಞರಾದ ಉಪಾಧ್ಯಾಯರು ಹೇಳುವರು. ಅದರ ಮೇಲೆ ಹುಡುಗನು ಕೇಳಿದನು. ''ಸಾರ್! ನಮ್ಮ ಚಿಕ್ಕಣ್ಣನು 4+3=10 ಎಂದು ಹೇಳಿರುವನು. ಅದಕ್ಕೇನು ಗತಿ? ಚಿಕ್ಕಣ್ಣನ ಮಾತನ್ನು ಮೀರುವುದು ಹೇಗೆ?' ಎಂದು ಕೇಳಿದನು. ಶಂಕರಾಚಾರ್ಯರ ತತ್ವಾಭ್ಯಾಸದಿಂದ ಶಿಕ್ಷಿತರಾದ ಆ ಗುರುವು ''ಹೌದು. ಚಂಡು ಆಟಕಾಲದಲ್ಲಿ 4+3=10 ಆಗುತ್ತೆ. ಸ್ಕೂಲಿನಲ್ಲಿ ಲೆಕ್ಕಮಾಡುವ ಕಾಲದಲ್ಲಿ 4+3=7 ಎಂಬುದೇ ನಿಜತತ್ವ '' ಎಂದು ಉತ್ತರ ಕೊಟ್ಟನು. ಅದರಮೇಲೆ ಹುಡುಗನು ಪುನಃ ''ಸಾರ್, ಈಗ ನಾನು ಹೇಗೆ ಹೇಳಬೇಕು, ಹೇಳಿಬಿಡಿ'' ಎಂದು ಕೇಳಿದನು. ಪುನಃ ಉಪಾಧ್ಯಾಯರು ''ಈಗ ನೀನು ಏನು ಮಾಡುತ್ತೀ?'' ಎಂದು ಕೇಳಿದನು. ಪುಟ್ಟಣ್ಣನು ಉತ್ತರ ಕೊಟ್ಟನು:- ನನ್ನ ಜೇಬಿನಲ್ಲಿದ್ದ ಅವಲಕ್ಕಿಯೆಲ್ಲಾ ಮುಗಿದು ಹೋಯಿತು, ನಾನು ಈಗ ಗಣಿತ ಮಾಡಲಾರೆನು; ನಾನು ಗೋಲಿ ಆಡಿದ ಮೇಲೆ ಬರುತ್ತೇನೆ'' ಎಂದು ಹೇಳಿದನು. ಉಪಾಧ್ಯಾಯನು ಛಡಿಯಿಂದ ಒಂದು ಮಂದವಾದ ಏಟು ಕೊಟ್ಟು, ಈಗ ನಿನಗೆ 4+3=10 ಎಂದು ತಿಳಿದುಕೊಂಡಿರುವುದೇ ಗತಿ'' ಎಂದು ಹೇಳಿದನು.

ಇದು ಶಂಕರಾಚಾರ್ಯರ ತತ್ವವು. ಜಗತ್ತು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ. ''ಹಾಗಾದರೆ ಕರ್ಮಾದಿಗಳು ನಿಂತುಹೋಗುವುವಲ್ಲಾ'' ಎಂದು ಸೂಕ್ಷ್ಮವನ್ನು ತಿಳಿಯದ ಕಷ್ಟಾಪೇಕ್ಷಿಯಾದ ಒಬ್ಬ ಗೊಡ್ಡು ದೀಕ್ಷಿತನು ಕೇಳಿದನು. ಈ ಪ್ರಶ್ನೆಯನ್ನು ಆಪ್ತಶಿಷ್ಯರಾದ ಪದ್ಮಪಾದ ತೋಟಕಾದಿಗಳು ಕೇಳಿದ್ದರೆ '' ಸುಮ್ಮನೇ ಇರೋ! ಇಲ್ಲಎಂದು ಹೇಳಿದ ಮೇಲೆ ಇಲ್ಲಾ ! ಬದನೇ ಕಾಯಿಯು ಎಷ್ಟು ಎಣಿಸಿದರೂ ಒಂದೇ. ಭೇದವು ಇಲ್ಲ. ಕೆಲಸಕ್ಕೆ ಬಾರದ ಕರ್ಮಾದಿಗಳನ್ನು ಮಾಡುವ ಪ್ರಯಾಸ ಮೂಢರಿಗಿರಲಿ. ನನ್ನ ಶಿಷ್ಯರಾದ ಪ್ರಾಜ್ಞರಾದ ನಿಮಗೆ ಯಾತಕ್ಕೆ ಈ ಹವ್ಯಾಸ ?'' ಎಂದು ಹೇಳುತ್ತಿದ್ದನು.

ಆದರೆ ಗೊಡ್ಡು ದೀಕ್ಷಿತನು ಈ ಮಾತಿನಿಂದ ಸಂತುಷ್ಟನಾಗಲಾರನು. ಆದುದರಿಂದ, ತಮ್ಮ ತತ್ವವನ್ನು ಬಿಡಬಾರದು; ದೀಕ್ಷಿತನಿಗೆ ಟೋಪಿ ಹಾಕಬೇಕು; ಅವನೂ ತಲೆತೂಗುತ್ತಾ ಹೋಗಬೇಕು ಅಂಥಾ ಕಲ್ಪನೆಯನ್ನು ಮಾಡಿದರು. ''ದೀಕ್ಷಿತನೇ! ನಮ್ಮನ್ನು ಅವೈದಿಕರೆಂದು ತಿಳಿದೆಯಾ? ಜಗತ್ತು ಅಸತ್ಯವು, ಅದು ವಂಧ್ಯಾಪುತ್ರನಂಥಾ ಪದಾರ್ಥವೆಂದು ತಿಳಿದೆಯಾ? ಹಾಗೆ ಅಲ್ಲ. ಅದು ವ್ಯಾವಹಾರಿಕವಾಗಿ ಅತ್ಯಂತ ಸತ್ಯವಾದುದು. ಬ್ರಹ್ಮನು ಪಾರಮಾರ್ಥಿಕವಾಗಿ ಅತ್ಯಂತ ಸತ್ಯನಾದವನು. ಅಂತೂ ಉಭಯವೂ ಸತ್ಯವೇ. ವ್ಯಾವಹಾರಿಕ ಕರ್ಮಗಳನ್ನು ಮಾಡಿ, ವ್ಯಾವಹಾರಿಕ ಜ್ಞಾನವನ್ನು ಸಂಪಾದಿಸಿ ವ್ಯಾವಹಾರಿಕ ಲೋಕಗಳನ್ನು ಹೊಂದು. ನಂತರ ನಿನ್ನ ಬ್ರಹ್ಮತ್ವವು ನಿನಗೆ ಗೋಚರವಾಗುವುದು. ನೀನೇನು ಸಾಮಾನ್ಯನಲ್ಲ '' ಎಂದು ಹೇಳಿದರು. ದೀಕ್ಷಿತರು ಉಬ್ಬಿ ಹೋದರು. ಅನೃತದ ಬೂದಿಯಿಂದ ಶಂಕರಾಚಾರ್ಯರು ವಿಚಾರಶೀಲರನ್ನು ಮುಚ್ಚಿದಂತಾಯಿತು. ವಸ್ತುತಃ ತತ್ವವೇನೆಂದರೆ, ವ್ಯಾವಹಾರಿಕ= ಮಿಥ್ಯಾಭೂತವಾದ= ಅತ್ಯಂತಸುಳ್ಳಾದ= ಇಲ್ಲದೇ ಇರುವ ಎಂದು ಅರ್ಥವು. ಸತ್ತಾ ಎಂದರೆ ಇರೋಣವು ಎಂದರ್ಥವು. ಏವಂ ಚ ಜಗತ್ತಿಗೆ ವ್ಯಾವಹಾರಿಕ ಸತ್ತಾ ಉಂಟು ಎಂದರೆ ಇಲ್ಲದೇ ಇರೋಣವು ಉಂಟು ಎಂದರ್ಥವು. ಹಾಗೆಂದರೆ ಇಲ್ಲವೇ ಇಲ್ಲ ಎಂದರ್ಥವು. ಕರ್ಮವಿಮೂಢರಾದ ದೀಕ್ಷಿತರಿಗೆ ಇದು ಹೇಗೆ ತಿಳಿಯುವುದು. ಇದು ನಮ್ಮ ಗುಡ್ಡದ ನರಸಿಂಹನ ಪಾದದಲ್ಲಿ ತಲೆ ಚಚ್ಚಿಕೊಂಡು ಸಂಪಾದಿಸಿದ ರಹಸ್ಯ ತತ್ವವು. ಸುಳ್ಳು ಹೇಳುವ ಕಾಲದಲ್ಲಿ 4+3=10 ಎಂಬುದು ನಿಜವು. ನಿಜಹೇಳುವ ಕಾಲದಲ್ಲಿ 4+3=7 ಎಂಬುದು ನಿಜವು ಎಂಬ ವಾಣಿಯಂತೆ, ಈ ಸತ್ತಾಭೇದಕಲ್ಪನೆಯು ಅತೀವ ಅಪಹಾಸಾಸ್ಪದವಾದ ಕ್ಷುದ್ರಕಲ್ಪನೆಯು. ವ್ಯಭಿಚಾರಕಾಲದಲ್ಲಿ ಪರಸ್ತ್ರೀಗಮನವು ಧರ್ಮವು, ಪುರಾಣಹೇಳುವ ಕಾಲದಲ್ಲಿ ಅದು ಅಧರ್ಮವು, ಎಂದು ಹೇಳುವಂತೆಯೂ, ಮದ್ಯಪಾನ ಮಾಡಿದ ಕಾಲದಲ್ಲಿ ಮದ್ಯಪಾನ ಮಾಡಿದವನು ಪ್ರಾಜ್ಞನು, ಪ್ರಬೋಧಕಾಲದಲ್ಲಿ ಅವನು ಉನ್ಮತ್ತನು ಎಂದು ಹೇಳುವಂತೆಯೂ ಆಯಿತು.

ಸುಳ್ಳು ವಿವಕ್ಷೆಯಿಂದ(point of view) ಚಂಡು ಚಪ್ಪಟೆಯಾಗಿರುವುದು ಸತ್ಯವು; ನಿಜವಾದ ವಿವಕ್ಷೆಯಿಂದ ಚೆಂಡು ಗುಂಡಾಗಿರುವುದು ಎಂಬ ಎರಡು ವಿವಕ್ಷಾಕಲ್ಪನೆಗಳನ್ನು ಇನ್ನು ಮೇಲೆ ಲೋಕದಲ್ಲಿ ಸರ್ವತ್ರ ವ್ಯವಹಾರ ಮಾಡಬೇಕಾಯಿತು. ಕೆಲಸಕ್ಕೆ ಬಾರದ

ಈ ವಿವಕ್ಷಾದ್ವಯ- ವಿವಕ್ಷಾತ್ರಯವೂ ಇರುವುದು- ಕಲ್ಪನೆಯು ಕುಚೋದ್ಯಗಳ ಅಥವಾ ನರ್ಮೋಕ್ತಿಗಳ ಭಾಂಡಾಗಾರಕ್ಕೆ ಉಚಿತವೇ ಹೊರತು ವೇದಾಂತ ಸೂತ್ರಭಾಷದಲ್ಲಿ ಅತಿ ನಿಂದಿತವಾದ, ತುಚ್ಛವಾದ ವಾದವೆನ್ನಿಸುವುದು. ನ್ಯಾಯಾಧಿಪತಿಯು ಪ್ರತಿವಾದಿಯು ಸತ್ಯವಂತನೋ ಅಲ್ಲವೋ ಎಂದು ಸಾಕ್ಷಿಯನ್ನು ಪ್ರಶ್ನೆಮಾಡಿದನು. ಆಗ ''ಪ್ರತಿವಾದಿಯು ಸುಳ್ಳು ವಿವಕ್ಷೆಯಿಂದ ಸತ್ಯವಂತನು. ನಿಜವಾದ ವಿವಕ್ಷೆಯಿಂದ ಸತ್ಯವಂತನಲ್ಲ'' ಎಂದು ಸಾಕ್ಷಿ ಹೇಳುವವನು ಮೂಢನೆಂದು ಯಾರು ತಾನೇ ಹೇಳದಿರುವುದು? ಈ ವಾದವು ಪ್ರಾಯೇಣ ಸಕಲ ಆಂಗ್ಲೇಯ ಗ್ರಂಥಕರ್ತರಿಂದಲೂ ತಿರಸ್ಕೃತವಾಗಿದೆ. ಒಬ್ಬನ ಸಮ್ಮತಿಯನ್ನು ತೋರಿಸುವೆವು.

"Shankara argues from both standpoints without much regard for consistency."___ L.D.Barnett, M.A.;D.Litt

ಅರ್ಥವು :- ಶಂಕರಾಚಾರ್ಯರು ನ್ಯಾಯಕ್ಕೆ ಅನುಗುಣವಾಗಿಯೇ ಎರಡು ವಿವಕ್ಷೆಗಳನ್ನು ಹಿಡಿದು ವಾದ ಮಾಡುತ್ತಾರೆ.

ಈ ವಾದದಿಂದ ವೇದದಲ್ಲಿ ಉಕ್ತವಾದ ಸಕಲ ಬ್ರಹ್ಮನ ಗುಣಗಳನ್ನೂ ಶಂಕರಾಚಾರ್ಯರು ಅವನಿಂದ ಅಪಹರಿಸಿದಂತಾಯಿತು. ವೇದದಲ್ಲಿ ಅನಂತಗುಣಗಳು ಬ್ರಹ್ಮನಿಗೆ ಹೇಳಿರುವುವು. ಶಂಕರಾಚಾರ್ಯರೂ ಹಾಗೆಯೇ ಹೇಳುತ್ತಾರೆ. ಆದರೇನು? ವ್ಯಾವಹಾರಿಕ ವಿವಕ್ಷೆಯಿಂದ, ಎಂದರೆ ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಇರುವುದಿಲ್ಲ ಎಂಬ ವಿವಕ್ಷೆಯಿಂದ ಬ್ರಹ್ಮನಿಗೆ ಗುಣಗಳು ಹೇಳಿರುತ್ತವೆ ಎಂದು ಶಂಕರಾಚಾರ್ಯರು ಅರ್ಥಮಾಡಿದರು. ಇದೇನು ಉನ್ಮತ್ತಪ್ರಲಾಪವಾಯಿತಲ್ಲವೇ ಎಂದು ಗೊಡ್ಡು ದೀಕ್ಷಿತರು ಕೇಳಿದರೆ, ಕೆಲವರು ಅದ್ವೈತಿಗಳು ಮುಂದೆ ಬಂದು ಹೀಗೂ ಹೇಳಿಬಿಡುವರು:- ''ನಾವೇನು ಮಾಡೋಣ! ವೇದವೇ ಹಾಗಿರುವುದು'' ಎಂದು ಹೇಳಿ ತಮ್ಮ ಮನೋದೋಷವನ್ನು ವೇದವಾಕ್ಯಗಳಲ್ಲಿ ಆರೋಪಿಸುವರು. ಇದರಿಂದ, ಬ್ರಹ್ಮನ ಸೃಷ್ಟಿಕರ್ತೃತ್ವಾದಿಗುಣಗಳು ಸುಳ್ಳುವಿವಕ್ಷೆಯಿಂದ ಹೇಳಿದ್ದು ಎಂದು ಹೇಳಿದುದರಿಂದ ಪರಬ್ರಹ್ಮನ ಗುಣಾಪಹಾರರೂಪವಾದ ಒಂದು ವಂಚನೆಯು ಆಯಿತು; ವೇದವು ಉನ್ಮತ್ತಪ್ರಲಾಪದಂತಿರುವ ಕುತ್ಸಿತ ವಾಕ್ಯಗಳಿಂದ ಪೂರ್ಣವಾಗಿರುವುದು ಎಂಬ ಅಭಿಪ್ರಾಯವನ್ನು ಹರಡುವುದರ ಮೂಲಕ, ವೇದದ ಗೌರವ ಸಂಹಾರರೂಪವಾದ ಎರಡನೆಯ ವಂಚನೆಯೂ ಆಯಿತು.

(8) ಪುನಃ ಬ್ರಹ್ಮನು ಒಬ್ಬನೇ ಸತ್ಯನಾದರೆ, ಜಗತ್ತು ಇಲ್ಲವೇ ಇಲ್ಲವೆಂದು ಪ್ರಾಪ್ತವಾಗುವುದು; ಹಾಗಾದರೆ ಜಗತ್ತು ಶಶವಿಷಾಣದಂತೆ ಅಸತ್ತೆನಿಸುವುದು ಎಂದು ದೂರು ಹೇಳಿದರೆ, ಶಂಕರಾಚಾರ್ಯರು ಜಗತ್ತು ಅಸತ್ತಲ್ಲ ಜಗತ್ತು ಸತ್ಯಭೂತವಾದುದೇ ಎಂದು ಹೇಳುವರು. ಜಗತ್ತು ಸತ್ಯವು ಸತ್ಯವಲ್ಲ; ಜಗತ್ತು ಅಸತ್ಯವು ಅಸತ್ಯವಲ್ಲ; ಇಂಥಾ ವಿರೋಧದ್ವಯಗಳು ಬಂದೊದಗಿದವು. ಶಂಕರಾಚಾರ್ಯರು ಜಗತ್ತು ಸದಸದ್ವಿಲಕ್ಷಣವು ಎಂದು ಹೇಳಿಬಿಟ್ಟರು. ಗೊಡ್ಡು ದೀಕ್ಷಿತನು ದ್ರಾಕ್ಷಿಯಂತೆ ತುಂಬಿದ ದುಂಡಾದ ಈ ಪದವನ್ನು ಕೇಳಿ ಕರ್ಣಾನಂದದಿಂದಲೇ ನಿರ್ವೃತನಾಗುವನು. ಶಂಕರಾಚಾರ್ಯರ ತಾತ್ಪರ್ಯವೇನೆಂದರೆ, ಜಗತ್ತಿನ ವಿಷಯವು ನನಗೆ ತಿಳಿಯದು, ನೀನು ಕೇಳಬೇಡ ಎಂದು ಅರ್ಥವು. ಸ್ಪಷ್ಟವಾಗಿ ಇಷ್ಟು ಹೇಳಿಬಿಟ್ಟರೆ ಗೊಡ್ಡು ದೀಕ್ಷಿತನಿಗೆ ಗುರುಗಳಲ್ಲಿ ಅವಿಶ್ವಾಸವು ಬರುತ್ತಿತ್ತು. ವಸ್ತುತಃ ಸತ್ತವನುಂಟು, ಬದುಕಿದವನುಂಟು. ''ಸತ್ತಂಥಾ ಬದುಕಿದವನು'' ''ಶವ ಚಿರಂಜೀವಿಯು'' ಎಲ್ಲಿಯೂ ಕಂಡಿಲ್ಲ. ಜಗತ್ತು ಇದೇ ಎಂಬುದು ಮನಸ್ಸಿಗೆ ಆರೂಢವಾಗುವ ತತ್ತ್ವವು. ಇಲ್ಲ ಎಂದರೆ ಮನಸ್ಸಿಗೆ ಆರೂಢವಾಗುವುದು. 'ಇದೇ ಇಲ್ಲ' ಇವುಗಳ ಸಮಾಹಾರವು ಅಥವಾ ಇದೇ ಎಂದು ಹೇಳುವುದಕ್ಕಾಗುವುದಿಲ್ಲ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ ಇತ್ಯಾದಿ ಸಮಾಹಾರಗಳು ಅಡುಗೂಲಜ್ಜಿಯ ಕಥೆಗಳಿಗೆ ಉಚಿತವಾಗುವ ಮಾತುಗಳು ಇದು ಎಂಟನೆಯ ವಂಚನೆಯು.

(9) ಇದೇ ಪ್ರಕರಣದಲ್ಲಿ ಮತ್ತೊಂದು ವಿಷಯವನ್ನು ಸೂಚಿಸಿ ಬಿಡಬಹುದು. 1. ವೇದವು ಪ್ರಮಾಣವು. ನಾವು ವೈದಿಕ ಶಿಖಾಮಣಿಗಳು ಎಂದು ಶಂಕರಾಚಾರ್ಯರು ಹೇಳಿದರು. ಮಾತೇನೋ ಬಹಳ ಮಧುರವಾಗಿರುವುದು. ಆದರೆ ಕಾವಿ ಬಟ್ಟೆಯನ್ನು ಉಟ್ಟು ತಲೆ ಬೋಳಿಸಿಕೊಂಡವನೇ ಸನ್ಯಾಸಿಯು ಎಂದು ನಿಯಮವಿರುವುದಿಲ್ಲ. ಎಷ್ಟೋ ಜನರು ಶೂದ್ರರು ಈ ರೀತಿ ಸನ್ಯಾಸಿಗಳಾ ಗಿರುತ್ತಾರೆ. ಆದುದರಿಂದ ನಾವು ವಿಚಾರಮಾಡುವುದು ಅವಶ್ಯಕವು. ವೇದವು ಪ್ರಮಾಣವು ಎಂದರೆ ಶಂಕರಾಚಾರ್ಯರ ಅಭಿಪ್ರಾಯವೇನು? ಅವರ ಮತದ ರೀತ್ಯಾ, ವೇದವು ಮಿಥ್ಯಾ ಎಂದರೆ ಹಿಂದೆ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ, ಇಂಥಾ ತ್ರಿಕಾಲದಲ್ಲಿಯೂ ಅವೃತ್ತಿಯಾದ ಪದಾರ್ಥದಿಂದ ಜ್ಞಾನವನ್ನು ಹೊಂದಬಹುದಾದರೆ ಶಶವಿಷಾಣವೂ, ವಂಧ್ಯಾಪುತ್ರನೂ ನಮಗೆ ಯಾತಕ್ಕೆ ಉಪದೇಶಮಾಡಬಾರದು? ಮಿಥ್ಯಾಪದಾರ್ಥಗಳಿಗೆ ಅರ್ಥಕ್ರಿಯಾಕಾರಿತ್ವವನ್ನು ಎಲ್ಲೂ ಕಂಡಿಲ್ಲ. ರಜ್ಜುಸರ್ಪ ದಿಂದ ನಾವು ಓಡುವುದಿಲ್ಲ. ಸತ್ಯವಾದ ಜ್ಞಾನವಿಶೇಷವಾದ ರಜ್ಜುಸರ್ಪಭ್ರಮದಿಂದ ನಾವು ಓಡುವೆವು. ಆದುದರಿಂದ ವೇದವು ಮಿಥ್ಯಾ ಎಂದು ಹೇಳಿ ಅದರಿಂದ ಬಹಳ ವಿಷಯಗಳು ತಿಳಿಯುವುವು ಎಂದು ಹೇಳುವುದು- ಸಾಂಬಶಾಸ್ತ್ರಿಗಳ ಮಾತನ್ನು ಕೊಂಡುಕೊಂಡು ಮಾತಾಡಿದರೆ- ವಜ್ರಶುಂಠರ ನುಡಿಯೇ ಹೊರತು ಮತ್ತೆ ಬೇರೆ ಅಲ್ಲ. 2. ಕಿಂಚ ವೇದವು ಬ್ರಹ್ಮನ ಸೃಷ್ಟ್ಯಾದಿಗಳನ್ನು ಹೇಳುವುದು. ವೇದವು ಪ್ರಮಾಣವಾದರೆ

ಇವೆಲ್ಲವೂ ನಿಜವಾಗಬೇಕು. ಶಂಕರಾಚಾರ್ಯರು ಏನು ಹೇಳಿದರು? ಇವೆಲ್ಲವೂ ಅತತ್ವಾವೇದಕ ಪ್ರಮಾಣಗಳು ಎಂದು ಹೇಳಿದರು. ಅತತ್ವಾವೇದಕವೆಂದರೆ ಸುಳ್ಳು ಹೇಳುವಂಥಾ ಎಂದರ್ಥವು; ಪ್ರಮಾಣವೆಂದರೆ, ಯಥಾರ್ಥ ತತ್ವವನ್ನು ಹೇಳುವುದು ಎಂದರ್ಥವು. ಏವಂಚ ವೇದವು ಸುಳ್ಳು ಹೇಳುವ ಪ್ರಮಾಣವು= ಸುಳ್ಳು ಹೇಳುವ ನಿಜವಾದವು=ಸುಳ್ಳು ತತ್ವ ಬೋಧಕವು= ಅಪ್ರಮಾಣವು ಎಂದು ಪ್ರಾಪ್ತವಾಯಿತು. ಲೋಕದಲ್ಲಿ ಸತ್ಯವಿಷಯಗಳನ್ನು ಹೇಳುವ ಗ್ರಂಥಗಳು ಪ್ರಮಾಣವೆಂದೂ, ಸುಳ್ಳು ವಿಷಯಗಳನ್ನು ಹೇಳುವ ಗ್ರಂಥಗಳು ಅಪ್ರಮಾಣಗಳೆಂದೂ ಸಿದ್ಧವಾಗಿರುವುವು. ಈ ರೀತಿಯಲ್ಲಿ ವೇದದಲ್ಲಿ ''ತತ್ವಮಸ್ಯಾದಿ'' ನಾಲ್ಕಾರು ವಾಕ್ಯಭಾಗಗಳು ವಿನಹ ಬಾಕಿ ಭಾಗವೆಲ್ಲವೂ ಸುಳ್ಳು ಹೇಳುವುವು ಎಂದು ಶಂಕರಾಚಾರ್ಯರು ಒಪ್ಪಿಬಿಟ್ಟಿರುವರು. ಆದುದರಿಂದ ಕರ್ಮ, ಸೃಷ್ಟಿ, ಉಪಾಸನಾದಿಗಳನ್ನು ಹೇಳುವ ವೇದಭಾಗವೆಲ್ಲವೂ ಅಪ್ರಮಾಣವೆಂದೇ ಅಂಗೀಕರಿಸಿದ ಹಾಗಾಯಿತು.

ಇನ್ನು ಒಂದು ಕೆಲಸವೂ ಆಯಿತು. ಒಂದು ಸುಳ್ಳು ಹೇಳಿದ ಸಾಕ್ಷಿಯ ವಿಷಯದಲ್ಲೇ ನ್ಯಾಯಾಧಿಪತಿಯು ಎಚ್ಚರದಿಂದಿರು ವನು. ಅನಂತ ಸುಳ್ಳುಗಳನ್ನು ಹೇಳಿದ ವೇದವು ತತ್ವಮಸ್ಯಾದಿ ನಾಲ್ಕಾರು ವಾಕ್ಯಗಳಲ್ಲಿ ನಿಜವನ್ನು ಹೇಳುವುದೆಂದು ನಾವು ನಂಬುವುದು ಹೇಗೆ? ಏವಂಚ, ವೇದವೂ ಸರ್ವಪ್ರಕಾರದಿಂದಲೂ ಅಪ್ರಮಾಣವೆಂದೇ ಪ್ರಾಪ್ತವಾಯಿತು. ಇದು ವೈದಿಕತನವು. ಕಟುಕನು ಆಲಂಬಿಸಿಕೊಂಡು ಪಶುವನ್ನು ಸಂಹರಿಸುವನು. ಶಂಕರಾಚಾರ್ಯರು ನಮಸ್ಕಾರ ಮಾಡಿ ವೇದವನ್ನು ಭೂಮಿಗೆ ಒರಸಿ ಬಿಟ್ಟರು. ಅನಂತ ವೇದಗಳು ಸುಟ್ಟು ಹೋಗಿದ್ದರೂ ಅವರಿಗೇನೂ ನಷ್ಟವಿರಲಿಲ್ಲ. ಅವರಿಗೆ ಬೇಕಾಗಿದ್ದು ನಾಲ್ಕೈದು ವಾಕ್ಯಗಳು. ಅವುಗಳೂ ಅವರಿಗೆ ಮಾಡುವ ಉಪಕಾರವು ಅಷ್ಟೇ! ಅವರ ಬ್ರಹ್ಮಸಿದ್ಧಿಯು ವೇದದಿಂದ ಆಗುವುದಿಲ್ಲವೆಂದು ಅವರೇ ಒಪ್ಪಿರುತ್ತಾರೆ. ಅವನು ಅಜ್ಞೇಯನಷ್ಟೇ!

ಕೆಲವರೇನೋ ಸ್ವಲ್ಪ ಝೋಕಿನ ಮಾತುಗಳನ್ನಾಡುವರು. ವ್ಯಾವಹಾರಿಕ ವಿಷಯಗಳನ್ನು ವೇದವು ಬೋಧಿಸುವುದು ಎಂದು ಹೇಳುವರು. ಗಂಭೀರವಾದ ಈ ವಾಕ್ಯದಲ್ಲಿ ಪ್ರಾಣಸಂಜೀವಿನಿಯು ಇರುವುದೆಂದು ಗೊಡ್ಡು ದೀಕ್ಷಿತರು ತಿಳಿಯುತ್ತಾರೆ. ವಸ್ತುತಃ ವ್ಯಾವಹಾರಿಕ ವಿಷಯಗಳನ್ನು ವೇದವು ಬೋಧಿಸುವುದು ಎಂದರೆ ಹೆಣವನ್ನು ಪ್ರಾಣವು ಆಶ್ರಯಿಸುವುದು ಎಂಬಂತೆ, ಸುಳ್ಳನ್ನು ವೇದವು ಹೇಳುವುದು ಎಂದು ಅರ್ಥವು. ವ್ಯಾವಹಾರಿಕ ಪ್ರಮಾಣವೆಂದರೂ ಅಪ್ರಮಾಣವೆಂದರೂ ಒಂದೇ.[1]

ಅಂತೂ ವೇದಸಂಹಾರರೂಪವಾದ ಮಹಾ ವಂಚನೆಯೂ ಶಂಕರಾಚಾರ್ಯರ ಮಾತುಗಳಿಂದ ತೋರಿಬರುವುದು.

(10) 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತ್ಯರ್ಥದ ಪರ್ಯಾಲೋಚನೆಯಿಂದಲೇ ಶಂಕರಾಚಾರ್ಯರ ವಾಕ್ಯಾರ್ಥದ ವಂಚನಾ ಕ್ರಮವು ಸ್ಫುಟತರವಾಗಿ ತೋರಿಬರುವುದು. ಸರ್ವಂ ಬ್ರಹ್ಮ ಎಂದರೆ ಏನು ಅರ್ಥವು? ಗೊಡ್ಡು ಸ್ಮಾರ್ತ ವೈದಿಕನು ಎಲ್ಲವೂ ಬ್ರಹ್ಮವೇ! ಸೂರ್ಯನು ಬ್ರಹ್ಮನು, ಚಂದ್ರನು ಬ್ರಹ್ಮನು, ಇಂದ್ರನು ಬ್ರಹ್ಮನು, ಶೃಂಗೇರಿ ಗುರುಗಳು ಬ್ರಹ್ಮವಸ್ತುವು, ಹೀಗೆ ತಿಳಿಯುವನು. ಈ ವಿವಕ್ಷೆಯಿಂದಲೇ ಶೃಂಗೇರಿ ಗುರುಪೀಠದವರು ತಮ್ಮ ಪಾದುಕೆಗೆ ವಿಷ್ಣುಸಹಸ್ರನಾಮದಿಂದ ಪುಷ್ಪಾದ್ಯರ್ಚನೆಯನ್ನು ಸ್ವೀಕರಿಸುವುದೇ ಮುಂತಾದ ಅನೇಕ ಸಂಪ್ರದಾಯಗಳು ಉಪಪನ್ನವಾಗುವುವು. ಇನ್ನು ಯಾವ ವಿಧಿಯೂ ಪಂಜು ಹಿಡಿದು ಹುಡುಕಿನೋಡಿದರೂ ಕಂಡು ಬರುವುದಿಲ್ಲ. ಈ ವಿವಕ್ಷೆಯಿಂದ ಭಾರತ್ಯಾದಿ ಉತ್ತಮ ಗುರುಗಳ ಪ್ರತೀಕವನ್ನು ದೇವತಾಪ್ರತಿಮಾಸ್ಥಾನದಲ್ಲಿಟ್ಟು ದೇವತೋಚಿತ ಮಂತ್ರಗಳಿಂದ ಪೂಜಿಸುವುದು ಉಪಪನ್ನವಾಗುವುದು. ಇನ್ನು ಯಾವ ವಿಧಿಯೂ ಪಂಜನ್ನು ಹಿಡಿದುಕೊಂಡು ಹುಡುಕಿದರೂ ಅದ್ವೈತಮತದ ರೀತ್ಯಾ ಕಂಡು ಬರುವುದಿಲ್ಲ. ಸರ್ವವೂ ಬ್ರಹ್ಮ ಎಂಬ ಈ ವಿವಕ್ಷೆಯು ಇನ್ನೂ ಬಹು ಕೋಟಲೆಗಳನ್ನು ಮಾಡಿರುವುದು. ''ಪ್ರಥಮಪ್ರಾಶಸ್ತ್ಯ ಪರಿತ್ಯಾಗೇ ಕಾರಣಾಭಾವಾತ್'' ಎಂಬ ನ್ಯಾಯವನ್ನನುಸರಿಸಿ, ಪ್ರಥಮದಲ್ಲಿಯೇ ನಿಮಂತ್ರಣ ದಿಂದ ಪ್ರಾಪ್ತರಾದ ಪಿತೃಗಳಿಗೆ ಅರ್ಪಣಮಾಡಿಯೇ ಅವರ ಭೋಜನಾನಂತರ ನಾರಾಯಣನಿಗೆ ನೈವೇದ್ಯವನ್ನು ಶ್ರಾದ್ಧದ ದಿವಸ ನೈವೇದ್ಯಮಾಡುವ ಸ್ಮಾರ್ತಸಂಪ್ರದಾಯವು ಉಪಪನ್ನವಾಗುವುದು. ಇನ್ನು ಯಾವ ವಿಧಿಯೂ ಪಂಜನ್ನು ಹಿಡಿದುಕೊಂಡು ಹುಡುಕಿ ದರೂ ಕಂಡುಬರುವುದಿಲ್ಲ. ಈ ವಿವಕ್ಷೆಯಿಂದಲೇ ನಾನೇ ಬ್ರಹ್ಮನು ಎಂದು ಅದ್ವೈತೋಪಾಸನೆ ಮಾಡುವವರಿಗೆ ''ಈಶ್ವರೋಹ - ಮಹಂ ಭೋಗೀ'' ಇತ್ಯಾದಿ ಗೀತಾ ಶ್ಲೋಕೋಕ್ತ ಅನರ್ಥಗಳು ಪ್ರಾಪ್ತವಾಗುವುವು ಎಂಬ ದ್ವೈತಿಗಳ ಖಂಡನೆಯು ಚೆನ್ನಾಗಿ ಉಪಪನ್ನವಾಗುವುದು. ಬೇರೇ ರೀತಿಯಲ್ಲಿ ಖಂಡನೆಯು ಲಗ್ನವಾಗುವ ಪ್ರಕಾರವನ್ನು ಸಾವಧಾನವಾಗಿ ನಿರೂಪಿಸುವೆವು. ಪ್ರಕೃತದಲ್ಲಿ ಇಷ್ಟು ಹೇಳಬೇಕಾಗಿದೆ. ಸರ್ವವೂ ಬ್ರಹ್ಮವೇ ಎಂದು ಈ ಶ್ರುತಿಗೆ ಅರ್ಥ ಮಾಡುವುದು ಶಂಕರಾಚಾರ್ಯರಿಗೆ ಅತ್ಯಂತ ಇಷ್ಟವಾದುದಲ್ಲ. ಸರ್ವಥಾ ಅವರಿಗೆ ಸಮ್ಮತವಲ್ಲವೆಂದು ಹೇಳುವಷ್ಟು ಧೈರ್ಯವು ನಮಗಿರುವುದಿಲ್ಲ. ಕಾಲಾಂತರದಲ್ಲಿ ಸೂಕ್ಷ್ಮ ವಿಷಯಗಳನ್ನೂ ವಿವರಿಸುವೆವು. ಅಂತೂ ಅವರಿಗೆ ಹೆಚ್ಚು ಪ್ರೀತಿಕರವಾದ ಅರ್ಥವು ಇದಲ್ಲ, ಇದು ಕಚ್ಚಾ ಅರ್ಥವು. ಅಧಮ ಅರ್ಥವು. ಸರ್ವಂ ಖಲ್ವಿದಂ ಬ್ರಹ್ಮ ಎಂಬ ವಾಕ್ಯಕ್ಕೆ ಉತ್ತಮವಾದ ಶಂಕರಾಚಾರ್ಯರ ಅರ್ಥವೇನೆಂದರೆ, 'ಸರ್ವವೂ ಬ್ರಹ್ಮನಲ್ಲ' ಎಂಬುದು. ವಾಚಕರು ಗಾಬರಿಯಾಗಬಾರದು. ಸರ್ವವೂ ಬ್ರಹ್ಮವು ಎಂಬ ವಾಕ್ಯಕ್ಕೆ ಸರ್ವವೂ ಬ್ರಹ್ಮವಲ್ಲ ಎಂದೇ ಅದ್ವೈತವಿದ್ಯಾ ನಿಧಿಗಳಿಗೆಲ್ಲಾ ಗುರುಗಳಾದ ಶಂಕರಾಚಾರ್ಯರ ಅರ್ಥವು. ಉಂಟು ಎಂಬುದಕ್ಕೆ ಇಲ್ಲ ಎಂದೇ ಅರ್ಥವು. ಸಂಭೂತಿಯೆಂಬ ಪದಕ್ಕೆ ಅಸಂಭೂತಿಯೆಂದೇ ಓದಿ

ಅರ್ಥಹೇಳಿರುತ್ತಾರೆ. 'ಇದಂ ಸರ್ವಂ ಬ್ರಹ್ಮ' ಎಂದರೆ ಪ್ರತ್ಯಕ್ಷಾದಿಗಳಿಂದ ಪ್ರಮಿತವಾದ ಜಗತ್ತೆಲ್ಲವೂ ಮಿಥ್ಯಾ, ಬ್ರಹ್ಮನು ಸತ್ಯನು ಎಂದರ್ಥವು. ಈ ವಾಕ್ಯಾರ್ಥದ ವಂಚನೆಯು ಕುರುಬರಿಗೂ ಸ್ಪಷ್ಟವಾಗಿ ತೋರುವುದರಿಂದ ಹೆಚ್ಚು ಉಪಪಾದನೆಯನ್ನು ಮಾಡಬೇಕಾದುದಿಲ್ಲ.

(11) ಇದೇ ರೀತಿಯಲ್ಲಿ ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನು ಎಂದು ಹೇಳುವ ಶ್ರುತಿಗೆ ಶಂಕರಾಚಾರ್ಯರು ರುಜು ಹಾಕಿದರು. ಬ್ರಹ್ಮವು ಉಪಾದಾನ ಕಾರಣವಾದರೆ ವಿಕಾರ ಬರುವುದಲ್ಲಾ ಏನು ಗತಿ? ಎಂದು ಗೊಡ್ಡು ವೈದಿಕ ದೀಕ್ಷಿತರು ಕೇಳಿದರು. ಶಂಕರಾಚಾರ್ಯರು ''ನಿನಗೆ ಶಾಸ್ತ್ರಾರ್ಥವು ತಿಳಿಯದು . 'ಉಪಾದಾನಂ ಚ ದ್ವಿವಿಧಂ; ಪರಿಣಾಮ್ಯುಪಾದಾನಂ ವಿವರ್ತೋಽಪಾದಾನಂ ಚೇತಿ, ಬ್ರಹ್ಮ ಚ ವಿವರ್ತೋಽಪದಾನಮಿತ್ಯುಚ್ಯತೇ।' ಎಂದು ಸಂಸ್ಕೃತದಲ್ಲಿ ದಡದಡನೇ ಹೇಳಿದರು. ಹಿಮಾಚಲ ಪ್ರಾಂತದಲ್ಲಿ ರಭಸದಿಂದ ಹರಿದು ಬರುವ ಅಮರತರಂಗಿಣಿಯಂತೆ ಮಂಜುಳವಾದ ಸಂಸ್ಕೃತಶೈಲಿಯಿಂದ ಗೊಡ್ಡು ವೈದಿಕನು ಮುಗ್ಧನಾಗಿ ಮನೆಗೆ ಹೋದನು. ಅರ್ಥವೇನೆಂದರೆ, ಶುಕ್ತಿಯು ಅಧ್ಯಸ್ತ ರಜತಕ್ಕೆ (ಭ್ರಮಕಾಲದಲ್ಲಿ ತೋರತಕ್ಕ ರಜತಕ್ಕೆ) ಉಪಾದಾನವಾಗುವಂತೆ, ಬ್ರಹ್ಮವು ಜಗತ್ತಿಗೆ ಉಪಾದಾನ ಕಾರಣವು ಎಂದರ್ಥ. ಶುಕ್ತಿಯು ಬೆಳ್ಳಿಗೆ ಉಪಾದಾನವಲ್ಲವೆಂಬುದು ಸರ್ವ ಸಮ್ಮತವು. ಫಲಿತಾಂಶವೇನೆಂದರೆ, ಬ್ರಹ್ಮವು ವಿವರ್ತೋಽಪಾದಾನವು= ಬ್ರಹ್ಮನು ಉಪಾದಾನನಲ್ಲ ಎಂದು ಅರ್ಥವಾಯಿತು. ಮೊದಲೇನೋ ಬ್ರಹ್ಮನು ಉಪಾದಾನವೇ ಸರಿ ಎಂದು ಶಂಕರಾಚಾರ್ಯರೇ ರುಜುಹಾಕಿದ್ದರು. ಆದರೆ ಜ್ಞಾನಮಾರ್ಗದ ವಂಚನೆಗೆ ವಿರೋಧವೇ ಭೂಷಣವು.

(12) ಹೀಗೆಯೇ ಶಂಕರಾಚಾರ್ಯರು ''ಮುಮುಕ್ಷೋಃ ಕರ್ಮಸನ್ಯಾಸವಿಧಾನಾತ್'' ಎಂದರೆ ''ಅಥಾತೋ ಬ್ರಹ್ಮಜಿಜ್ಞಾಸಾ'' ಇತ್ಯಾದಿ ವೇದಾಂತಶಾಸ್ತ್ರವನ್ನು ಓದುವುದಕ್ಕೆ ಆರಂಭಿಸಿದ ಮುಮುಕ್ಷು ಎಂಬ ಗುಣಸಹಿತನಾದ ಅಧಿಕಾರಿಯು ಕರ್ಮವನ್ನು ಪರಿತ್ಯಾಗ ಮಾಡಬೇಕು ಎಂದು ಹೇಳಿದರು. ಗೊಡ್ಡು ವೈದಿಕನು ತನ್ನ ಕಪಟಯಾಗಗಳಿಂದ ಜನರನ್ನು ಮೋಸಮಾಡುವುದಕ್ಕೂ, ಪಶುಹನನ ವನ್ನು ಅಭ್ಯಾಸ ಮಾಡುವುದಕ್ಕೂ , ಯಾಗದ ನೆಪದಿಂದಲಾದರೂ ಮಾಂಸದ ರುಚಿಯನ್ನು ನೋಡುವುದಕ್ಕೂ ಅವಕಾಶ ತಪ್ಪಿ ಹೋಯಿತಲ್ಲಾ ಎಂದು ಚಿಂತಿಸುತ್ತಿರಲು, ವ್ಯಾವಹಾರಿಕ ಕಾರುಣ್ಯದೃಷ್ಟಿಯಿಂದ ಪೂರ್ಣರಾದ ಜಗದ್ಗುರುಗಳು ''ವರ್ಣಿತಶ್ಚಾಸ್ಮಾಭಿಃ... ವಿದ್ವದವಿದ್ವದ್ಭೇದೇನ ಕರ್ಮವಿಧಯಃ'' ಇತ್ಯಾದಿ ವಾಕ್ಯಗಳಿಂದ ಸಮಾಧಾನವನ್ನು ಹೇಳಿದರು. ಅಜ್ಞದೃಷ್ಟಿಯಿಂದ ಕರ್ಮಾದಿಗಳೆಲ್ಲಾ ಉಪಪನ್ನವಾಗುವುವು. ''ಬ್ರಾಹ್ಮಣ್ಯಾದಿಕಮಾರೋಪ್ಯ ಸರ್ವಕರ್ಮವಿಧಯಃ ಪ್ರವರ್ತಂತೇ! ಆರೋಪಿತ ಬ್ರಾಹ್ಮಣ್ಯದಿಂದ ಎಲ್ಲಾ ಕರ್ಮವಿಧಿಗಳೂ ಉಪಪನ್ನವಾಗುವುವು. ಆರೋಪಿತ ಬ್ರಾಹ್ಮಣ್ಯವು ನಿನಗಿರುವುದು'' ಎಂದು ಹೇಳಿದರು. ಗೊಡ್ಡು ವೈದಿಕನು ಪಶುಪ್ರಾಣಿಯು, ಬೆಪ್ಪುತಕ್ಕಡಿಯು. ತನ್ನ ವೈದಿಕತೆಗೂ, ಬ್ರಾಹ್ಮಣ್ಯಕ್ಕೂ ನಾಶವನ್ನು ಬೋಧಿಸುವ ವಾಕ್ಯವನ್ನು ಕೇಳಿಯೂ ಹೃಷ್ಟ ಚಿತ್ತನಾಗಿ ಮನೆಗೆ ತೆರಳಿದನು. ಇನ್ನು ಮೇಲೆ ಮಹಾರಾಜರು ಮಾಡುವ ಕಾನೂನುಗಳೂ ಅಜ್ಞದೃಷ್ಟಿಯಿಂದ ಮಾಡಿದುದು; ಜ್ಞಾನಿದೃಷ್ಟಿಯಿಂದ ಕಾನೂನುಗಳು ಇಲ್ಲ ಎಂದು ಹೇಳಬೇಕಾಗುವುದು. ಅಜ್ಞದೃಷ್ಟಿಯಿಂದ ಬ್ರಾಹ್ಮಣ್ಯವು ಸ್ಮಾರ್ತವೈಷ್ಣವರೇ ಮುಂತಾದವರಲ್ಲಿರುವುದು. ಸುಜ್ಞದೃಷ್ಟಿಯಿಂದ ಯಜ್ಞೋಪವೀತದ ನೂಲನ್ನು ಕೊರಳಿಗೆ ಕಟ್ಟಿದವರೆಲ್ಲಾ ಬ್ರಾಹ್ಮಣರು ಅಥವಾ ಯಾರೂ ಬ್ರಾಹ್ಮಣರಲ್ಲಾ, ಎಲ್ಲಾ ಒಂದೇ ಎಂದು ಪ್ರಾಪ್ತವಾಗುವುದು. ಹೀಗೆ ತಾನೇ ಅನೇಕರು ಈಗ ಹೇಳುತ್ತಿರುವರು. ಆರೋಪಿತ ಬ್ರಾಹ್ಮಣ್ಯವು ಮ್ಲೇಚ್ಛರಲ್ಲೂ ತುರುಷ್ಕರಲ್ಲೂ ಬರಬಹುದು. ಏವಂಚ ಇಂಥಾ ದೃಷ್ಟಿಭೇದಗಳ ಕಲ್ಪನೆಯು ಕಲ್ಪಕಶಿಖಾಮಣಿಗಳಾದ ಕಾದಂಬರೀಕಾರರಿಗೂ ಬರಲಾರದು. ಇದು ಹನ್ನೊಂದನೆಯ ವಂಚನೆಯು.

(13) ಪುನಃ ಈಶ್ವರನು ಸೃಷ್ಟಿಕರ್ತನು ಎಂದು ಶಂಕರಾಚಾರ್ಯರು ಹೇಳಿದರು. ಗೊಡ್ಡು ವೈದಿಕನು ಪ್ರಶ್ನಿಸಿದನು. ಶಂಕರಾಚಾ ರ್ಯರು ತತ್ವದ ರಕ್ಷಣಾರ್ಥವಾಗಿ, ''ಐಂದ್ರಜಾಲಿಕನಂತೆ'' ಎಂದು ಸೇರಿಸಿದರು. ಫಲಿತಾಂಶವೇನಾಯಿತೆಂದರೆ, ಐಂದ್ರಜಾಲಿಕನು ಮಾವಿನ ಹಣ್ಣನ್ನು ಸೃಷ್ಟಿಮಾಡಲಿಲ್ಲ. ಹಾಗೆಯೇ ಈಶ್ವರನೂ ಜಗತ್ತನ್ನು ಸೃಷ್ಟಿಸಲಿಲ್ಲ ಎಂದು ಅರ್ಥವಾಯಿತು. ಇದರಿಂದ ಒಂದೇ ವಾಕ್ಯದಿಂದ ಈಶ್ವರನ ಸಕಲ ಮಹಿಮಾಪಹಾರವಾದ ಮಹಾವಂಚನೆಯು ಪ್ರಾಪ್ತವಾಯಿತು.

(14) ಮತ್ತೊಮ್ಮೆ ಶಂಕರಾಚಾರ್ಯರು ''ಆತ್ಮಾಚ ಬ್ರಹ್ಮ'' ಎಂದರೆ ಜೀವನೇ ಬ್ರಹ್ಮನು ಎಂದು ಹೇಳಿಬಿಡುವರು. ಬ್ರಹ್ಮನು ಜೀವ ಭಾವವನ್ನು ಹೊಂದುವುದು ಹೇಗೆ? ಎಂದು ಗೊಡ್ಡುವೈದಿಕನು ಪ್ರಶ್ನೆಮಾಡುವನು. ಅವಿದ್ಯೆಯಿಂದ ಎಂದು ಶಂಕರಾಚಾರ್ಯರು ಹೇಳಿಬಿಡುವರು. ಅವಿದ್ಯೆಯು ಶಂಕರಾಚಾರ್ಯರ ಹೃದಯದ ರತ್ನಮಾಲೆಯು. ಅದು ಅವರ ಮುದ್ದಿನ ಗಿಣಿಯು. ಆದರೆ ಇಂಥಾ ಹೃದಯಮಾಣಿಕ್ಯವು ಎಲ್ಲಿಂದ ಬಂತು? ಸೂರ್ಯನಂತಿರುವ ಬ್ರಹ್ಮನಿಗೆ ಅಂಧಕಾರದಂತಿರುವ ಅವಿದ್ಯೆಯು ಹೇಗೆ ಬಂತು? ಪೂರ್ಣವ್ಯಾಪ್ತನಾದ ಬ್ರಹ್ಮನಿಗೆ ಪರಿಚ್ಛಿನ್ನವಾದ ಅವಿದ್ಯೆಯು ಹೇಗೆ ಬಂದಿತು ? ತೂತಿಲ್ಲದಿರುವ ಬ್ರಹ್ಮನಿಗೆ ತುಂಡು ಮಾಡುವ ಅವಿದ್ಯೆಯು ಹೇಗೆ ಬಂತು? ಇತ್ಯಾದಿ ಪ್ರಶ್ನೆಗಳನ್ನು ಕೇಳಿದರೆ ಶಂಕರಾಚಾರ್ಯರು ಉತ್ತರ ಹೇಳಲಾರರು? ಆದ ಮಾತ್ರಕ್ಕೆ ನಮ್ಮ ಮತವು ಸರಿಯಾಗಲಿಲ್ಲವೆಂದು ಒಪ್ಪುವ ವಿನಯಾನ್ವಿತೆಯು ಅವರಲ್ಲಿಲ್ಲ. ಕೆಲವರು ವೈದಿಕರು ಸಭೆಯಲ್ಲಿ ತಪ್ಪು ಹೇಳಿದರೂ ಛಲದಿಂದ ತಮ್ಮ ಹಟವನ್ನೇ ಸಾಧಿಸುವುದಕ್ಕೆ ಯತ್ನಿಸುವರು. ಕೆಲವರು ಬಾಲಕರು ಅನ್ಯಾಯವೆಂದು ತೋರಿದಮೇಲೂ, ತಮ್ಮ ಮುಷ್ಕರವನ್ನು ರೋದನದಿಂದಲೂ ಲಂಘನದಿಂದಲೂ ಸಾಧಿಸುವರು. ಪ್ರಕೃತದಲ್ಲಿ

ಅವಿದ್ಯಾಪ್ರಾಪ್ತಿಗೆ 'ನಿರ್ಗುಣಬ್ರಹ್ಮವಾದ'ದಲ್ಲಿ ಅವಕಾಶವೇ ಇಲ್ಲದಿರುವುದು. ಯಾವ ಯುಕ್ತಿಯನ್ನೂ ಹೇಳಲಾಗುವುದಿಲ್ಲವೆಂದೂ ಶಂಕರಾಚಾರ್ಯರಿಗೆ ಗೊತ್ತು. ಇದು ಅದ್ವೈತ ಪಂಡಿತರ ಜ್ಞಾನಮದದ ಹೊರಗಿನ ಎಲ್ಲೆಯ ಮಾತು:-

'ದುರ್ಘಟತ್ವಮವಿದ್ಯಾಯಾಃ ಭೂಷಣಂ ನ ತು ದೂಷಣಂ। ಕಥಂ ಚಿದ್ಘಟಮಾನತ್ವೇಽವಿದ್ಯಾತ್ವಂ ದುರ್ಘಟಂ ಭವೇತ್॥''

ಯುಕ್ತಿಯಿಂದ ಪ್ರತಿಪಾದನೆ ಮಾಡುವುದಕ್ಕೆ ಬರದಿರುವುದೇ ಅವಿದ್ಯೆಯ ಲಕ್ಷಣವು. ಯುಕ್ತಿಯಿಂದ ಪ್ರತಿಪಾದನೆ ಮಾಡುವುದಕ್ಕೆ ಬರುವುದಾದರೆ ಅದು ಅವಿದ್ಯೆಯು ಹೇಗಾಗುವುದು.?

ಈ ಮಾತುಗಳಲ್ಲಿ ತೋರಿಬರುವ ತತ್ವಜ್ಞಾನಾಂಧಕಾರವನ್ನು ಇನ್ನೂ ಮೂರುಲೋಕಗಳಲ್ಲಿ ಮಹಾದೇವರು ತ್ರಿನೇತ್ರಗಳಿಂದ ಹುಡುಕಿದರೂ ಕಂಡು ಹಿಡಿಯಲಾರರು. ಇದು ತತ್ವವಿಚಾರಶೂನ್ಯತೆಯಿಂದ ಜನಿಸಿದ ದಿವಾಳಿತನದ ವಾದವು. ಭಾರತೀಯ ಬ್ರಹ್ಮವಿಚಾರಕ್ಕೆ ಕಳಂಕವನ್ನು ತರತಕ್ಕ ಮತಿಗೆಟ್ಟ ಮಾನವನ ತೊದಲು ನುಡಿಯು.

ವಸ್ತುತತ್ವವೇನೆಂದರೆ, ಅವಿದ್ಯೆಯ ಪೂರ್ವೋತ್ತರಗಳನ್ನು ಸರಿಯಾಗಿ ಹೇಳುವುದಕ್ಕೆ ಬರದಿದ್ದರೆ ಅವಿದ್ಯೆಯೆಂಬ ಪದಾರ್ಥವೇ ಸಿದ್ಧಿಸುವುದಿಲ್ಲ. ಅವಿದ್ಯೆಯೆಂಬ ಸಿದ್ಧವಾದ ಪದಾರ್ಥವನ್ನು ಅಂಗೀಕರಿಸುದುದರಿಂದ ಶಂಕರಾಚಾರ್ಯರ ಅವಿದ್ಯಾವಾದವು ಅಪ್ರಮಾಣಿಕವು ಎಂದು ಸಿದ್ಧವಾಯಿತು. ಅವಿದ್ಯೆಯು ಉಂಟು, ಯುಕ್ತಿಯಿಂದ ಪ್ರತಿಪಾದಿಸುವುದಕ್ಕೆ ಬರದಿರುವುದೇ ಅದರ ಲಕ್ಷಣವು ಎಂದು ಸಿದ್ಧವಾಗುವುದಿಲ್ಲ. ಒಂದು ವಾದದ ಮೇಲೆ ಒಂದು ದೋಷವನ್ನು ತೋರಿಸಿದರೆ, ಆ ವಾದವು ಸುಳ್ಳು ಹೇಳುವುದು, ಅಪ್ರಮಾಣಿಕವು, ಅಂಗೀಕಾರಾರ್ಹವಲ್ಲ ಎಂದು ಸಿದ್ಧವಾಗುವುದೇ ಹೊರತು, ಆ ವಾದವು ಸತ್ಯವನ್ನು ಬೋಧಿಸತಕ್ಕದ್ದು, ದೋಷಗ್ರಸ್ತವಾಗಿರುವುದೇ ಅದರ ಸ್ವಭಾವವು ಎಂದು ಸಿದ್ಧವಾಗುವುದಿಲ್ಲ. ನಿನ್ನ ಧರ್ಮಪತ್ನಿಯು ವ್ಯಭಿಚಾರ ಮಾಡಿರುವಳು. ಅವಳು ಧರ್ಮಪತ್ನಿಯಲ್ಲ ಎಂದು ಹೇಳಿದರೆ, ಅವಳು ಧರ್ಮಪತ್ನಿಯೇ, ವ್ಯಭಿಚಾರಮಾಡುವುದೇ ಧರ್ಮಪತ್ನಿಯ ಲಕ್ಷಣವು ಎಂದು ಉತ್ತರ ಕೊಡುವವನ ಚಾತುರ್ಯಕ್ಕೆ ತಲೆತೂಗೋಣವೋ? ಘೋರವಾದ ಅನೃತವನ್ನು ನೋಡಿ ಕೋಪಿಸಿ ಕೊಳ್ಳೋಣವೋ? ನಮ್ಮ ಅವಿದ್ಯೆಯು ವೇಶ್ಯಾಸ್ತ್ರೀಯಾಗಿರುವಳು ಎಂದು ಕೆಲವರು ಪುನಃ ಹೇಳುವರು. ನಿತ್ಯಬ್ರಹ್ಮಚಾರಿಯಾದ ಬ್ರಹ್ಮನ ಹತ್ತಿರ ಇರುವಳು ಬರುವುದು ಹೇಗೆ? ಬಂದರೆ ಮಾಡುವುದೇನು ಎಂದು ಕೇಳಿದರೆ ಬ್ರಹ್ಮಚಾರಿಗಳನ್ನು ಕೆಡಿಸುವುದೇ ವೇಶ್ಯೆಯ ಸ್ವಭಾವವು ಎಂದು ಉತ್ತರವನ್ನೀಯುವರು. ಆದರೆ ಇದರಿಂದಲೂ ಅಭಿಮತವು ಸಿದ್ಧವಾಗಲಿಲ್ಲ. ನಿತ್ಯಬ್ರಹ್ಮಚಾರಿಯ ಸಮೀಪದಲ್ಲಿ ಎಂಥಾ ವೇಶ್ಯೆಯಾದರೂ ಏನೂ ಮಾಡಲಾರಳು. ನಮ್ಮ ಹುಡುಗನು ನಿತ್ಯಬ್ರಹ್ಮಚಾರಿಯೆಂದು ಒಪ್ಪಿ ಅವನು ವೇಶ್ಯೆಯಿಂದ ಗ್ರಸ್ತನಾದನು. ಬ್ರಹ್ಮಚಾರಿಯನ್ನು ಕೆಡಿಸುವುದೇ ವೇಶ್ಯೆಯ ಸ್ವಭಾವ ಎಂಬ ಮಾತು ಹೇಗೆ ವಿರುದ್ಧವಾದುದರಿಂದ ಅಪರಿಗ್ರಾಹ್ಯವೋ ಹಾಗೆಯೇ ನಿರ್ಗುಣಬ್ರಹ್ಮನು ಒಬ್ಬನೇ ಇರುವನು ಎಂದು ಹೇಳಿ ಅವನು ಅವಿದ್ಯೆಯಿಂದ ಗ್ರಸ್ತನಾದನು; ಆ ಅವಿದ್ಯೆಯ ಸ್ವರೂಪವನ್ನು ಹೇಳುವುದಕ್ಕೆ ಬರದಿರುವುದೇ ಅದರ ಲಕ್ಷಣವು ಎಂದು ಹೇಳುವ ವಾದವು ಪ್ರಾಜ್ಞರಿಂದ ತಿರಸ್ಕಾರಾರ್ಹ ವಾಗಿರುವುದು. ಆದರೆ ಸಾಂಬಶಾಸ್ತ್ರಿಗಳಿಗೆ ಇದು ಸಮಂಜಸವಾಗಿ ತೋರಬಹುದು. ಬೀಗರ ಹಾಡಿನಂತೆ ಮಾಧ್ವರು ಅದ್ವೈತ ಮತನಿಂದೆಯನ್ನು ಒಲಿಸಿಕೊಂಡಿರುತ್ತಾರೆ ಎಂದು ಹೇಳಿದ ಶಾಸ್ತ್ರಿಗಳಿಗೂ ಅದ್ವೈತತತ್ವದ ಅವಿದ್ಯಾವಾದವು ಸಮಂಜಸವೇ ಆಗಿರುವುದು.

ಸೂರ್ಯನಿಗೆ ಅಂಧಕಾರವು ಬರುವುದು ಹೇಗೆ? ಅಂಧಕಾರವು ಯಾವ ರೀತಿಯಿಂದಲೂ ಸೂರ್ಯನಲ್ಲಿ ತೋರುವುದಕ್ಕೆ ಕಾರಣವಿಲ್ಲವಲ್ಲಾ! ಎಂದು ಹೇಳಿದರೆ, ಪ್ರಾಜ್ಞನು ಸೂರ್ಯನಲ್ಲಿ ಅಂಧಕಾರವು ಇರುವುದಿಲ್ಲ ಎಂದು ನಿಶ್ಚಯಿಸಿದನು. ಶಂಕರಾಚಾರ್ಯರಾದರೋ ಸೂರ್ಯನಲ್ಲಿ ಅಂಧಕಾರವಿರುವುದು ನಿಜ; ಅಂಧಕಾರವು ತೋರುವುದಕ್ಕೆ ಕಾರಣವಿಲ್ಲ ಎಂಬುದೂ ನಿಜ; ತೋರುವುದಕ್ಕೆ ಕಾರಣವಿಲ್ಲದೇ ಇರುವುದೇ ಅಂಧಕಾರದ ಸ್ವಭಾವವು ಎಂದು ಹೇಳುವರು. ಕೋರ್ಟಿನಲ್ಲಿ ನ್ಯಾಯಾಧಿಪತಿಯು ಸಾಕ್ಷಿಗಾರನನ್ನು ಕುರಿತು ಹೇಳುವನು:-''ಪ್ರತಿವಾದಿಯು ಸತ್ಯವಾದಿಯು. ಅವನು ಒಂದೇ ರೀತಿಯಿಂದ ಸಂಭಾಷಣೆಯನ್ನು ಕೊಟ್ಟಿರುವನು. ನಿನ್ನ ಮಾತುಗಳು ಪರಸ್ಪರವಿರುದ್ಧವಾದುದರಿಂದ ಅವನ ಸ್ಟೇಟ್‌ಮೆಂಟ್ ಅನ್ನು ಕೆಡಿಸುವ ಸಾಮರ್ಥ್ಯವಿಲ್ಲ''ವೆಂದು ಹೇಳುವನು. ಅದಕ್ಕೆ ಶಂಕರಾಚಾರ್ಯರ ಶಾಲೆಯಲ್ಲಿ ಶಿಕ್ಷಿತನಾದ ಸಾಕ್ಷಿಗಾರನು ''ನನ್ನ ಮಾತುಗಳು ಪ್ರತಿವಾದಿಯ ಸ್ಟೇಟ್‌ಮೆಂಟ್ ಅನ್ನು ನಾಶಮಾಡುವುದರಲ್ಲಿ ಸಮರ್ಥವೇ ಆಗಿರುವುವು. ನನ್ನ ಮಾತುಗಳು ಪರಸ್ಪರ ವಿರುದ್ಧವಾಗಿ ಯುಕ್ತಿರಹಿತವಾಗಿರುವುದು ನಿಜವು. ಪರಸ್ಪರವಿರುದ್ಧವಾಗಿರುವುದೇ ನನ್ನ ಮಾತಿನ ಸ್ವಭಾವ ಲಕ್ಷಣವು. ಆದುದರಿಂದ ಚಿಂತೆಯಿಲ್ಲ '' ಎಂದು ಹೇಳುವನು. ನ್ಯಾಯಾಧಿಪತಿಯು ಏನು ಮಾಡುವನೆಂದು ಪ್ರಾಜ್ಞರೇ ತಿಳಿಯಬಹುದು.

ಈ ಕಾರಣಗಳ ಪರಾಮರ್ಶದಿಂದಲೇ ಶ್ರೀಹರ್ಷಕಾರನು ಹೇಳಿರುವ

''ಅನವಸ್ಥಾದಯೋ ದೋಷಾಃ ಸತ್ತಾನಿಘ್ನಂತಿ ವಸ್ತುನಃ। ಅದ್ವೈತಿನಾಂತೇಸುಹೃದಃ ಪ್ರಪಂಚೇತತ್ಪ್ರಸಂಜಕಾಃ॥

ಇತ್ಯಾದಿ ವಿಷಯಗಳು ಹಳ್ಳಿಯ ಗೌಡರನ್ನು ಮೋಹಿಸತಕ್ಕ ವಂಚನೋಪಾಯವಾಗುವುದೇ ಹೊರತು, ವೇದಾಂತ ವಿಚಾರ ಮಾಡುವಾಗ ಲಜ್ಜಾಸಹಿತನಾದವನು ಸಭೆಯಲ್ಲಿ ಹೇಳತಕ್ಕದ್ದಲ್ಲ. ಆತ್ಮಾಶ್ರಯ, ಅನ್ಯೋನ್ಯಾಶ್ರಯ, ಅನವಸ್ಥಾ ಇತ್ಯಾದಿ ದೋಷಗಳು ಅದ್ವೈತಿಗಳಿಗೆ

ಪ್ರಿಯವಾದವುಗಳೇ. ಏಕೆಂದರೆ ಈ ದೋಷಗಳು ಬಂದರೆ ಪ್ರಪಂಚವು ಮಿಥ್ಯಾ ಎಂದು ನಿಶ್ಚಿತವಾಗುವುದು ಎಂದು ಶ್ರೀಹರ್ಷಕಾರನ ತಾತ್ಪರ್ಯವು. ಇದು ದೊಡ್ಡ ಸುಳ್ಳು. ಈ ದೋಷಗಳು ಬರುವುದರಿಂದ ಪ್ರಪಂಚ ಮಿಥ್ಯಾ ಎಂದು ಹೇಳುವ ವಾದವು ತಪ್ಪು ಎಂದು ಏರ್ಪಡುವುದು. ಅದು ಪರಿತ್ಯಾಜ್ಯವು; ಅವಿದ್ಯಾವಾದವು ಅಪ್ರಾಮಾಣಿಕವು. ಆದುದರಿಂದ ಪ್ರಪಂಚವು ಮಿಥ್ಯಾ ಎಂದು ಹೇಳಕೂಡದು ಎಂದು ಸಿದ್ಧವಾಗುವುದು.

ಅಪ್ರಾಮಾಣಿಕ ತತ್ವಗಳನ್ನು ಸ್ವೀಕರಿಸಿ, ಸುಳ್ಳು ಸುಳ್ಳು ಪರಂಪರೆಗಳನ್ನು ಕಲ್ಪಿಸಿ, ಯುಕ್ತಿವಿರೋಧವು ನಮ್ಮ ವಾದಕ್ಕೆ ಸ್ವಭಾವವು, ಆತ್ಮಾಶ್ರಯತ್ವಾದಿ ದೋಷಗಳು ನಮಗೆ ಭೂಷಣಗಳು ಎಂದು ಒಪ್ಪಿಗೆಯನ್ನು ಕೊಡುವುದಕ್ಕಿಂತ ಹೆಚ್ಚು ವಂಚನೆಯು ಜ್ಞಾನಮಾರ್ಗದಲ್ಲಿ ದೊರಕಲಾರದು. ಈ ತತ್ವವೇ ಹಿಂದೂ ತತ್ವವೆಂದು ಭ್ರಮಿಸಿ, ಆಂಗ್ಲೇಯರು ಪುನಃ ಪುನಃ ಖಂಡನೆ ಮಾಡುವರು. ಆರ್ಚರ್ ಸಾಹೇಬನು ಹೇಳುತ್ತಾನೆ :- "Hindu philosophy is after all too human to be logical."
ಹಿಂದೂ ತತ್ವವು (ಅದ್ವೈತತತ್ವವು) ಹೆಚ್ಚು ಮಾನುಷ ವ್ಯಾಪಾರಯುಕ್ತವಾದುದರಿಂದ ಯುಕ್ತಿಗಳನ್ನು ಮೀರಿದುದು; ಎಂದರೆ ದೋಷಿಗಳಾದ ಮನುಷ್ಯರಿಂದ ರಚಿಸಲ್ಪಟ್ಟುದುದರಿಂದ, ಸ್ವಕಪೋಲಕಲ್ಪಿತ, ಅಭಿಪ್ರಾಯಮಯವಾಗಿರುವುದೇ ಹೊರತು ಯುಕ್ತಿಗಳಿಂದ ಉಪಪಾದಿಸಿ ತೋರಿಸಿಕೊಡುವುದಕ್ಕೆ ಬರಲಾರದು ಎಂದು ಅರ್ಥವು. ಇದು ಮತ್ತೊಬ್ಬ ಗ್ರಂಥಕರ್ತನ ಮಾತು.
"The position of Maya, and its denial, though a fact of positive experience has in it a mysteriousness which defies intelletual assimilation. Indeed, it is difficult to logically reconcile the claims of identity and causation" _______ Mahendranath Sircar. MA. Ph.D.

ಫಲಿತವಾದ ನಿರ್ಣಯವನ್ನು ನಾವು ಸೂಚಿಸಿ ಬಿಡುವೆವು. ಈಗ ಪ್ರಚಾರದಲ್ಲಿರುವ ಅದ್ವೈತ ಮತಕ್ಕೆ ಸೃಷ್ಟಿಕರ್ತರು ಗೌಡಪಾದ, ಶಂಕರಾಚಾರ್ಯರು. ಇದು ಭಾಷಾಶೈಲಿ ಮುಂತಾದ ರೂಪಾಂತರಗಳಿಂದ ಆಚ್ಛಾದಿತವಾದ ಬೌದ್ಧಮತವೇ. ಇದರಲ್ಲಿಯೂ ಶಂಕರಾಚಾರ್ಯರ ಬುದ್ಧಿಯೂ, ಸಾಹಸವೂ ಅಧಿಕವೆಂಬುದರಲ್ಲಿ ಸಂಶಯವಿಲ್ಲ. ಇವರು ಬಾಲ್ಯದಲ್ಲಿಯೇ ಅಪರಿಮಿತವಾದ ವೇದಾದಿಗಳ ಜ್ಞಾನವುಳ್ಳವರಾಗಿ ಉತ್ತಮವಾದ ಧಾರಣಾಶಕ್ತಿಯಿಂದ ಸಹಿತರಾಗಿ, ದಿವ್ಯಶೈಲಿಯಲ್ಲಿ ಗ್ರಂಥರಚನೆ ಮಾಡುವುದಕ್ಕೂ ಸಮರ್ಥರಾದರು. ಆದರೆ ಪರಂಪರೋಪದೇಶದಿಂದ ಪ್ರಾಪ್ತವಾದ ನಿಜತತ್ತ್ವದ ಗಂಧವು ಇವರ ಜ್ಞಾನ ದೃಷ್ಟಿಗೆ ಗೋಚರವಾಗದುದರಿಂದ, ಕೇವಲ ಸ್ವಪ್ರತಿಭೆಯಿಂದ ಮಹತ್ತಾದ ವೇದಾಂತತತ್ವ ನಿರ್ಮಾಣರೂಪವಾದ ಕಟ್ಟಡದ ಕೆಲಸದಲ್ಲಿ ಪ್ರವೃತ್ತರಾದರು. ''ವೇದವಿದೇವಚಾಹಂ'' ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ಆತನ ಅನುಗ್ರಹದಿಂದಲೇ ಯಥಾರ್ಥವಾದ ವೇದಾರ್ಥವು ಇತರರಿಗೆ ಬ್ರಹ್ಮಾದಿದೇವತೆಗಳ ಪರಂಪರೆಯಿಂದ ಉಪದಿಷ್ಟವಾದರೆ ಬರುವುದು. ಪರಂಪರೋಪದೇಶದಿಂದ ಸೂಕ್ಷ್ಮರಹಸ್ಯಗಳನ್ನು ಸಾಕ್ಷಾತ್ಕರಿಸದೇ, ಅಥವಾ ಪರೋಕ್ಷದಿಂದಲಾದರೂ ತಿಳಿಯದೆ, ಸೂತ್ರಭಾಷ್ಯಾದಿಗಳನ್ನು ರಚಿಸುವುದಕ್ಕೆ ಪ್ರವೃತ್ತನಾಗುವ ಪಂಡಿತನು ಅವನು ಉದ್ದಾಮಬಿರುದಾಂಕಿತನಾದರೂ ಗೊಂಡಾರಣ್ಯದಲ್ಲಿ ಸಂಚರಿಸುತ್ತಾ ತೊಡಕುಗಳಿಂದ ಪೂರ್ಣವಾದ ಗಂಟು ಮುಳ್ಳುಗಳ ಪೊದೆಯಲ್ಲಿ ಸಿಕ್ಕಿಬೀಳುವ ಉನ್ಮತ್ತ ಆನೆಯಂತೆ, ಸೂಕ್ಷ್ಮತತ್ವಗಳ ಪ್ರತಿಪಾದನೆಯಲ್ಲಿ ಯಥಾರ್ಥ ವನ್ನೂ ನಿರೂಪಿಸುವುದಕ್ಕೂ, ಕ್ಲಿಷ್ಟವಾದ ವೇದವಾಕ್ಯಗಳ ನಿಜತಾತ್ಪರ್ಯವನ್ನು ನಿರ್ಣಯಿಸುವುದಕ್ಕೂ ಅಸಮರ್ಥನಾಗಿ, ತಾನೂ ಅತ್ಯಂತ ದುಃಖಪಟ್ಟು, ತನ್ನನ್ನು ನಂಬಿದ ಇತರ ಅನುಯಾಯಿಗಳನ್ನೂ ಭಯಂಕರವಾದ ಆಪತ್ತಿನಲ್ಲಿ ಬೀಳಿಸುವುದು ನಿಶ್ಚಯವು. ತತ್ವೋಪದೇಶರೂಪವಾದ ಕಾರ್ಯವು ಒಂದು ಮಹಡಿಯ ಮನೆಯನ್ನು ಕಟ್ಟುವಂಥಾ ಸಣ್ಣಕೆಲಸವಲ್ಲ. ಅದು ಬಹಳ ಜವಾಬ್ದಾರಿಯ ಕೆಲಸವು. ಪರಬ್ರಹ್ಮನನ್ನೂ, ಬ್ರಹ್ಮಾದಿ ದೇವತೆಗಳನ್ನೂ, ಸ್ವರ್ಗಾದಿ ಫಲಗಳನ್ನೂ, ಯಜ್ಞಾದಿಕರ್ಮಗಳನ್ನೂ, ಜಗತ್ಸರ್ಜನಾದಿ ಬ್ರಹ್ಮಮಹಿಮೆಗಳನ್ನೂ ವಿಷಯವಾಗಿ ಒಳಗೊಂಡಿರುವ ವೇದಾರ್ಥವಿಚಾರವು ಕಂದುಕದ ಕ್ರೀಡೆಯಂತೆ ಉಪೇಕ್ಷಣೀಯವಾದ ಆಟ ವಲ್ಲ. ಚೆಂಡಾಟದಲ್ಲಿ ಒಂದು ಚೆಂಡು ಬಚ್ಚಲಿಗೆ ಬಿದ್ದರೆ ಚಿಂತಿಲ್ಲ. ಆದರೆ ಮುಕ್ತಿಹೇತುವಾದ ಜ್ಞಾನಜನಕವಾದ ವೇದಾಂತ ಶಾಸ್ತ್ರನಿರ್ಣಯದಲ್ಲಿ ಒಂದು ತತ್ವವನ್ನು ಅಯಥಾರ್ಥವಾಗಿ ಪ್ರತಿಪಾದಿಸಿದರೆ, ಅಂಥಾ ಉಪಾಸನೆಯು ನಿಷ್ಫಲವೂ ವಿರುದ್ಧ ಫಲಜನಕವೂ ಆಗುವುದು. ಸಹಸ್ರಬಾಹುಗಳುಳ್ಳ ಕಾರ್ತವೀರ್ಯನೇ ಪುನಃ ಆಲೋಚಿಸಿ, ಈ ಮಹತ್ಕಾರ್ಯದಲ್ಲಿ ಪ್ರವರ್ತಿಸಬೇಕು. ಸಹಸ್ರ ವದನನಾದ ಆದಿಶೇಷನೇ ತನ್ನ ನಿರ್ಣಯವನ್ನು ಹೃದಯದಲ್ಲಿ ಚೆನ್ನಾಗಿ ಧರಿಸಿ, ಉಪದೇಶಕ್ಕೆ ಆರಂಭಿಸಬೇಕು. ಇಂಥಾ ನಿಬಂಧನೆ ಗಳನ್ನು ಮೀರಿ ಸ್ವಾತಂತ್ರ್ಯದಿಂದ ಸಾಹಸ ಮಾಡಿದರೆ ಪರಿಣಾಮದಲ್ಲಿ ಫಲವು ಭಯಂಕರವೆಂದು ಸಕಲ ಶಾಸ್ತ್ರಗಳೂ ಹೇಳಿರುತ್ತವೆ.

ಕಿಂಚ ದ್ವೈತಾದ್ವೈತವಾದದಲ್ಲಿ ಯಾವುದು ಸರಿಯೋ ನಾವು ತಿಳಿಯಲಾರೆವು, ಎಂದು ಸಂಶಯಚಿತ್ತರೂ ಕೂಡ ದ್ವೈತ ಮತವನ್ನೇ ಅವಲಂಬಿಸುವುದು ನ್ಯಾಯಪ್ರಾಪ್ತವಾಗಿರುವುದು. ದ್ವೈತವಾದವು ಯಥಾರ್ಥವಾದರೆ ಅದ್ವೈತೋಪಾಸನೆಯಿಂದ ಅಂಧಃತಮಃ ಪ್ರಾಪ್ತಿಯೆಂಬ ಘೋರವಾದ ಫಲವು ತಪ್ಪುವುದಿಲ್ಲ. ಅದ್ವೈತತತ್ವವು ಯಥಾರ್ಥವಾದರೆ, ಅದ್ವೈತಮತದ ರೀತಿಯಿಂದಲೇ

ದ್ವೈತೋಪಾಸನೆಯಿಂದ ಯಾವ ಅನರ್ಥಪ್ರಾಪ್ತಿಯೂ ಇರುವುದಿಲ್ಲ. ಆದುದರಿಂದ ಸಂಶಯದೆಶೆಯಲ್ಲಿಯೂ ಕೂಡ ದ್ವೈತತತ್ವದ ರೀತಿಯಿಂದ ಅನುಷ್ಠಾನವು ಉಚಿತವು. ಪರಂತು ನಾವು ತೋರಿಸಿರುವ ದೋಷಾನುಸಂಧಾನವುಳ್ಳವರಿಗೆ ನಿರ್ಣಯಜನಕ ಸಾಮಗ್ರಿಯೂ ಇರುವುದು. ವಸ್ತುತತ್ವವು ಹೀಗೆ ಇರುವುದು. ಸ್ವಭಾವಾನುಸಾರಿಯಾಗಿ ಪ್ರಾಜ್ಞರು ತಮಗೆ ಸಮ್ಮತವಾದ ಮತವನ್ನು ಚುನಾಯಿಸಬಹುದು. ಇಲ್ಲಿಗೆ ಚಪೇಟಿಕಾತಾಂಡವೋತ್ಸವದಲ್ಲಿ ಅದ್ವೈತವಾದದ ಕಾಪಟ್ಯ ಪ್ರದರ್ಶನವೆಂಬ ದಶಮೋಲ್ಲಾಸವು ಮುಗಿದುದು.

## XI ಅದ್ವೈತೋಪಾಸನೆಯ ಭಯಂಕರತ್ವ ಪ್ರದರ್ಶನವು ಮತ್ತು ತಪ್ತಮುದ್ರಾಧಾರಣೆಯ ವೈದಿಕತ್ವ ಸಮರ್ಥನವು.

ಇನ್ನು ಸ್ಮಾರ್ತರಾಗಿದ್ದು ಸ್ವಕುಲವನ್ನು ತ್ಯಜಿಸಿದ ವೈಷ್ಣವರು ''ಅನ್ಯರೇತಸರು'' ''ಪಿತೃದ್ರೋಹ, ಜಾರಜತ್ವಾದಿ ದೋಷಗಳಿಗೆ'' ಪಾತ್ರರು ಎಂಬ ಸಾಂಬಶಾಸ್ತ್ರಿಗಳ ದೂಷಣವನ್ನು ಪರಿಹರಿಸುವೆವು. ಮತೋದ್ಧಾರಕರಾದ ಶ್ರೀಮನ್ಮಧ್ವಾಚಾರ್ಯರ ಕಾಲದಲ್ಲಿಯೇ ನಡೆದುಹೋಯಿತು. ಐಕ್ಯವಾದಿಗಳೆಲ್ಲರೂ ಸೇರಿ ತಮ್ಮ ಗುಂಪಿಗೆ ಸೇರಿದ ಒಬ್ಬ ಅದ್ವೈತಪಂಡಿತರನ್ನು, ಅಕ್ರೂರನನ್ನು ಕೃಷ್ಣನ ಬಳಿಗೆ ಕಂಸನು ಕಳುಹಿಸಿದಂತೆ ಮಧ್ವಾಚಾರ್ಯರ ಸಂಗಡ ವಾಕ್ಯಾರ್ಥಕ್ಕೆ ಕಳುಹಿಸಿಕೊಟ್ಟರು. ಶುಭಶಕುನ ಗಳಾದವು. ಭೂತಳ, ಪಾತಾಳವೆಂಬ ಉಭಯಲೋಕದ ಅವೈಷ್ಣವರೂ--- ಸ್ವರ್ಗಲೋಕದಲ್ಲಿ ಅವೈಷ್ಣವರು ಇಲ್ಲವಷ್ಟೆ! ಹೃಷ್ಟಾತ್ಮರಾಗಿ ಎದ್ದು ಕುಳಿತರು. ಇಂದು ಕೃಷ್ಣೋತ್ತಮತ್ವವಾದವು ತ್ರಿಲೋಕದಿಂದ ಬಹಿಷ್ಕೃತವಾಗುವುದು. ಇಂದು ನಮ್ಮ ಶಿವನು ಅದ್ವೈತಾನಂದವನ್ನು ನಮಗೆ ಉಂಟುಮಾಡುವನು ಎಂದು ತಿಳಿದರು. ಆದರೆ ಏನಾಯಿತು? ಅಯ್ಯೋ ಪಾಪವೇ! ದುರ್ದೈವ! ವಾದದಲ್ಲಿ ಮಧ್ವಾಚಾರ್ಯರನ್ನು ಸೋಲಿಸಿ ಸ್ವಜನರನ್ನು ಸಂತೈಸುವೆನೆಂದು ಪ್ರತಿಜ್ಞೆಮಾಡಿ ಬಂದ ಆ ಬ್ರಾಹ್ಮಣನಿಗೆ ವೈಷ್ಣವ ಸನ್ಯಾಸಿ ಗಳು ಮಂಕುಬೂದಿ ಹಾಕಿ ಬಿಟ್ಟರು.[2] ಏನೋ ಮಾಯವಾಗಿ ಹೋಯಿತು. ''ಮಮಮಾಯಾ ದುರತ್ಯಯಾ'' ಎಂದು ಹೇಳುವ ಶ್ರೀಕೃಷ್ಣನಮಾಯೆಯೇ ಇರಬಹುದು. ಸಾಂಬಶಾಸ್ತ್ರಿಗಳಿಗೆ ಈ ಮೋಸಕರವಾದ ವಾಕ್ಯಾರ್ಥವು ತಿಳಿಯಲಿಲ್ಲವಂತೆ. ಆದರೆ ಈಚೆಗೆ ಶ್ರೀಮದುತ್ತರಾದಿ ಮಠದ ಸ್ವಾಮಿಗಳಿಗೂ, ತಿಲಕರಿಗೂ ಆದ ಸಂವಾದವು ಅವರಿಗೂ ಚೆನ್ನಾಗಿ ಗೊತ್ತು. ಆಗ ಅವರು ಆ ಕಂಬದ ಹಿಂದೆ ನಿಂತು ಚಾಚೂಬಿಡದೆ, ಕೇಳುತ್ತಿದ್ದರು. ಆದರೇನು? ಅವರಿಗೆ ಗಿಜಿಗಿಜಿ ಎಂಬ ಶಬ್ದವು ಕೇಳುತ್ತಿತ್ತು; ವಾಕ್ಯಗಳನ್ನು ಇಟ್ಟಿಗೆ ಕಂಬವು ಗುಳಕ್ ಎಂದು ನುಂಗಿ ಬಿಡುತ್ತಿತ್ತು. ಪ್ರಕೃತದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರು ಸೋತು ಹೋಗಿ, ಸ್ಮಾರ್ತರ ಪಂಗಡ ವನ್ನು ಪರಿತ್ಯಜಿಸಿ, ದೇಹವನ್ನು ಸುಡಿಸಿಕೊಂಡು, ಮಠದಿಂದ ಮುದ್ರೆಹೊಡೆಸಿಕೊಂಡು, ಕತ್ತಿಗುರಾಣಿಗಳನ್ನು ತೆಗೆದುಕೊಂಡು, ತಮ್ಮ ಸ್ವಜನರ ಮೇಲೆಯೇ ವಿಭೀಷಣನಂತೆ ಯುದ್ಧಕ್ಕೆ ಬಂದು ಬಿಟ್ಟರು. ಜಾತಿಕೆಟ್ಟು, ಪತಿತನಾಗಿ, ಭ್ರಷ್ಟನಾಗಿ ಹೋದ ಅವರನ್ನು ನೋಡಿ ಅದ್ವೈತಸಂಪ್ರದಾಯದ ಪ್ರವರ್ತಕರೆಲ್ಲಾ ಎರಡು ಕಣ್ಣುಗಳನ್ನು ಮುಚ್ಚಿಕೊಂಡರು. ಮೆದುಳಿನಲ್ಲಿದ್ದ ಎರಡು ಕಣ್ಣುಗಳನ್ನೂ ಮುಚ್ಚಿಕೊಂಡರು. ಆ ಕೋಪೋದ್ರೇಕದಲ್ಲಿ ಅವರ ಎದೆಯು ಬಿಗಿಯಿತು. ಅವರ ಕತ್ತು ಬೀರಿಕೊಂಡಿತು. ದೇಹವೆಲ್ಲಾ ಥರಥರನೇ ನಡುಗುತ್ತಿತ್ತು. ಸ್ವಲ್ಪ ಮುಗ್ಗುರಿಸಿದರು. ಆಗ ಅವರ ತಲೆಯು ಎದುರಿಗಿದ್ದ ಕಂಬಕ್ಕೆ ಢಿಕ್ಕಿ ಹೊಡೆಯಿತು. ಆ ನೋವೂ ಅವರಿಗೆ ಲಕ್ಷ್ಯವಿಲ್ಲ. ''ಚಂಡಾಲಾ ಹೋದೆಯಲ್ಲೋ ಮುಂಡೇ ಮಗನೇ'' ಎಂದು ಗಟ್ಟಿಯಾಗಿ ಕೂಗಿ ಹೇಳಿಬಿಟ್ಟರು. ಸಾಂಬಶಾಸ್ತ್ರಿಗಳೂ ಸಹ ಆ ಕಾಲದಲ್ಲಿದ್ದವರಂತೆ ಸ್ಪಷ್ಟವಾಗಿ ಬರೆದಿರುತ್ತಾರೆ. ಪುಟ 20ರಲ್ಲಿ;

''ಯಃ ಪುತ್ರಃ ಪಿತರಂ ದ್ವೇಷ್ಟಿ ತಂ ವಿದ್ಯಾದನ್ಯರೇತಸಂ॥'' ಯಾವನು ತಂದೆಯನ್ನು ದ್ವೇಷಿಸುವನೋ ಅವನನ್ನು ಜಾರಜನೆಂದು ತಿಳಿಯತಕ್ಕದ್ದು ಎಂಬ ಪ್ರಮಾಣಾನುಸಾರವಾಗಿ ಸ್ಮಾರ್ತರಾಗಿದ್ದು ವೈಷ್ಣವರಾದ ಇವರ ಮತ ಸ್ಥಾಪಕರಾದ ಮಧ್ವಾಚಾರ್ಯರಿಗೆ ಪಿತೃದ್ರೋಹ ಜಾರಜತ್ವ ದೋಷಗಳೂ ಸಂಭವಿಸುವುದಿಲ್ಲವೇ?'' ಎಂದುಕೇಳಿರುವರು. ಆಗಲೂ ತ್ರಿವಿಕ್ರಮ ಪಂಡಿತಾಚಾರ್ಯರನ್ನು ಒಬ್ಬಿಬ್ಬರು ಹೀಗೆಯೇ ಕೇಳಿಬಿಟ್ಟರು. ಆದರೆ ಶಾಸ್ತ್ರಿಗಳಷ್ಟು ಗರಗಸದ ವಾಣಿಯಿಂದ ಕೇಳಲಿಲ್ಲ, ಗಸಗಸೆ ಯಂತೆ ಮೃದುವಾಗಿ ಕೇಳಿದರು. ತ್ರಿವಿಕ್ರಮ

---

[2] ಮೋಕ್ಷೋಪಯೋಗಿಯಲ್ಲದ, ಪಾಂಡಿತ್ಯ ಪ್ರದರ್ಶನಾರ್ಥವಾದ ಒಂದು ವಾಕ್ಯಾರ್ಥದಲ್ಲಿ ಧರ್ಮಶಾಸ್ತ್ರದಲ್ಲಿ ಉಂಟೋ ಇಲ್ಲವೋ ಎಂದು ಸಂದಿಗ್ಧವಾದ ಒಂದು ಪಣವನ್ನು ಕಲ್ಪಿಸಿ, ಪತಿಪತ್ನಿಯರನ್ನು ಅಗಲಿಸಿ, ಮಂಡನ ಮಿಶ್ರರನ್ನು ವನಕ್ಕೆ ಶಂಕರಭಗವತ್ಪಾದರೇ ಕಳುಹಿಸಿರುತ್ತಾರೆ. ಇದನ್ನೇ ಧರ್ಮವೆಂದು ಅಂಗೀಕರಿಸಿದ ಶಾಸ್ತ್ರಿಗಳಿಗೆ, ಮೋಕ್ಷಪ್ರಯೋಜಕವಾದ ಬ್ರಹ್ಮಜ್ಞಾನವಿಷಯದಲ್ಲಿ ಪರಬ್ರಹ್ಮನಾದ ವಿಷ್ಣುವೇ ಮಿಥ್ಯಾ, ಅವನು ಸರ್ವೋತ್ತಮನಲ್ಲ ಇತ್ಯಾದಿ ರೀತಿಯಾಗಿ ವಾದಿಸುವ ತಂದೆತಾಯಿಗಳನ್ನಾದರೂ , ಗುರುವನ್ನಾದರೂ, ದೇವತೆಯನ್ನಾದರೂ ಜ್ಞಾನಮಾರ್ಗದಲ್ಲಿ ಮಾತ್ರ ಪರಿತ್ಯಾಗಮಾಡಬೇಕೆಂದು ಪ್ರಮಾಣ ಪೂರ್ವಕವಾಗಿ ಉಪನ್ಯಾಸಮಾಡಿದ ಶ್ರೀಮನ್ಮಧ್ವಾಚಾರ್ಯರು ಸ್ವಕುಲ ಪರಿತ್ಯಾಗಾದಿ ದೋಷಗಳಿಗೆ ಭಾಗಿಗಳಾಗಲಾರರು, ಮತ್ತು ಮಹತ್ತರ ಪುಣ್ಯವನ್ನೇ ಹೊಂದುವರು ಎಂದು ತಿಳಿಯದೇ ಹೋಯಿತೇ ?

ಪಂಡಿತಾಚಾರ್ಯರು ಏನು ಹೇಳಿದರು ಗೊತ್ತೋ? ಪಂಡಿತಾಚಾರ್ಯರು ಮಾತಾಡುವುದಕ್ಕೆ ಬಾಯಿ ತೆಗೆದರು. ಒಂದು ಗುಂಡುಸೂಜಿ ಬಿದ್ದಿದ್ದರೆ ಆ ಶಬ್ದವನ್ನು ಕೇಳಬಹುದಾಗಿತ್ತು. ಅವರು ನಿರೂಪಿಸಿದರೇ ನೆಂದರೆ:- ''ಪಿತೃದ್ವೇಷಿಯು ಜಾರಜನು, ಭ್ರಷ್ಟನು, ಚಂಡಾಲನು, ಸಂದೇಹವಿಲ್ಲ' ವೆಂದು ತ್ರಿವಿಕ್ರಮಪಂಡಿತಾಚಾರ್ಯರು ಇನ್ನೂ ಮುಂದೆ ಏನೇನೋ ಹೇಳುತ್ತಿದ್ದರು. ಅಷ್ಟರಲ್ಲಿ ಹರತಿ ಆಚಾರ್‍ರಂಥಾ ಒಬ್ಬ ಮಾಧ್ವರು ''ಅಯ್ಯೋ ಕೆಟ್ಟೆಯಲ್ಲೋ ಅಪ್ಪಾ!'' ಎಂದು ಕಿರಿಚಿಕೊಂಡರು. ತ್ರಿವಿಕ್ರಮ ಪಂಡಿತಾಚಾರ್ಯರು ಮುಂದುವರೆದರು:- ''ಪಿತೃದ್ವೇಷಿಯು ಸರ್ವಲೋಕಗರ್ಹಿತನು, ನಾಯಿಗಳೂ ಅವನ ಮಾಂಸವನ್ನು ತಿನ್ನಲಾರವು; ಅವನು ದಹನಾದಿ ಸಂಸ್ಕಾರಗಳಿಗೂ ಅರ್ಹನಲ್ಲ; ಆದುದರಿಂದಲೇ ಎಲೈ ಅದ್ವೈತಿ ಬ್ರಾಹ್ಮಣರುಗಳಿರಾ! ನೀವೆಲ್ಲರೂ ಜಗತ್ಪಿತನಾದ ನಮ್ಮ ನಾರಾಯಣನನ್ನು ದ್ವೇಷ ಮಾಡಬೇಡಿ. ನಾರಾಯಣನು ಮಿಥ್ಯಾ. ಹಿಂದೆ ಇರಲಿಲ್ಲ, ಈಗ ಇಲ್ಲ ಮುಂದೆ ಇರುವುದಿಲ್ಲ ಎನ್ನಬೇಡಿ. ನಿಮ್ಮ ಐಕ್ಯತತ್ವವು ಅವನಿಗೆ ಸಮ್ಮತವಲ್ಲ. ನಾನು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ನೀವು ಉತ್ಕೃಷ್ಟವಾದ ಬ್ರಹ್ಮಕುಲ ಪರಂಪರೆಯಿಂದ ಬಂದ ಬ್ರಾಹ್ಮಣರ ಯೋನಿಯಲ್ಲಿ ಹುಟ್ಟಿದವರು. ಷೋಡಶ ಸಂಸ್ಕಾರಗಳಿಂದ ಪವಿತ್ರತಮವಾದ ದೇಹವುಳ್ಳ ವೈದಿಕರು. ಆದರೆ ನಿರ್ಗುಣೋಪಾಸನೆಯಿಂದಲೂ, ನಾರಾಯಣ ದ್ವೇಷದಿಂದಲೂ, ಬ್ರಾಹ್ಮಣ್ಯವು ಹ್ರಾಸವಾಗುವುದಲ್ಲದೇ, 'ಯಃ ಪುತ್ರಃ ಪಿತರಂ ದ್ವೇಷ್ಟಿ ತಂ ವಿದ್ಯಾದನ್ಯರೇತಸಂ' ಎಂಬ ಪ್ರಮಾಣಾನುಸಾರವಾಗಿ ಪಿತೃದ್ರೋಹ ಜಾರಜತ್ವಾದಿ ದೋಷಗಳು ಸಂಭವಿಸುವುವು. ನಾರಾಯಣನು ಮಿಥ್ಯಾ ಎಂಬುದು ಪ್ರಬಲವಾದ ನಾರಾಯಣದ್ವೇಷವು. ಶ್ರೀಕೃಷ್ಣನು ನಮಗೆಲ್ಲಾ ತಂದೆಯು. ಶ್ರೀ ಕೃಷ್ಣನು ಹೇಳುತ್ತಾನೆ.

(1)''ಪಿತಾಹಮಸ್ಯ ಜಗತಃ''॥

(2) ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿಯಾಃ। ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ॥

ಪುರಾಣಾಂತರಗಳಲ್ಲಿ ಹೀಗೆ ಹೇಳಿರುತ್ತಾರೆ:-

(1)ತ್ವಮೇವ ಮಾತಾ ಚ ಪಿತಾ ತ್ವಮೇವ॥

(2) ಯೋಽನ್ಯಥೈವ ಸ್ಥಿತಂ ವಿಷ್ಣುಂ ಅನ್ಯಥಾ ಪ್ರತಿಪದ್ಯತೇ॥
ಕಿಂ ತೇನ ನ ಕೃತಂ ಪಾಪಂ ಚೋರೇಣ ಬ್ರಹ್ಮಹಾರಿಣಾ ॥

ಇತ್ಯಾದಿ ಬಹು ಪ್ರಮಾಣಗಳಿಂದ ನಾರಾಯಣನು ಜಗಜ್ಜನಕನು ಎಂದು ಸಿದ್ಧವಾಗುವುದು. ಮತ್ತು ನಾರಾಯಣನನ್ನು ಅನ್ಯಥಾ ಪ್ರತಿಪಾದನೆ ಮಾಡುವಂಥಾವನು ನಾರಾಯಣದ್ವೇಷಿಯೆಂದೆನಿಸಿ ಸಕಲ ಪಾಪಗಳನ್ನೂ ಮಾಡಿದವನಂತೆ ಆಗುವನೆಂದೂ ಶಾಸ್ತ್ರದಲ್ಲಿ ನಿಶ್ಚಯವಾಗಿರುವುದು.[33)] ತಂದೆಗಳು ದ್ವಿವಿಧರು, ಮುಖ್ಯತಂದೆಯು, ಅಮುಖ್ಯತಂದೆಯು. ಮುಖ್ಯತಂದೆಯು ಶ್ರೀಮನ್ನಾರಾಯಣನು. ಅಮುಖ್ಯತಂದೆಯು ಭೂಲೋಕದ ಮನುಷ್ಯ ತಂದೆಯು. ಪುತ್ರನಾದವನು ಉಭಯರಿಗೂ ಅವಿರೋಧ ವಾಗಿಯೇ ನಡೆಯಬೇಕು. ಮುಖ್ಯತಂದೆಯನ್ನು ನಿರವಧಿಕವಾಗಿ ಪ್ರೀತಿಸುತ್ತಾ, ಅಂಥಾ ಮುಖ್ಯತಂದೆಯ ಸೇವೆಗೆ ಪ್ರಯೋಜಕವಾದ ದೇಹವನ್ನು ಕೊಟ್ಟ ಮನುಷ್ಯತಂದೆಯನ್ನೂ, ಮುಖ್ಯತಂದೆಯ ಸೇವೆಗೆ ಪ್ರಯೋಜಕವಾದ ವಿದ್ಯೆಯನ್ನು ಕೊಟ್ಟ ಗುರುವನ್ನೂ, ಶಕ್ತ್ಯಾದಿಗಳನ್ನು ಕೊಟ್ಟ ದೇವತೆಯನ್ನೂ ಯಥಾಯೋಗ್ಯವಾಗಿ ಪ್ರೀತಿಸಬೇಕು. ಮುಖ್ಯತಂದೆಗೂ ಅಮುಖ್ಯ ಪಿತ್ರಾದಿಗಳಿಗೂ ವಿರೋಧವು ಬಂದರೆ, ತೂತು ಬಿದ್ದ ನಾವೆಯನ್ನು ಬಿಟ್ಟು

---

33 ಧರ್ಮಸಂಕಟ ಕಾಲದಲ್ಲಿ ''ಪಿತೄನಥ ಪಿತಾಮಹಾನ್'' ಎಂದರೆ ಪಿತೃಪಿತಾಮಹಂದಿರುಗಳನ್ನು ಯುದ್ಧದಲ್ಲಿ ಕೊಲ್ಲುವುದು ಹೇಗೆ? ಎಂದು ವಿಷಾದಗ್ರಸ್ತನಾಗಿದ್ದ ಅರ್ಜುನನಿಗೆ ಸ್ವವರ್ಣಾಶ್ರಮೋಚಿತ ಯುದ್ಧದಲ್ಲಿ ಧರ್ಮಕ್ಕೆ ವಿರೋಧಿಯಾದ ಪಿತೃಗಳನ್ನಾದರೂ ಕೊಲ್ಲಬಹುದೆಂಬ ಶ್ರೀಕೃಷ್ಣನ ತತ್ವವನ್ನು ಅವಲಂಬನೆ ಮಾಡಿಯೇ, ನಾರಾಯಣನ ದ್ವೇಷಿಗಳಾದ ಸರ್ವರನ್ನೂ ಅರ್ಜುನನು ಸಂಹರಿಸಿದನು. ಕೃಷ್ಣನು ಮಿಥ್ಯಾ ಎಂದು ಹೇಳುವ ಸಾಂಬಶಾಸ್ತ್ರಿಗಳು ದುರ್ಯೋಧನನ ಸೇನೆಯಲ್ಲಿ ಇದ್ದಿದ್ದರೆ ಅರ್ಜುನನು ಏನು ಮಾಡುತ್ತಿದ್ದನೆಂದು ವಾಚಕರೇ ತಿಳಿಯಬಹುದು. ಸಾಂಬಶಾಸ್ತ್ರಿಗಳು ಪಿತೃಸ್ಥಾನೀಯರಾಗಿ ಪ್ರಾಪ್ತರಾಗಿದ್ದರೂ, ''ಯಃ ಪುತ್ರಃ ಪಿತಂ ದ್ವೇಷ್ಟಿ ತಂ ವಿದ್ಯಾದನ್ಯರೇತಸಂ'' ಎಂದು ಉಪದೇಶಮಾಡಿದ್ದರೂ ತತ್ವಜ್ಞನಾದ ಶ್ರೀಕೃಷ್ಣನು ಸಂಹಾರವನ್ನೇ ಬೋಧಿಸುತ್ತಿದ್ದನು. ಜ್ಞಾನಿಯಾದ ಕ್ಷತ್ರಿಯಾಗ್ರಣಿಯಾದ ಅರ್ಜುನನು ಸಂಹಾರವನ್ನೇ ಮಾಡುತ್ತಿದ್ದನು. ಅರ್ಜುನನು ಕ್ಷತ್ರಿಯನು. ಆತನು ಶಸ್ತ್ರಯುದ್ಧದಲ್ಲಿ ಪ್ರವೃತ್ತನಾದನು. ತ್ರಿವಿಕ್ರಮಪಂಡಿತಾಚಾರ್ಯರು ಬ್ರಾಹ್ಮಣರು. ಅವರು ವಾಗ್ಯುದ್ಧದಲ್ಲಿ ಪ್ರವೃತ್ತರಾಗಿರುವರು. ಜ್ಞಾನಕಲಹದಲ್ಲಿ ಪ್ರತಿವಾದಿಯಿಂದ ಪ್ರತಿಪಾದಿತವಾದ ತತ್ವದ ಹೇಯತಾ ಪ್ರಕಟನವೇ ಸಂಹಾರವು. ಸಂಪ್ರತಿಪನ್ನವಾದ ಪ್ರಮಾಣಗಳ ಉಪನ್ಯಾಸವು ಇಲ್ಲದ ಶುಷ್ಕಬೈಗಳು ಅಧರ್ಮಕರವಾಗಿರುವುವು. ಇದರಿಂದ ಉತ್ತಮ ಧರ್ಮಕ್ಕೆ ವಿರೋಧವಿಲ್ಲದ ಸಾಮಾನ್ಯ ವಿಷಯದಲ್ಲಿ ''ಯಃ ಪುತ್ರಃ '' ಇತ್ಯಾದಿ ನ್ಯಾಯಗಳಿಗೆ ಪ್ರವೃತ್ತಿಯೆಂದು ಸುಲಭವಾಗಿ ನಿಶ್ಚಯಿಸಬಹುದು.

ಬಿಟ್ಟು ಉತ್ತಮವಾದ ಬೇರೆ ಜಹಜನ್ನು ಆಶ್ರಯಿಸಿ ಪ್ರವಾಹವನ್ನು ದಾಟುವ ಜ್ಞಾನಿಯಂತೆ, ಅಮುಖ್ಯತಂದೆಯನ್ನು ಅವನ ಕಾಮಕ್ರೋಧಾದಿಗಳಿಗೇ ಅವನನ್ನು ಒಪ್ಪಿಸಿ , ನಿರ್ದುಷ್ಟನಾದ ಮುಖ್ಯತಂದೆಯನ್ನು ಆಶ್ರಯಿಸಬೇಕು. ಪ್ರಹ್ಲಾದನು, ಮುಖ್ಯತಂದೆಯಾದ ನರಸಿಂಹನಿಗೂ ಅಮುಖ್ಯತಂದೆಯಾದ ಹಿರಣ್ಯಕಶಿಪುವಿಗೂ ವಿವಾದವು ಬರಲು, ಅಮುಖ್ಯತಂದೆಯಾದ ಹಿರಣ್ಯಕಶಿಪುವನ್ನು ಅವನ ದ್ರೋಹಕ್ಕೇ ಅವನನ್ನು ಸಮರ್ಪಿಸಿ, ಮುಖ್ಯಜನಕನಾದ ವಿಷ್ಣುವನ್ನು ಆಶ್ರಯಿಸಿದನು. ಪುನಃ ಪ್ರಹ್ಲಾದನು ತನ್ನ ಮುಖ್ಯಗುರುಗಳಾದ ವಿಷ್ಣು,ನಾರದರಿಗೂ ಅಮುಖ್ಯಗುರುಗಳಾದ ಶಂಡಾಮರ್ಕರಿಗೂ ವಿರೋಧ ಬರಲು, ಎಂದರೆ ಭಗವತ್ಪ್ರಾಪ್ತಿಸಾಧಕವಲ್ಲದ ಅಪ್ರಾಮಾಣಿಕವಾದ, ವಿಷ್ಣೂತ್ಕರ್ಷಕ್ಕೆ ವಿರೋಧಿಯಾದ ''ನಾನೇ ಬ್ರಹ್ಮ'' ಅಥವಾ ಶಿವೋತ್ತಮತ್ವ ಇವೇ ಮುಂತಾದ ವಾದಗಳನ್ನು ಉಪದೇಶಮಾಡಲು, ಶುನಸ್ಸ್ಪೃಷ್ಟವಾದ ಗಡಿಗೆಯನ್ನು ಪರಿತ್ಯಾಗ ಮಾಡಿ ಅಮರತರಂಗಿಣಿಯನ್ನು ಸೇವಿಸುವ ಯಾತ್ರಿಕನಂತೆ, ಶಂಡಾಮರ್ಕರ ದುರುಪದೇಶವನ್ನು ಮೀರಿ, ಅವರ ಗುರುತ್ವವನ್ನು ಧಿಕ್ಕರಿಸಿ ತನ್ನ ಮುಖ್ಯಗುರುಗಳಾದ ಎಂದರೆ ವಿಷ್ಣು ಪ್ರಾಪ್ತಿಸಾಧಕವಾದ ಪ್ರಾಮಾಣಿಕ ತತ್ವೋಪದೇಶಕರಾದ ಮತ್ತು ಅಂಥಾ ತತ್ವಾನುಷ್ಠಾನಕ್ಕೆ ವಿಘ್ನ ಮಾಡದಿರುವ ಮತ್ತು ಸಹಾಯಮಾಡುವ ನಾರದಾದಿಗಳ ಮತವನ್ನೇ ಅವಲಂಬಿಸಿದನು. ವಿಭೀಷಣನೂ ಸಹ 'ಜ್ಯೇಷ್ಠ ಭ್ರಾತಾ ಪಿತೃಸಮಃ'' ಎಂಬ ನ್ಯಾಯವು ಇದ್ದರೂ, ಅಣ್ಣನಾದ ರಾವಣನನ್ನು ಪರಿತ್ಯಾಗ ಮಾಡಿದುದಲ್ಲದೇ, ರಾಮನಿಗೆ ರಾವಣನ ಹನನೋ ಪಾಯವನ್ನು ಹೇಳಿಕೊಟ್ಟು, ತಾನೂ ಶಕ್ತ್ಯಾದಿ ಆಯುಧಗಳಿಂದ ಸಹಿತನಾಗಿ ರಾಮಸೈನ್ಯದಲ್ಲಿ ಪ್ರವಿಷ್ಟನಾಗಿ ಯುದ್ಧಮಾಡಿದನು. ಅಮುಖ್ಯ ಅಣ್ಣನೂ( ತಂದೆ ಸಮಾನನೂ) ಆದ ರಾವಣನಿಗೂ ಮುಖ್ಯತಂದೆಯಾದ ಶ್ರೀಮನ್ನಾರಾಯಣನ ಅವತಾರವೇ ಆದ ಜಾನಕೀಪತಿ ಶ್ರೀರಾಮನಿಗೂ ವಿರೋಧವು ಬಂದಿತು. ಪ್ರಾಜ್ಞನಾದವಿಭೀಷಣನು ರಾವಣನಿಗೆ (ಸಾಂಬಶಾಸ್ತ್ರಿಗಳು ಹೇಳಿದಂತೆಯೇ) ಬೋಧಿಸಿದನು, '' ಎಲೈ ರಾವಣನನೇ! ನಿನಗೂ ನನಗೂ ಸರ್ವರಿಗೂ ತಂದೆಯು ರಾಮನು. ''ಯಃ ಪುತ್ರಃ ಪಿತರಂ ದ್ವೇಷ್ಟಿತಂ ವಿದ್ಯಾದನ್ಯರೇತಸಂ॥'' ಎಂದು ಪ್ರಮಾಣ ವಚನವಿರುವುದು. ಆದುದರಿಂದ ನಮ್ಮೆಲ್ಲರಿಗೂ ಮುಖ್ಯತಂದೆಯಾದ ಶ್ರೀರಾಮನ ದ್ವೇಷವನ್ನು ನೀನು ಮಾಡಬೇಡ'' ಎಂದು ಹೇಳಿದನು. ಮೂರ್ಖನಾದ ರಾವಣನು ಕೇಳಲಿಲ್ಲ. ಆದುದರಿಂದ ಮದ್ಯಭಾಂಡವನ್ನು ಪರಿತ್ಯಾಗಮಾಡಿ ಕಮಲಪತ್ರವನ್ನು ಭೋಜನಾರ್ಥವಾಗಿ ಸ್ವೀಕರಿಸುವ ಶ್ರೋತ್ರೀಯನಂತೆ, ವಿಭೀಷಣನು ರಾವಣನನ್ನು ಯುದ್ಧದಲ್ಲಿಯೂ ಎದುರುಬಿದ್ದು ಹಿಂಸೆ ಪಡಿಸಿದನು. ಬಕದಾಲ್ಭ್ಯರು ತಪಸ್ಸು ಮಾಡುತ್ತಿರಲು ದೇವೇಂದ್ರನು ಬಂದು ನಮ್ಮ ಲೋಕಕ್ಕೆ ದಯಮಾಡಬೇಕು. ವಿಮಾನವನ್ನು ಕಳುಹಿಸಿಕೊಡುತ್ತೇನೆಂದು ಹೇಳಲು, ಪ್ರಾಜ್ಞರಾದ ಬಕದಾಲ್ಭ್ಯರು ನಾಯಿ ನೆಕ್ಕುವ ಬಚ್ಚಲುಗುಂಡಿ ನೀರನ್ನು ಬಿಟ್ಟು ಪರಿಶುದ್ಧವಾದ ವಿರಜಾತೋಯವನ್ನು ಬಯಸುವ ವೈದಿಕನಂತೆ, ಭಗವತ್ಪ್ರಾಪ್ತಿಸಾಧನೆಗೆ ಸಹಾಯ ಮಾಡದ ಮತ್ತು ವಿರುದ್ಧವಾದ ವರವನ್ನು ಕೊಡುವ ದೇವತೆಯನ್ನೂ ಸಹ ತಿರಸ್ಕರಿಸಿ ನಿತ್ಯಫಲವನ್ನು ಕೊಡುವ ನಾರಾಯಣನ ಪಾದವನ್ನು ಆಶ್ರಯಿಸಿದರು. ಅಂದರೆ ಇಲ್ಲಿ ಮಾತ್ರ ಒಂದು ವಿಚಿತ್ರ ದೈವವ್ಯಾಪಾರವು ನಡೆಯಿತು. ಬಕದಾಲ್ಭ್ಯರು ಇಂದ್ರನನ್ನು ಕುರಿತು ಎಲೈ ಇಂದ್ರನೇ! ನಿನಗೂ ನನಗೂ ಸರ್ವರಿಗೂ ತಂದೆಯು ನಾರಾಯಣನು. ನಾವೆಲ್ಲರೂ ಅವನನ್ನು ಹೊಂದುವುದಕ್ಕೆ ಯತ್ನ ಮಾಡಬೇಕು. ಹಾಗೆ ಮಾಡದೇ ಇರುವವನು, ಅಥವಾ ಅಂಥಾ ಯತ್ನಮಾಡುವವರನ್ನು ಪ್ರಲೋಭಾದಿಗಳಿಂದ ಕ್ಷುದ್ರಮಾರ್ಗಕ್ಕೆ ಎಳೆಯುವವನು ಪಿತೃದ್ವೇಷಿಯಾಗುವನು. ''ಯಃ ಪುತ್ರಃ ಪಿತರಂ ದ್ವೇಷ್ಟಿ ತಂ ವಿದ್ಯಾದನ್ಯರೇತಸಂ'' ಎಂದು ಪ್ರಮಾಣವಚನವಿರುವುದು. ಆದುದರಿಂದ ಭಗವತ್ಪ್ರಾಪ್ತಿಗೆ ವಿರೋಧವಾದ ಕ್ಷುದ್ರ ಸ್ವರ್ಗಲೋಕಕ್ಕೆ ನನ್ನನ್ನು ಆಕರ್ಷಿಸುವ ನಿನಗೆ ಪ್ರಬಲವಾದ ಪಾಪವು ಬರುವುದು ಎಂದು ಉಪದೇಶಮಾಡಿದರು. ಪ್ರಾಜ್ಞನಾದ ಇಂದ್ರನು ಒಪ್ಪಿಕೊಂಡು ''ಎಲೈ ಬಕದಾಲ್ಭ್ಯನೇ! ನಿನಗೆ ಪಿತೃಪ್ರೀತಿಯು ಇರುವುದೋ ಇಲ್ಲವೋ ಎಂದು ಪರೀಕ್ಷಾರ್ಥವಾಗಿ ನಾನು ಹೀಗೆ ಕೇಳಿದೆನು. ನೀನು ಕೋಪಿಸಬೇಡ. ನೀನು ವೈಕುಂಠನಾಥನ ಉಪಾಸನೆಯನ್ನು ಮಾಡು. ನನಗೂ ಅದರಿಂದ ಬಹಳ ಸಂತೋಷವುಂಟು'' ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು. ಹೀಗೆಯೇ ಸುಕುಮಾರ ಬಾಲಕನಾದ ಧ್ರುವನು ಅಡವಿಗೆ ತಪಸ್ಸಿಗೆ ಹೊರಡಲು, ತಾಯಿಯು ಸ್ವಲ್ಪ ನಿಷೇಧಿಸಲು, ಧ್ರುವನು ಇದೇ ನ್ಯಾಯದಿಂದ ತಾಯಿಗೆ ಬೋಧಿಸಲು, ಪ್ರಾಜ್ಞಳಾದ ಸುನೀತಿಯು ಒಪ್ಪಿಕೊಂಡು, ತನ್ನ ಕಂದನನ್ನು ಆಶೀರ್ವದಿಸಿ, ಮುಖ್ಯತಂದೆಯಾದ ನಾರಾಯಣನ ದರ್ಶನಾರ್ಥವಾಗಿ ಪ್ರಯಾಣ ಮಾಡುತ್ತಿರುವ ತನ್ನ ಶಿಶುವನ್ನು ಪಾಲಿಸಬೇಕೆಂದು ದೇವತೆಗಳನ್ನು ಬೇಡಿಕೊಂಡು, ತಿಲಕವನ್ನು ಹಚ್ಚಿ, ಆತನ ಅತಿಶಯಿತ ಪ್ರಾಜ್ಞತೆಯನ್ನು ನೋಡಿ ಆನಂದವನ್ನು ಹೊಂದಿ, ಮುದ್ದಿಟ್ಟು, ನಿರ್ಭಯದಿಂದ ಅಡವಿಗೆ ಕಳುಹಿಸಿಕೊಟ್ಟಳು. ಭಾಗವತದಲ್ಲಿ ಈ ವಿಷಯವು ಸ್ಫುಟವಾಗಿ ಬಂದಿರುವುದು. ಪ್ರಿಯವ್ರತನು ತಂದೆಯಾದ ಸ್ವಾಯಂಭುವ ಮನುವನ್ನು ಪರಿತ್ಯಾಗಮಾಡಿ, ನಾರದರ ಸಮೀಪದಲ್ಲಿ ಭಗವತ್ಪ್ರಾಪ್ತಿಸಾಧನವಾದ ವೇದಾಂತ ವಿಚಾರದಲ್ಲಿ ನಿಷ್ಣಾತನಾದನು. ಸ್ವಾಯಂಭುವ ಮನುವು ಪ್ರಾಪ್ತನಾಗಿ ''ಎಲೈ ಪುತ್ರನೇ! ನೀನು ಶಾಸ್ತ್ರಶ್ರವಣವನ್ನು ಈಗ ಮಾಡಬೇಡ. ಊರಿಗೆ ಬಾ'' ಎಂದು ಹೇಳಲು ಪ್ರಿಯವ್ರತನು ''ಇಂಥಾ ದುರುಪದೇಶವನ್ನು ಮಾಡುವ ನೀನು ನನಗೆ ತಂದೆಯಲ್ಲ. ಮತ್ತು ಎಲೈ ಮನುವೇ! 'ಯಃ ಪುತ್ರಃ ಪಿತರಂ ದ್ವೇಷ್ಟೀ ತಂ ವಿದ್ಯಾದನ್ಯರೇತಸಂ' ಎಂಬ ಪ್ರಮಾಣವಿರುವುದು. ತಂದೆಯಾದ ನಾರಾಯಣನನ್ನು ಹೊಂದಿಸುವ ಶಾಸ್ತ್ರವನ್ನು ನಾರಾಯಣನ ಭಕ್ತರಾದ ನಾರದರಿಂದ ನಾನು

ಕೇಳುತ್ತಿರುವಾಗ ನೀನು ವಿಘ್ನಮಾಡಿದರೆ, ನಿನಗೆ ಪಿತೃ (ನಾರಾಯಣ) ದ್ವೇಷಜನಿತವಾದ ಬಹು ದೋಷಗಳು ಪ್ರಾಪ್ತವಾಗುವುವು'' ಎಂದು ಹೇಳಿದನು. ಇದು ಋಷಭದೇವರ ಮಾತುಗಳು:-

''ಗುರುರ್ನಸಸ್ಯಾತ್ಸ್ವಜನೋ ನಸಸ್ಯಾತ್ಪಿತಾನಸಸ್ಯಾತ್ ಜನನೀ ನಸಾಸ್ಯಾತ್।

ದೈವಂ ನತತ್ಸ್ಯಾನ್ನಪತಿಶ್ಚಸಸ್ಯಾನ್ನಮೋಚಯೇದ್ಯಃ ಸಮುಪೇತ ಮೃತ್ಯುಂ॥''

ಅರ್ಥವು:- ಮೃತ್ಯುರೂಪವಾದ ಸಂಸಾರಮೋಚನದಲ್ಲಿ ಕಾರಣವಾಗದ ಗುರುವು ಗುರುವಲ್ಲ, ಬಂಧುವು ಬಂಧುವಲ್ಲ, ತಂದೆಯು ತಂದೆಯಲ್ಲ , ತಾಯಿಯು ತಾಯಿಯಲ್ಲ, ದೇವತೆಯು ದೇವತೆಯೂ ಅಲ್ಲ; ಅಂಥಾ ಪತಿಯೂ ಪತಿಯಲ್ಲ. ಸ್ವಾಯಂಭುವ ಮನುವು ಈ ನ್ಯಾಯವನ್ನಂಗೀಕರಿಸಿಯೇ ಸುಮ್ಮನಾದನು. ಅನಂತರ ಪ್ರಾಪ್ತರಾದ ಬ್ರಹ್ಮದೇವರು ಪ್ರಿಯವ್ರತನಿಗೆ ಉಪದೇಶಮಾಡಿ, ರಾಜ್ಯಾಧಿಪತ್ಯಕ್ಕೆ ಕಳುಹಿಸಿಕೊಟ್ಟರು. ಆದರೆ ಈ ನ್ಯಾಯವನ್ನು ತಿರಸ್ಕರಿಸಲಿಲ್ಲ, ಈ ನ್ಯಾಯಕ್ಕೆ ಅನುಗುಣವಾದ ಮತ್ತೊಂದು ಸೂಕ್ಷ್ಮ ಧರ್ಮವನ್ನೇ ಅವಲಂಬಿಸಿ ನೀನು ಆಧಿಕಾರಿಕ ಚೇತನನು. ಕೆಲವು ಕಾಲ ನೀನು ರಾಜ್ಯಭಾರ ಮಾಡಿ ವನಕ್ಕೆ ಬರಬೇಕೆಂದು ತಂದೆಯಾದ ನಾರಾಯಣನ ಇಚ್ಛೆಯೇ ಇರುವುದು ಎಂದು ನಿರೂಪಿಸಿ, ಕೆಲವು ರಹಸ್ಯಗಳನ್ನು ತಿಳುಹಿಸಿ ಅಂತರ್ಧಾನ ಹೊಂದಿದರು ಬ್ರಹ್ಮದೇವರು ಈ ನ್ಯಾಯವನ್ನು ಅತಿಕ್ರಮಿಸಿ ಪ್ರಿಯವ್ರತನಿಗೆ ಉಪದೇಶ ಮಾಡಲಿಲ್ಲವೆಂದು ಅವರು ಹೇಳಿದ ಶ್ಲೋಕದಿಂದಲೇ ಗೊತ್ತಾಗುತ್ತದೆ.

''ಅಹಂ ಭವೋ, ತತ ಏಷತೇ ಮಹರ್ಷಿಃ.....।........ಸರ್ವೇ ವಹಾಮೋ ಬಲಿಮೀಶ್ವರಾಯ॥''

ಅರ್ಥವು:- ನಾನು, ರುದ್ರದೇವರು, ನಿನ್ನ ತಂದೆಯು, ಈ ನಾರದ ಮಹರ್ಷಿಯು ಮುಂತಾದ ಸರ್ವರೂ ಈಶ್ವರನಾದ ನಾರಾಯಣ ನಿಗೆ ಕಪ್ಪವನ್ನು ಕೊಡುವ ಸೇವಕರು.

ಈ ರೀತಿಯಾಗಿ ವೇದವಿರುದ್ಧವಾದ, ಬ್ರಹ್ಮಸೂತ್ರವಿರುದ್ಧವಾದ, ಗೀತಾವಿರುದ್ಧವಾದ ನಿರ್ಗುಣ ಬ್ರಹ್ಮೋಪಾಸನೆಯು ಅಥವಾ ಶಿವಸರ್ವೋತ್ತಮತ್ವೋಪಾಸನೆಯು ಜಗಜ್ಜನಕನಾದ ನಾರಾಯಣನ ದ್ವೇಷರೂಪವಾಗುವುದೆಂದು ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿರುತ್ತಾನೆ.

''ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಂ। ಈಶ್ವರೋಹಮಹಂಭೋಗೀ ಸಿದ್ಧೋಹಂ ಬಲವಾನ್ ಸುಖೀ।

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್॥

ಕ್ಷಿಪಾಮಜಸ್ರಮಶುಭಾನಾಸುರೀಷ್ವೇವ ಯೋನಿಷು। ಆಸುರೀಂ ಯೋನಿ ಮಾಪನ್ನಾ ಮೂಢಾ ಜನ್ಮನಿ ಜನ್ಮನಿ।

ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ॥

ಅಸುರರು ಜಗತ್ತು ಮಿಥ್ಯಾ, ಜ್ಞಾನದಿಂದ ಬಾಧ್ಯವಾದುದು, (ಮಿಥ್ಯಾಭೂತವಾದುದರಿಂದಲೇ) ಸೃಷ್ಟಿಕರ್ತನಾದ ಈಶ್ವರನು ಇರುವುದಿಲ್ಲ, ನಾನೇ ಸ್ವತಂತ್ರ ಈಶ್ವರನು, ಸ್ವತಂತ್ರಭೋಗ, ಬಲಾದಿಗಳನ್ನು ಉಳ್ಳವನು ಎಂದು ಹೇಳುತ್ತಾರೆ. ಇಂಥಾ ಕ್ರೂರರಾದ ''ನನ್ನ ದ್ವೇಷಿಗಳನ್ನು'' ಪುನಃ ಪುನಃ ಅಸುರ ಸಂಬಂಧಿ ಯೋನಿಗಳಲ್ಲಿ ಹುಟ್ಟಿಸುತ್ತೇನೆ. ಜನ್ಮಜನ್ಮದಲ್ಲಿಯೂ ಅಸುರ ಸಂಬಂಧಿ ಯೋನಿಗಳನ್ನೇ ಹೊಂದುತ್ತಾ ಈ ಮೂಢರು ''ನನ್ನನ್ನು ಸರ್ವಥಾ ಯಾವ ಕಾಲದಲ್ಲೂ ಹೊಂದದೇ'' ಕೊನೆಗೆ ಅತಿ ನಿಕೃಷ್ಟವಾದ ಅಧಮಗತಿಯನ್ನು ಹೊಂದುತ್ತಾರೆ.

ತ್ರಿವಿಕ್ರಮ ಪಂಡಿತಾಚಾರ್ಯರು ಮುಂದುವರೆದರು ''ಎಲೈ ಬ್ರಾಹ್ಮಣರುಗಳಿರಾ! ಈ ರೀತಿಯಾಗಿ ಪಿತೃದ್ವೇಷದಿಂದ ತಮಸ್ಸೆಂಬ ನಿತ್ಯನರಕಪ್ರಾಪ್ತಿರೂಪವಾದ ಫಲವು ಪ್ರಮಿತವಾಗಿರುವುದರಿಂದ, ನೀವೆಲ್ಲರೂ ನನ್ನನ್ನು ನಿಂದಿಸುವುದನ್ನು ಬಿಟ್ಟು ಹಿತವಾದ ನನ್ನ ಮಾತನ್ನು ಕೇಳಿ, ನಾರಾಯಣ ದ್ವೇಷರೂಪವಾದ ಐಕ್ಯೋಪಾಸನೆಯನ್ನು ಆಗಲೀ, ನಿರ್ಗುಣ ಬ್ರಹ್ಮೋಪಾಸನೆಯನ್ನು ಆಗಲೀ ಮಾಡದೇ ನನ್ನ ಮತವನ್ನೇ ಅವಲಂಬಿಸಿದರೆ, ನಾರಾಯಣನ ಪ್ರೀತಿಗೆ ಪಾತ್ರರಾಗಿ ಮೋಕ್ಷಭಾಗಿಗಳಾಗುವುದರಲ್ಲಿ ಸಂಶಯವಿಲ್ಲ''. ಈ ಉಪನ್ಯಾಸವು ಮುಗಿದ ನಂತರ ಸಭೆಯಲ್ಲಿ ಕೆಲವರು ಮೌನ ಧರಿಸಿದರು. ಕೆಲವರು ಸಂತೋಷದಿಂದ ಕಿಲಕಿಲ ಶಬ್ದವನ್ನು ಸಹ ಮಾಡಿದರು. ಶಂಕರಭಟ್ಟರೆಂಬ ಒಬ್ಬ ಬ್ರಾಹ್ಮಣರು ಮತ್ತು ತ್ರಿವಿಕ್ರಮ ಪಂಡಿತಾಚಾರ್ಯರ ಪುತ್ರರಾದ ನಾರಾಯಣ ಪಂಡಿತಾಚಾರ್ಯರು ಇವರಿಬ್ಬರೂ ಆನಂದ ಬಾಷ್ಪಪೂರಿತರಾದರು. ಅವರು ವಿಷ್ಣುದೀಕ್ಷೆಯನ್ನು ಮನಸಾ ಸ್ವೀಕರಿಸಿಬಿಟ್ಟರು. ಆ ಕಾಲದಲ್ಲಿ ಕುಲವೃದ್ಧರಾದ ಒಬ್ಬ ಸ್ಮಾರ್ತಬ್ರಾಹ್ಮಣರು ಮಾತ್ರ ಈ ಪ್ರಶ್ನೆಯನ್ನು ಹಾಕಿದರು. ''ಎಲೋ ಅಪ್ಪಾ! ನೀನು ಹೇಳೋದೆಲ್ಲಾ ನಿಜ. ನಾನೂ ಹಾಗೇ ತಿಳಿದುಕೊಂಡಿದ್ದೇನೆ. ನೀನು ಐಕ್ಯೋಪಾಸನೆಯನ್ನು ಮಾಡಬೇಡ. ನಾರಾಯಣನನ್ನೇ ಪೂಜಿಸು. ನಮ್ಮ ಸುಬ್ರಹ್ಮಣ್ಯ-ನಿಮ್ಮಪ್ಪನೂ ಸಹ ಹಾಗೇ ಹೇಳುತ್ತಿದ್ದರು. ನಮ್ಮಪ್ಪನಿಗೂ ಅದೇ ಸಮ್ಮತ. ಏನೋ ಪುಸ್ತಕದ ಕಂತೆ ನೂರೆಂಟು ಬರೆದು ಕೊಂಡಿದ್ದಾರೆ. ಅದು ನಮ್ಮ ಮನಸ್ಸಿಗೆ ಬರೋದೇ ಇಲ್ಲ, ಆಚರಿಸೋದೂ ಸರಿಯಲ್ಲ ನೀನೂ ಈಚೀಚೆಗೆ ಬುದ್ಧಿವಂತ. ಅದನ್ನೇ ಚೆನ್ನಾಗಿ ಹೇಳುತ್ತೀ! ನಾನು ಬೇಡ ಅನ್ನೋದಿಲ್ಲ, ಆದರೆ ಮುದ್ರೆ ಯಾಕೆ ಹಾಕಿಸಿಕೊಂಡೆಯೋ ಅಪ್ಪಾ? ಅದರಿಂದ ಏನು ಉಳಿದು ಹೋಯಿತು ನಿನಗೇ? ಜಾತಿ ಹೋಗುತ್ತೆ ಅಂತ ಹೇಳ್ತಾರಲ್ಲಾ ಅಂತ ಹೇಳಿದೆ. ಇಷ್ಟು ನನ್ನ ಸಂಶಯ. ನೀನು ಇದಕ್ಕೆ ಸರಿಯಾದ ಜವಾಬು

ಕೊಟ್ಟುಬಿಟ್ಟರೆ, ನನ್ನ ಕೆಲಸ ಆಯಿತು. ನೀನು ಬೇಕಾದ ಹಾಗೆ ಮಾಡು. ಮಗು!' ಎಂದು ಹೇಳಿದರು. ಆಗ ತ್ರಿವಿಕ್ರಮ ಪಂಡಿತಾಚಾರ್ಯರು ಪುನಃ ಹೇಳಿದರು.

''ಏನು ತಾತ! ನೀವೂ ಹೀಗೆ ಹೇಳುತ್ತೀರಿ. ಲೋಕದಲ್ಲಿ ಪುತ್ರನು ತಂದೆಯ ಆಚರಣೆಗಳನ್ನು ನಡೆಸದೇ, ತಂದೆಯು ಕೊಟ್ಟ ಬಟ್ಟೆಗಳನ್ನು ಉಡದೇ, ತಂದೆಯು ಹಾಕಿದ ಅನ್ನವನ್ನು ತಿನ್ನದೇ, ಅವನಿಗೆ ಸಮ್ಮತವಲ್ಲದ ಆಚರಣೆಗಳನ್ನು ಕೈಕೊಂಡರೆ ತಂದೆಯು ಸಂತೋಷಪಡುವನೇ? ಮತ್ತು ಕೋಪವನ್ನು ಹೊಂದಿ ಮನೆಯಿಂದ ಹೊರಕ್ಕೆ ಓಡಿಸದೇ ಬಿಡುವನೇ? ದವಾಲಿ( ಯೂನಿಫಾರ್ಮ್) ಹಾಕಿಕೊಳ್ಳದೇ ಜವಾನರನ್ನು ಕಛೇರಿಗೆ ಸೇರಿಸದೇ ಬಿಡುವರೇ? ನಿಲುವಂಗಿ ಹಾಕಿಕೊಳ್ಳದೇ ದರ್ಬಾರಿಗೆ ಬಿಡುವರೇ? ಹೀಗೆಯೇ ವಿಷ್ಣುವು ತನ್ನ ಪೂಜಾರ್ಥವಾಗಿ, ತನಗೆ ಪ್ರಿಯವಾದ ಊರ್ಧ್ವಪುಂಡ್ರಧಾರಣ, ತಪ್ತಚಕ್ರಧಾರಣ, ತುಳಸೀಮಾಲೆಯನ್ನು ಧರಿಸುವುದೇ ಮೊದಲಾದ ಕೆಲವು ಆಚರಣೆಗಳನ್ನು ವಿಧಿಸಿರುತ್ತಾನೆ. ಅಪೌರುಷೇಯವಾದ ವೇದದಲ್ಲೇ ಇದೆಲ್ಲವೂ ನಿರೂಪಿತ ವಾಗಿದೆ. ಅದನ್ನೆಲ್ಲಾ ನಾಳೆ ಹೇಳುತ್ತೇನೆ. ಈಗ ನಿಮ್ಮ ಮನಸ್ಸಿನ ಸಂಶಯ ಹೋಗುವ ಉದ್ದಿಶ್ಯ ಇಷ್ಟು ಹೇಳುತ್ತೇನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ಜಾತಿಗಳಿರುತ್ತವೆ. ನಾವೆಲ್ಲರೂ ಬ್ರಾಹ್ಮಣರಷ್ಟೆ ! ಇದರಲ್ಲಿ ನಾನು ಮುದ್ರೆ ಹಾಕಿಸಿಕೊಂಡರೆ ನನ್ನ ಬ್ರಾಹ್ಮಣ್ಯ ನಾಶವಾಗುತ್ತೆ ಎಂದು ನೀವು ಹೇಳಬೇಕು. ಅದು ಕೂಡುವುದಿಲ್ಲ. ಹೇಗೆಂದರೆ ನಾರಾಯಣೋತ್ತಮತ್ವವು ವೈದಿಕವು; ಐಕ್ಯೋಪಾಸನೆ ಯಾಗಲೀ ಶಿವೋತ್ತಮತ್ವವಾಗಲೀ ವೈದಿಕವಲ್ಲ ಎಂದು ನೀವು ಒಪ್ಪಿಕೊಂಡಮೇಲೆ, ವಿಷ್ಣುಸರ್ವೋತ್ತಮತ್ವೋಪಾಸನೆಯು ಸಾತ್ವಿಕವು, ಪುಣ್ಯಪ್ರದವು ಎಂದು ಅರ್ಥವಾಯಿತು. ಅದಕ್ಕೆ ಅನುಗುಣವಾದ, ಅಂಥಾ ಉಪಾಸನೆಗೆ ಅವಶ್ಯಾಂಗಭೂತವಾದ ತಪ್ತ ಮುದ್ರಾಧಾರಣವು ವೈದಿಕವು ಮತ್ತು ಸಾತ್ವಿಕವೆಂದೇ ಪ್ರಾಪ್ತವಾಗುವುದಿಲ್ಲವೇ? ಅಷ್ಟೇ ಅಲ್ಲ, ಊರ್ಧ್ವಪುಂಡ್ರ ತಪ್ತ ಚಕ್ರಧಾರಣಾದಿ ಗಳಿಂದ ರಹಿತನಾದವನಿಂದ ಮಾಡಲ್ಪಟ್ಟ ಸೇವೆಯು ವೇದವೇದ್ಯನಾದ ವಿಷ್ಣುವಿಗೆ ಮುಟ್ಟಲಾರದು. ಮುದ್ರಾವಿಹೀನನಾದವನಿಗೆ ಬ್ರಾಹ್ಮಣ್ಯವು ನಾಶವಾಗುವುದೆಂದೂ, ವೇದವೇದಾಂತಾಧಿಕಾರವೂ ಹೋಗುವುದೆಂದು ಸ್ಪಷ್ಟವಾದ ಅನೇಕ ವಚನಗಳು ಇರುತ್ತವೆ. ಒಂದು ಪ್ರಮಾಣವನ್ನು ಈಗ ನಿರೂಪಿಸುತ್ತೇವೆ. ಇಗೋ (ಪ್ರಿಂಟಾದ) ವೃದ್ಧಹಾರೀತಸ್ಮೃತಿಯಲ್ಲಿ ದ್ವಿತೀಯಾಧ್ಯಾಯದಲ್ಲಿ ಹೀಗೆ ಇರುತ್ತದೆ.

'' ಅಂಕಯಿತ್ವಾನ ಚಕ್ರೇಣ ಯತ್ಕಿಂಚಿತ್ಕರ್ಮ ಸಂಚರೇತ್। ತತ್ಸರ್ವಂ ಯಾತಿ ವೈಕಲ್ಯಮಿಷ್ಟಾಪೂರ್ತಾದಿಕಂ ನೃಪ॥
ಅಚಕ್ರಧಾರೀವಿಪ್ರಸ್ತು ಸರ್ವಕರ್ಮಸು ಗರ್ಹಿತಾಃ। ಅವೈಷ್ಣವಃ ಸಮಾಪನ್ನೋ ನರಕಂ ಚಾಧಿಗಚ್ಛತಿ॥
ಚಕ್ರಾದಿಚಿನ್ಹರಹಿತಂ ಪ್ರಾಕೃತಂ ಕಲುಷಾನ್ವಿತಂ। ಅವೈಷ್ಣವಂತು ತಂ ದೂರಾತ್ ಶ್ವಪಾಕಮಿವ ಸಂತ್ಯಜೇತ್॥
ಅವೈಷ್ಣವಸ್ತು ಯೋ ವಿಪ್ರಃ ಶ್ವಪಾಕಾದಧಮಃ ಸ್ಮೃತಃ। ಅಶ್ರಾದ್ಧೇಯೋ ಹ್ಯಪಾಂಕ್ತೇಯೋ ರೌರವಂ ನರಕಂ ವ್ರಜೇತ್॥
ಅವೈಷ್ಣವಸ್ತು ಯೋವಿಪ್ರಃ ಸರ್ವಧರ್ಮಯುತೋಪಿವಾ। ಸ ಪಾಷಂಡೇತಿವಿಜ್ಞೇಯಃ ಸರ್ವಕರ್ಮಸು ನಾರ್ಹತಿ॥
<u>ತಸ್ಮಾಚ್ಚಕ್ರಂ ವಿಧಾನೇನ ತಪ್ತಂ ವೈ ಧಾರಯೇದ್ದ್ವಿಜಃ। ಸರ್ವಾಶ್ರಮೇಷು ವಸತಾಂ ಸ್ತ್ರೀಣಾಂ ಚ ಶ್ರುತಿಚೋದನಾತ್।</u>
ಅನಾಯುಧಾಸೋ ಅಸುರಾ ಅದೇವಾ ಇತಿ ವೈ ಶ್ರುತಿಃ। ..............................................................
ಪವಿತ್ರಮಿತಿ ಚೈವಾಗ್ನಿರಗ್ನಿರ್ವೈ ಚಕ್ರಮುಚ್ಯತೇ।.....................................
ದಕ್ಷಿಣೇತು ಭುಜೇವಿಪ್ರೋ ಬಿಭೃಯಾದ್ವೈ ಸುದರ್ಶನಂ। ಸವ್ಯೇತು ಶಂಖಂ ಬಿಭೃತಾದಿತಿ ವೇದವಿದೋ ವಿದುಃ॥
<u>ಇತ್ಯಾದಿ ಶ್ರುತಿಭಿಃ ಪ್ರೋಕ್ತಂ ವಿಷ್ಣೋಶ್ಚಕ್ರಸ್ಯ ಧಾರಣಂ। ಪುರಾಣೇಷ್ವಿತಿಹಾಸೇಷು ಸಾತ್ವಿಕೇಷು ಸ್ಮೃತಿಷ್ವಪಿ॥</u>
ರುದ್ರಾರ್ಚನಂ ತ್ರಿಪುಂಡ್ರಸ್ಯ ಧಾರಣಂ ಯತ್ರ ದೃಶ್ಯತೇ। ತಚ್ಛೂದ್ರಾಣಂ ವಿಧಿಃ ಪ್ರೋಕ್ತೋ ನ ದ್ವಿಜಾನಾಂ ಕದಾಚನ॥
ನ ಭಸ್ಮಧಾರಯೇದ್ವಿಪ್ರಃ ಪರಮಾಪದ್ಗತೋಪಿ ವಾ। ಮೋಹಾದ್ವೈ ಬಿಭೃಯೋದ್ಯೋ ವೈ ಸಸುರಾಪೋಭವೇದ್ಧ್ರುವಂ॥
ತಿರ್ಯಕ್ಪುಂಡ್ರಧರಂ ವಿಪ್ರಂ ಪಟ್ಟಾಕಾರಧರಂ ತಥಾ। ಶ್ವಪಾಕಮಿವನೇಕ್ಷೇತ ನ ಸಂಭಾಷೇತ ಕುತ್ರಚಿತ್॥

1. ಇದು ಸ್ಮೃತಿವಚನವು ಸ್ಮೃತಿಯನ್ನು ಅನುಸರಿಸುವವರಷ್ಟೆ ಸ್ಮಾರ್ತರು! ಇದು ಪುರಾಣಗಳಿಗಿಂತಲೂ ಪ್ರಬಲವು. ಇದು ಶ್ರುತ್ಯಾದಾಹರಣಪೂರ್ವಕವಾಗಿ ತಪ್ತಚಕ್ರಧಾರಣೆಯನ್ನು ವಿಧಿಸುವುದರಿಂದ, (ಸಾಂಬಶಾಸ್ತ್ರಿಗಳು ಉದಾಹರಿಸಿರುವ ದುರ್ಬಲ ತಾಮಸ ಪುರಾಣವನ್ನು ಸಂಹಾರಮಾಡುವುದರಲ್ಲಿ ಸಮರ್ಥವಾಗಿರುವುದು. ''ಶ್ರುತಿಸ್ಮೃತಿ ವಿರೋಧೇತು ಶ್ರುತಿರೇವಗರೀಯಸೀ'' ಎಂಬ ಮನುವಚನಾನುಸಾರ ''ಪವಿತ್ರಮಗ್ನಿಃ'' ''ಅನಾಯುಧಾಸೋ'' ದಕ್ಷಿಣೇತು ಭುಜೇ ವಿಪ್ರೋ'' ಇತ್ಯಾದಿ ಅನೇಕ ಶ್ರುತಿಗಳಿಗೆ ವಿರುದ್ಧವಾದುದರಿಂದ, ತಪ್ತಚಕ್ರಧಾರಣ ನಿಷೇಧಗಳಾದ ಇನ್ನೂ ಹತ್ತು ಬಂಡಿ ವಚನಗಳನ್ನು(ಸಾಂಬಶಾಸ್ತ್ರಿಗಳು) ತೆಗೆದುಕೊಂಡು ಬಂದರೂ, ಅವೆಲ್ಲಾ ಕಛೇರಿಯಲ್ಲಿ ಸುಡುವುದಕ್ಕೆ ಗುಡ್ಡೆ ಮಾಡಿಟ್ಟ "waste paper heap" ಕೆಲಸಕ್ಕೆ ಬಾರದ ಪತ್ರಗಳ ರಾಶಿಯಂತಾಗುವುದು.

2. ಪವಿತ್ರಶ್ರುತಿಯು ಚಕ್ರಪರವೆಂದು ಈ ಸ್ಮೃತಿಯಲ್ಲಿಯೇ ಹೇಳಿರುತ್ತದೆ. ಆದುದರಿಂದ ಶ್ರುತಿಗೆ ಅವಿರುದ್ಧವಾದ ಮತ್ತು ಶ್ರುತಿಗಳಿಗೆ

ಅನುಕೂಲವಾದ ಈ ಪ್ರಸಿದ್ಧ ಸ್ಮೃತಿಯು ''ಸರ್ವವರ್ಣಾಶ್ರಮದವರೂ'' ತಪ್ತಚಕ್ರವನ್ನು ಧರಿಸಬೇಕೆಂದು ಹೇಳಿರುವುದರಿಂದಲೂ, ಧರಿಸದವರು ಬ್ರಾಹ್ಮಣ್ಯವನ್ನುಕಳೆದುಕೊಳ್ಳುವರೆಂದು ಹೇಳಿರುವುದರಿಂದಲೂ, ತಪ್ತಚಕ್ರಧಾರಣವು ಉಪನಯನದಂತೆ ವೇದೋಕ್ತವಾದ ಬ್ರಾಹ್ಮಣ್ಯಸಿದ್ಧ್ಯರ್ಥವಾಗಿ ಅವಶ್ಯ ಆಚರಿಸಬೇಕಾದ ಸದ್ಧರ್ಮವು ಎಂದು ಸಿದ್ಧವಾಗುವುದು.

3. ಇಷ್ಟೇ ಅಲ್ಲತಾತ! ಸಕಲಶಾಸ್ತ್ರಗಳಿಗೂ ಈ ಧರ್ಮವು ಸಮ್ಮತವೆಂದು ಈ ಸ್ಮೃತಿಯೇ ಹೇಳುತ್ತದೆ. ಶ್ರುತಿಗಳಲ್ಲೂ, ಸಾತ್ವಿಕವಾದ ಪುರಾಣೇತಿಹಾಸ ಸ್ಮೃತಿಗಳಲ್ಲೂ ತಪ್ತಚಕ್ರಧಾರಣವು ಹೇಳಲ್ಪಟ್ಟಿರುತ್ತದೆ ಎಂದು ಈ ಸ್ಮೃತಿಯಲ್ಲಿರುವುದು.

4. ಮತ್ತು ತಿರ್ಯಕ್ಪುಂಡ್ರಧಾರಣವನ್ನೂ, ಭಸ್ಮಧಾರಣವನ್ನೂ ಇಲ್ಲಿ ನಿಂದಿಸಿರುವುದರಿಂದ ಅದು ವೇದವಿರುದ್ಧವಾದ ಆಚರಣೆಯೆಂದು ಸಿದ್ಧವಾಗುವುದು.

5. ಕಿಂಚ ಪ್ರಹ್ಲಾದ, ವಿಭೀಷಣ, ಬಲಿ, ಮಾಂಧಾತ, ಅಂಬರೀಷ, ಶುಕ, ಮಾರ್ಕಂಡೇಯಾದಿ ಸರ್ವ ಮಹಾತ್ಮರುಗಳಾದ ''ಬ್ರಹ್ಮವಿದಃ'' ಎಂದರೆ ಬ್ರಹ್ಮಜ್ಞಾನಿಗಳು ತಪ್ತಚಕ್ರವನ್ನು ಧರಿಸಬೇಕೆಂದು ತಿಳಿಯುತ್ತಾರೆ ಎಂದು ಹೇಳಿರುವುದರಿಂದ ಇದು ಸತ್ಸಂಪ್ರದಾಯವು; ನಮ್ಮ ಭಸ್ಮಧಾರಣಾದಿಗಳು ಅಂಧಪರಂಪರೆಯಿಂದ ಬಂದ ಅವೈದಿಕ ಧರ್ಮವೆಂದು ನಾನು ನಿಶ್ಚಯಿಸಿದೆನು. ಗೊತ್ತಾಯಿತೇ ತಾತ! ನನಗೇನು ನಿಮ್ಮ ಮೇಲೆಲ್ಲಾ ಹೊಟ್ಟೆಕಿಚ್ಚೇ! ಆ ಮಧ್ವಾಚಾರ್ಯರು ನನಗೇನು ಜಹಗೀರು ಕೊಟ್ಟಿರುವರೇ? ಅಥವಾ ನೀವುಗಳೆಲ್ಲಾ ನನ್ನನ್ನು ಹಿಂಸೆ ಪಡಿಸಿ ನನ್ನಲ್ಲಿ ದ್ವೇಷ ಮಾಡಿರುತ್ತೀರಾ? ಇದ್ದದ್ದು ಹೇಳಿದರೆ ಕೆಂಡದಂಥಾ ಕೋಪ ಎಂದು ಹೇಳಿರುವಂತೆ, ಕೆಲವರು ಮಾತ್ರ ಯೋಚನೆ ಮಾಡದೇ, ಗ್ರಂಥವನ್ನು ಪೂರ್ವಾಪರ ವಿಚಾರಮಾಡದೇ, ನನ್ನನ್ನು ನಿಂದಿಸಿದರೆ ನಾನೇನು ಮಾಡುವುದು? ಚಕ್ರಧಾರಣ ಮಾಡದವನು ಮತ್ತು ಭಸ್ಮಧಾರಣ ಮಾಡುವವನು ಬಹುದೋಷಿಯಾಗುವನು ಎಂದು ಹೇಳಿರುವುದಲ್ಲಾ, ನಾನೇ ಇದನ್ನೆಲ್ಲಾ ಬರೆದಿಟ್ಟುಕೊಂಡಿದ್ದೇನೇ?''

ಇದು ತ್ರಿವಿಕ್ರಮಪಂಡಿತಾಚಾರ್ಯರ ಅಮೋಘವಾದ ಉಪನ್ಯಾಸವು. ಪಂಡಿತಾಚಾರ್ಯರು ಕೊನೆಯ ವಾಕ್ಯಗಳನ್ನು ಮುಗಿಸುತ್ತಿರು ವಾಗಲೇ, ತಾತಯ್ಯನವರಿಗೆ ಎರಡು ಕಣ್ಣುಗಳಿಂದಲೂ ಆನಂದಭಾಷ್ಪವು ಬಿತ್ತು. ಅವರು ಬಲಗೈಯಿಂದ ತಮ್ಮ ಹಣೆಯನ್ನು ಒರೆಸಿಕೊಂಡು, ತಮ್ಮ ಕಡೆ ಜನರಿಗೆ ತಿರುಗಿಕೊಂಡು ಹೇಳಿದರು ''ಎಲೈ ಪಂಡಿತರುಗಳಿರಾ, ಈಗ ನೋಡಿ ಮುಂದೆ ಬಂದು ಏನಾದರೂ ಇದ್ದರೆ ಹೇಳಿ. ಸುಮ್ಮನೆ ಹಿಂದೆ ಬೈದರೆ ಏನಾಯಿತು? ಬ್ರಾಹ್ಮಣ್ಯ ಹೋಗುತ್ತೆ ಎಂದು ಹೇಳಿದೆಯಲ್ರೋ! ವಿಭೂತಿ ಶೂದ್ರರು ಹಚ್ಚಿಕೋಬೇಕು ಎಂದು ಹೇಳಿದೆಯಲ್ರೋ! ಸರಿಯಾದ ಪ್ರಮಾಣಗಳನ್ನು ಉದಾಹರಿಸಿ ಅವನ ಬಾಯಿ ಮುಚ್ಚಿಸಿ. ಆಗ ಅವನನ್ನು ನಾನು ಸರಿ ಮಾಡುತ್ತೇನೆ. ನಾನು ಹೇಳಿದಂತೆ ಅವನು ಕೇಳುತ್ತಾನೆ. ಇಲ್ಲದೇ ಇದ್ದರೆ ಬಾಯಿಮುಚ್ಚಿಕ್ಕೊಳ್ಳಿ. ಸುಮ್ಮನೇ ಹುಡುಗನನ್ನು ಬೈಯ್ಯಬೇಡಿ. ಪುಸ್ತಕ ಇದ್ದಹಾಗೆ ಅವನು ಹೇಳುತ್ತಾನೆ. ಪುಸ್ತಕದಲ್ಲಿದ್ದಂತೆ ಅನುಷ್ಠಾನ ಮಾಡುತ್ತಾನೆ. ಇದೂ ತಪ್ಪೇ! '' ತಾತಯ್ಯನವರು ಇಷ್ಟುಹೇಳಿ, ತ್ರಿವಿಕ್ರಮಪಂಡಿತಾಚಾರ್ಯರನ್ನು ಶ್ಲಾಘಿಸಿ ''ಎಲೋ ಮಗೂ! ಅದೆಂಥಾ ಸ್ವಾಮಿಗಳೋ ನಿನಗೆ ಇಷ್ಟೆಲ್ಲಾ ಹೇಳಿಕೊಟ್ಟವರು? ಮಹಾನುಭಾವರಪ್ಪಾ. ಸಾಮಾನ್ಯಮನುಷ್ಯರಲ್ಲ. ಇದರಲ್ಲಿ ಸಂದೇಹವಿಲ್ಲ.'' ಎಂದು ಹೇಳಿದರು. ಆಗ ತ್ರಿವಿಕ್ರಮ ಪಂಡಿತಾಚಾರ್ಯರು ''ತಾತ! ಸ್ವಾಮಿಗಳು ಸಾಕ್ಷಾತ್ ಗುರುರಾಜರು! ಸರ್ವಜ್ಞರು. ದೇವೋತ್ತಮರಾದ ರುದ್ರಾದಿಗಳಿಂದ ವಂದಿತರಾದ ವಾಯುದೇವರ ಅವತಾರವೇ ಅವರು. ನಾನು ಅವರ ಸ್ವರೂಪವನ್ನು ನೋಡಿರುತ್ತೇನೆ. ಅವರೂ ತಾವೂ ಅನುಗ್ರಹಾರ್ಥವಾಗಿ ಹೇಳಿರುತ್ತಾರೆ. ಇಷ್ಟೇ ಅಲ್ಲದೇ, ಅನೇಕ ಶ್ರುತಿಗಳೂ, ಸ್ಮೃತಿಗಳೂ, ಭಾರತವೂ, ಪಂಚರಾತ್ರಾಗಮವೂ, ರಾಮಾಯಣವೂ, ಪುರಾಣಗಳೂ ಅವರು ಬ್ರಹ್ಮಪದವಿಗೆ ಬರುವ ಜಗದ್ಗುರುಗಳೆಂದೂ, ಅವರಿಗೆ ಅವಜ್ಞೆ ಮಾಡುವವರು ಅಂತ್ಯಂತ ಅಜ್ಞರೆಂದೂ, ದೋಷಿಗಳೆಂದೂ ಸಾರುತ್ತಿರುವುದು.'' ಎಂದು ಹೇಳಿದರು. ತಾತಯ್ಯನವರು 'ನಾಳೆ ಅದನ್ನೆಲ್ಲಾ ಹೇಳಪ್ಪಾ. ನನಗೆ ಕೇಳಬೇಕಂತ ಇದೆ. ಏನೋ ನಾರಾಯಣನೇ ಗತಿ! ಎಂದು ಮಂಗಳಪೂರ್ವಕವಾಗಿ ಸಭೆಯನ್ನು ಮುಗಿಸಿದರು.

ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅದ್ವೈತೋಪಾಸನೆಯ ಭಯಂಕರತ್ವ ಪ್ರದರ್ಶನವು ಮತ್ತು
ವೈಷ್ಣವ ಸಂಪ್ರದಾಯದ ವೈದಿಕತ್ವ ಸಮರ್ಥನವೆಂಬ ಏಕಾದಶೋಲ್ಲಾಸವು ಮುಗಿದುದು.

## XII ಅವೈಷ್ಣವ ಆಚಾರನಿಷ್ಫಲತ್ವ ಪ್ರದರ್ಶನವು.

ಸ್ವಲ್ಪ ಚಿಲ್ಲರೆ ವಿಚಾರಗಳು ಬಾಕಿ ಉಳಿದಿರುವುವು. ಪುಡಿಗಾಸುಗಳು . ಆದರೂ ಉದಾಸೀನ ಮಾಡಬಾರದು. ಯಾಕೆಂದರೆ ಹುಡುಗ ಹುಡುಗಿಯರುಗಳಿಗೆ ತಿಂಡಿಗಿಂಡಿಗೆ ಆಗುತ್ತೆ. ಇಲ್ಲದಿದ್ದರೆ ಉಂಡೆ ರೂಪಾಯಿಗಳನ್ನೇ ಮುರಿಸಿಕೊಡು ಎಂದು ಕೇಳಿಬಿಡುತ್ತವೆ. ಅದೂ ಅಲ್ಲದೆ ದುಡ್ಡಿನಲ್ಲಿ ಲಕ್ಷ್ಮೀದೇವಿಯರ ಸಾನ್ನಿಧ್ಯ. ಅದಕ್ಕೇ ಶ್ರೇಷ್ಠಿಗಳು ಕಾಸು ಎಂದರೆ ತಿರಸ್ಕರಿಸದೇ ತಾಮ್ರದ ಡಬ್ಬಿಯಲ್ಲಿ ಜೋಪಾನವಾಗಿ ಇಡುತ್ತಾರೆ. ಆದುದರಿಂದಲೇ ಮೃಷಾಸಮುದ್ರದ ತರಂಗವಾದ ಶಾಸ್ತ್ರಿಗಳ ಗ್ರಂಥದಲ್ಲಿ ನಮಗೆ ಅಷ್ಟು ಭಕ್ತಿ. ಪಿತೃಶ್ರಾದ್ಧವು ಏಕಾದಶೀದಿವಸ ಪ್ರಾಪ್ತವಾದರೆ ಪರಿತ್ಯಾಗ ಮಾಡುವ ಈ ಮಾಧ್ವರು ವೇದಭ್ರಷ್ಟರಾಗದಿದ್ದಮೇಲೆ ಇನ್ನು ಯಾರನ್ನು ಅವೈದಿಕರೆಂದುಕರೆಯಬೇಕೆಂದು ವಿನಯದಿಂದ ಶಾಸ್ತ್ರಿಗಳು ಕೇಳಿರುತ್ತಾರೆ. ಕಠಿಣವಾದ ಪ್ರಶ್ನೆಯಾದುದರಿಂದ ನಾವು ಈ ವಿಷಯವನ್ನು ಛೀಫ್ ಕೋರ್ಟಿನ ರಿಕಾರ್ಡುಗಳನ್ನೆಲ್ಲಾ ತರಿಸಿಕೊಂಡು ಫೈಸಲ್

ಮಾಡುತ್ತೇವೆ. ಒಂದು ವಿಧದಲ್ಲಿ ಶಾಸ್ತ್ರಿಗಳು ಹೇಳುವುದೇನೋ ಯುಕ್ತವೇ! ಹೇಗೆಂದರೆ ಸೂತಕ ಬಂದಾಗ ಶಾಸ್ತ್ರಿಗಳು ಪಿತೃಶ್ರಾದ್ಧವನ್ನು ನಿಲ್ಲಿಸಿ ತಮ್ಮ ಪಿತೃಗಳಿಗೆ ವಿಜ್ಞಾಪಿಸಿ ಕೊಳ್ಳುವರು:- ''ಏನಪ್ಪಾ ನಾನು ಏನು ಮಾಡಲಿ! ಮನೆಯಲ್ಲಿ ತಾಯಿ ಸತ್ತುಹೋದಳು! ನನ್ನ ಬಾಯಿಗೇ ಅಕ್ಕಿಕಾಳು ಬೀಳೋ ಹಾಗಿಲ್ಲ, ನಿನಗೆ ಇನ್ನು ನಾನೆಲ್ಲಿಂದ ಪಿಂಡ ಮಾಡಿ ಹಾಕಲಿ! ಸ್ವಲ್ಪ ತಾಳು. ಎಂಟು ಹತ್ತು ದಿನಗಳಾದ ನಂತರ ಶ್ರಾದ್ಧಕರ್ಮ ಮಾಡಿ ನಿನ್ನ ಹಸಿವೆ ತೀರಿಸುತ್ತೇನೆ.'' ಎಂದು ಹೇಳುವರು. ಶಾಸ್ತ್ರಿಗಳ ಪಿತೃಗಳು ''ಹಾಗೇ ಮಾಡೋ ಮಗನೇ! ಅದಕ್ಕೇನು! ಒಂದು ಐದಾರು ದಿವಸ ಕಾದುಕೊಂಡಿರುತ್ತೇವೆ. ಮನೆಯಲ್ಲಿ ಮರಣ ಬಂದು ಹೋದರೆ ನೀನೇನು ಮಾಡುವುದಕ್ಕಾಗುವುದು? ಎಂದು ಸಂತೈಸುವರು ಈಗ ಹರತೀ ಆಚಾರ್ರೇ! ನಿಮ್ಮ ಮಾಧ್ವರಿಗೆ ಏನು ರೋಗ ಬಂದಿರುವುದು? ಏಕಾದಶೀದಿವಸ ಅವರಿಗೇನಾದರೂ ಸೂತಕ ಬಂದಿರುತ್ತದೆಯೋ? ಏನಾದರೂ ಅಪಾವಿತ್ರ್ಯವು ಬಂದಿದ್ದರೆ ಚಿಂತಿಲ್ಲ, ಅಷ್ಟಿಲ್ಲದೇ, ಮನೆಗೆ ಬಂದ, ಹುಟ್ಟಿಸಿದ ಪಿತೃಪಿತಾಮಹಂದಿರು ಗಳಿಗೆ ಆರೇಳು ಪಿಂಡವನ್ನು ಮಾಡಿ ಯಾತಕ್ಕೆ ಹಾಕಬಾರದು?

ಹರತಿ ಆಚಾರ್ರು ಇದಕ್ಕೆ ಉತ್ತರವನ್ನು ಕೊಡಲಾರರು. ಶಾಸ್ತ್ರಿಗಳು ಹೇಳತಕ್ಕ ಪಾಯಿಂಟ್ ಕಬ್ಬಿಣದ ಕೋಲಿನಂತೆ ಅಳ್ಳಾಡತಕ್ಕದ್ದಲ್ಲ. ನಾವು ಅದಕ್ಕೆ ಜಡ್ಜಮೆಂಟ್ ಕೊಡುತ್ತೇವೆ. ನಿಜ ಸಂಗತಿ ಏನೆಂದರೆ, ಹರತಿ ಆಚಾರ್ರೇ ಮುಂತಾದ ಮಾಧ್ವರು ಪಿತೃದ್ರೋಹಿಗಳು ಮತ್ತು ಮಾತೃದ್ರೋಹಿಗಳು. ಅವರು ಸರ್ವದ್ರೋಹಗಳನ್ನೂ ಮಾಡಿ ಕೃಷ್ಣನ ಕಾಲು ಕಟ್ಟಿಕೊಂಡವರು. ಅವರಿಗೆ ಶಾಸ್ತ್ರಿಗಳ ವೇದವು ಬೇಡ, ಸ್ಮೃತಿಯು ಬೇಡ, ಅವರು ಶೂನ್ಯರು, ಬೌದ್ಧರು, ತಮ್ಮ ಕೆಲಸಕ್ಕೆ ಬೇಕಾಯಿತು, ಆಗ ಎಲ್ಲಾ ಬೇಕು! ಆಗ ಶಾಸ್ತ್ರಿಗಳು ಉದಾಹರಿಸಿರುವ, ''ರಾಕ್ಷಸಾಃ ಕಲಿಮಾಶ್ರಿತ್ಯ ಜಾಯಂತೇ ಬ್ರಹ್ಮಯೋನಿಷು। ಬ್ರಾಹ್ಮಣಾನೇವ ಬಾಧಂತೇ ತತ್ರಾಪಿ ಶ್ರೋತ್ರಿಯಾನ್ ಕೃಶಾನ್॥'' ಎಂಬ ವಚನವೂ ಕೂಡ ಅಮೂಲ್ಯವಾದದ್ದು. ಅದರಿಂದ ವೈಷ್ಣವರೇ ಕಲ್ಯಾವಿಷ್ಟದುಷ್ಟ ಬ್ರಾಹ್ಮಣರಿಂದ ಪೀಡಿತರಾದ ದುರ್ಬಲ ಶ್ರೋತ್ರಿಯರೆಂದು ಅಪ್ರತಿಹತವಾಗಿ ಸಿದ್ಧವಾಗುವುದಂತೆ. ಇಂಥಾ ಮಾಧ್ವರಿಗೆ ''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' ಎಂದು ಕೃಷ್ಣನು ಹೇಳಿರುತ್ತಾನೆ. ಇವರು ನಮಗೆ ತಂದೆತಾಯಿಗಳು ಮಾಡುವುದು ಅಷ್ಟರಲ್ಲೇ ಇದೆ ಎಂದು, ಕೃಷ್ಣನು ಕೊಳಲೂದಿದಾಗ ಅಲ್ಲಿಗೆ ಹೋಗಿ ಮೂರುನಾಲ್ಕು ದಿವಸಗಳು ಸಮಗ್ರವಾಗಿ ಸಂಧ್ಯಾವಂದನೆಯನ್ನೂ ಕೂಡ ಬಿಟ್ಟು, ಜಾತಿಗೆಟ್ಟು ನಿಂತಿದ್ದರು. ಇಂಥಾ ಪಿತೃ ದ್ರೋಹಾದಿಗಳು ಮತ್ತು ಸರ್ವಕರ್ಮಭ್ರಂಶಗಳಿಂದ ಪೂರ್ಣಪಾಪರಾಗಿರುವ ಮಾಧ್ವರಿಗೆ, ''ಯೋಗಕ್ಷೇಮಂ ವಹಾಮ್ಯಹಂ'' ಎಂದು ಹೇಳುವ ಶ್ರೀಕೃಷ್ಣನು ಪಾಲಕನು ಮತ್ತು ಗುರುವು. ಅದಕ್ಕೆ ನಂದನು ದ್ವಾದಶೀದಿವಸ ಕಾಗೆ ಕರ್ರೆನ್ನುವುದಕ್ಕೆ ಮೊದಲೇ ಸಂಧ್ಯಾವಂದನೆಗಳನ್ನೂ ಕೂಡ ಟೋಪಿಹಾಕಿ ಹೊಟ್ಟೆಗೆ ಹಾಕಿಕೊಳ್ಳಬೇಕೆಂದು ಇಚ್ಛಿಸಿ ರಾತ್ರಿ ಎರಡು ಘಂಟೆಗೇ ಸ್ನಾನಕ್ಕೆ ಯಮುನೆಗೆ ಹೋಗಿದ್ದನು. ವರುಣನ ಭೃತ್ಯನಾದ ಒಬ್ಬ ರಾಕ್ಷಸನು- (ಅವನು ರಾಕ್ಷಸನಾದ್ದರಿಂದ ಕೃಷ್ಣಪಾದವನ್ನು ಎರಡು ಮೂರು ದೂರ ಹೊರಗೆ ಹಾಕಿದ್ದನು) ದೇವಪೂಜಾ ಸಂಕೋಚ, ದ್ವಾದಶೀ ಪ್ರಾತರ್ಭೋಜನ ಇದೆಲ್ಲಾ ಕೃಷ್ಣನಿಗೆ ಸಮ್ಮತವಾದುದರಿಂದಲೇ, ಕೃಷ್ಣನು ವರುಣನ ಲೋಕಕ್ಕೆ ಹೋಗಿ ವರುಣನಿಗೆ ತನ್ನ ಭೃತ್ಯನ ಶಿಕ್ಷೆಯನ್ನು ಮಾಡದಿದ್ದಕ್ಕೋಸ್ಕರ ಎರಡು ಲಾತು ಕೊಟ್ಟು ನಂದನನ್ನು ಪುನಃ ಕರೆದು ಕೊಂಡು ಬಂದನು. ಅಂಬರೀಷನೂ ಸಹ ಮಹಾನುಭಾವ ರಾದ ದೂರ್ವಾಸರನ್ನು ಬಿಟ್ಟು ಬಿಟ್ಟು ಕೃಷ್ಣಾಜ್ಞೆಯಂತೆ ದ್ವಾದಶೀ ಪ್ರಾತಃ ಕಾಲವೇ ಬ್ರಾಹ್ಮಣಭೋಜನವನ್ನು ಮಾಡಿಸಿ ತಾನೂ ತೀರ್ಥ ಪ್ರಾಶನ ಮಾಡಿಬಿಟ್ಟನು. ಇವರೆಲ್ಲಾ ಏಕಾದಶೀ ಉಪವಾಸ ಮಾಡಿದವರು. ರುಕ್ಮಾಂಗದನೂ ಏಕಾದಶೀ ಉಪವಾಸ ಮಾಡಿದವನು. ಅಂಬರೀಷನೂ ಏಕಾದಶಿ ಉಪವಾಸ ಮಾಡಿದವನು. ಕೃಷ್ಣನ ತಂದೆಯಾದ ನಂದನೂ, ಅವನ ಊರಿನಲ್ಲಿರುವವರೂ ''ಏಕಾದಶ್ಯಾಂ ನಿರಾಹಾರಃ'' ಎಂಬ ಭಾಗವತದ ಸ್ಪಷ್ಟವಚನಾನುಸಾರ, ಉಪೋಷ್ಯ ಮಾಡಿದವರೇ. ಇವರು ತಾವುಗಳು ಉಪವಾಸ ಮಾಡುವುದಲ್ಲದೇ ದೇವತೆಗಳಿಗೂ, ಪಿತೃಗಳಿಗೂ ಸಹ ಸ್ವಲ್ಪ ನೀರನ್ನಾಗಲೀ, ಒಂದು ಅಕ್ಕಿಕಾಳನ್ನಾಗಲೀ, ದಮ್ಮಯ್ಯ ಎಂದು ಕೇಳಿ ದರೂ ಕೊಡಲಾರರು. ಇದರ ಗುಟ್ಟು ಏನೆಂದರೆ, ಸರ್ವದೇವತೆಗಳೂ ವಿಷ್ಣುವಿನ ಆಶ್ರಯದಿಂದ ಏಕಾದಶೀ ದಿವಸದ ಉಪವಾಸದ ಪುಣ್ಯಪ್ರಭಾವದಿಂದಲೇ ಸಕಲ ದೈತ್ಯರನ್ನೂ ನಿಗ್ರಹ ಮಾಡಿದಮೇಲೆ, ಇನ್ನು ಮೇಲೆ ನಾವು ಏಕಾದಶೀ ದಿವಸ ವಿಷ್ಣುಧ್ಯಾನಪರರಾಗಿ ಮಹತ್ತಾದ ಪುಣ್ಯವನ್ನು ಸಂಪಾದಿಸುವೆವು. ಆ ದಿವಸ ನಮ್ಮ ಕಛೇರಿಯ ಬಾಗಲು ಹಾಕಿರುತ್ತೇವೆ. ನಮಗೆ ಯಾರೂ ಅರ್ಜಿ ಕೊಡಬಾರದು ಎಂದು ಹೇಳಿದರು. ಪಿತೃದೇವತೆಗಳೂ ನಾವೂ ಏಕಾದಶೀ ದಿವಸ ಕಾಗೆಯಂತೆ ಮನೆಮನೆಗೆ ಅಲೆಯುವುದಿಲ್ಲ, ಏಕಾದಶೀ ಉಪವಾಸ ಮಾಡುತ್ತೇವೆ. ಕೃಷ್ಣನನ್ನು ಧ್ಯಾನ ಮಾಡುತ್ತೇವೆ. ನಾವು ರಾಕ್ಷಸರಲ್ಲ ಎಂದು ಹೇಳಿದರು. ಮಾಧ್ವರೂ ಸಹ ನಾವೂ ನಿರಾಹಾರದಿಂದಿದ್ದು ವಿಷ್ಣುಧ್ಯಾನ ಮಾಡುತ್ತೇವೆ, ನಾವೂ ದೇವಪಕ್ಷಪಾತಿಗಳು ಎಂದು ಪ್ರತಿಜ್ಞೆಮಾಡಿದರು. ವಿಷ್ಣುವು ''ನೀವು ಹಾಗೇ ಮಾಡಿ; ದ್ವಾದಶೀ ಬೆಳಿಗ್ಗೆ ಸೂರ್ಯೋದಯದಲ್ಲೇ ಭೋಜನಮಾಡಿ ಶ್ರಾದ್ಧವನ್ನೂ ಸಹ ದ್ವಾದಶೀ ದಿವಸವೇ ಮಾಡಿ, ಪಿತೃಗಳಿಗೆಲ್ಲಾ ಅನ್ನಘ್ರಾಣವನ್ನು ಸಹ ಮಾಡುವುದಿಲ್ಲವಾದ್ದರಿಂದ ಮತ್ತು ಕಛೇರಿ ಜವಾನರಿಗೂ ಸಹ ಚಿಲ್ಲರೆ ಕೆಲಸದಿಂದ ರಜಾ ಕೊಟ್ಟಿರುತ್ತದೆಯಾದ್ದರಿಂದ ನೀವು ಶ್ರಾದ್ಧವನ್ನು ಮಾಡಬೇಡಿ'' ಎಂದು ಹೇಳಿದನು. ಎಲ್ಲಾ ಒಪ್ಪಂದವಾಯಿತು. ಎಲ್ಲಿ? ಇಷ್ಟೂ ವೈಷ್ಣವರಾದ 'ಕೃಷ್ಣಾನುಯಾಯಿಗಳಲ್ಲಿ'. ಇತರರಿಗೆ, ಅದರಲ್ಲೂ ಕೃಷ್ಣಾನುಸರಣೆಯನ್ನು ಮಾಡದವರಿಗೆ ಏನು ತಿಕ್ಕಲು? ದಾಸ್ ಸತ್ತು ಹೋದದಕ್ಕಾಗಿ ಗಾಂಧಿ ಮೊದಲಾದವರು

ಉಪವಾಸ ಮಾಡಿದರು. ಬ್ರಿಟಿಷರು ಯಾಕೆ ಮಾಡುವರು? ಹಾಗೆಯೇ ಲೋಕದ ಸಕಲ ಅವೈಷ್ಣವರೆಲ್ಲರೂ ಈ ವ್ರತವು ''ನಮಗೆ ಉಕ್ತವಾಗಿಲ್ಲ. ಶಿವರಾತ್ರೆ ಮೊದಲಾದ ಶೈವವ್ರತಗಳು ನಮ್ಮ ಹಕ್ಕಿಗೆ ಸೇರಿರುವುವು ಎಂದು ನಿಶ್ಚಯಿಸಿದರು. ಏಕಾದಶೀ ಶ್ರಾದ್ಧಾದಿಗಳನ್ನು ನಾವು ಮಾಡಿಯೇ ಮಾಡುತ್ತೇವೆ. ನಾವೇನೂ ಅಪವಿತ್ರವಾದ ವಿಷ್ಣುನೈವೇದ್ಯವನ್ನು ಭಕ್ಷಿಸುವವರಲ್ಲ. ಅದನ್ನು ಅವರಿಗೆ ಅರ್ಪಿಸುವವರೂ ಅಲ್ಲ. ನಮ್ಮ ಪಿತೃಗಳು ದೇವಪಕ್ಷ ಸೇರಿಲ್ಲವಾದುದರಿಂದ ಅವರು ಉಪವಾಸವನ್ನು ಮಾಡುವವರಲ್ಲ. ನಮ್ಮ ಪಿತೃಗಳಿಗೆ ತಲುಪಿಸುವುದಕ್ಕೋಸ್ಕರ ನಮ್ಮ ಕುಲವೃದ್ಧರಾದ ವಿಪ್ರಚಿತ್ತಿ, ಕಾಲನೇಮಿ, ಮಧುಕೈಟಭ, ಬಾಣ ಹಿಡಂಬಾದಿಗಳನ್ನು ಪ್ರಾರ್ಥಿಸುತ್ತೇವೆ. ನಮ್ಮ ಸರ್ಕಾರವು ಬೇರೆ ಎಂದು ತೀರ್ಮಾನ ಮಾಡಿಕೊಂಡರು. ಕೆಲವರು ಏನೋ ಅಂತರದ್ರೋಹಿಗಳು ಇರುವರು; ಬುದ್ಧಿಹೀನರು; ಪರಪಕ್ಷಕ್ಕೆ ಹೋಗಿ ವಿಷ್ಣುವ್ರತವನ್ನು ಮಾಡಿ ದೇವತೆಗಳಿಂದ ಬೆಳ್ಳಿಗಿಂಡಿ ಮುಂತಾದವುಗಳನ್ನು ಹೊಡೆದುಕೊಂಡು ಸ್ವಪಕ್ಷದಮೇಲೂ ಕೈ ಮಾಡುತ್ತಾರೆ. ಆದರೇನು! ಒಂದೊಂದು "black sheep" ಇದ್ದ ಮಾತ್ರಕ್ಕೆ ಕುಲದ ಕಟ್ಟು ಸಡಿಲುವುದೇ ! ಅದುಟ್ವೈನ್ ದಾರಕ್ಕೆ ಚೊಳ್ಳೆ ಹಣ್ಣಿನ ಅಂಟಿನಿಂದ ಮಾಡಿದ ಗಂಟು. ಅದು ಅಭೇದ್ಯ. ಹೀಗಿರುವುದರಿಂದ ಇದು ನಿರ್ಣಯವಾಯಿತು. ವಿಷ್ಣುವಿನ ಸರ್ಕಾರಕ್ಕೆ ಸೇರಿದವರು ದೇವಪಿತೃಮನುಷ್ಯರೆಲ್ಲರೂ ಏಕಾದಶಿ ನಿರಾಹಾರ ಮಾಡಿ, ಶ್ರಾದ್ಧವನ್ನು ಮರುದಿನಕ್ಕಿಟ್ಟು ಕೊಂಡು ವಿಷ್ಣುಧ್ಯಾನ ತತ್ಪರರಾಗಬೇಕು. ಏಕಾದಶೀ ಅನ್ನ ಭೋಜನ ಮಾಡಿದರೆ, ''ತದನ್ನಂಮಲಸದೃಶಂ'' ಎಂದರೆ ಆ ಅನ್ನವು ಮಲಕ್ಕೆ ಸರಿಯಾಗುವುದೆಂದು ವೈಷ್ಣವ ಬ್ರಾಹ್ಮಣರೂ ಸಹ ಭೋಜನಕ್ಕೂ ನಿಮಂತ್ರಣಕ್ಕೂ ಬರಲಾರರು, ಮತ್ತು ಬರಕೂಡದು. ಇತರ ಸಂಪ್ರದಾಯ ಪ್ರವರ್ತಕರಾದ ವಿಷ್ಣುಪಕ್ಷಪಾತ ರಹಿತರಾದ ಸತ್ತುಹೋದ ಪಿತೃಪೂಜೆಯಲ್ಲಿ ಶ್ರದ್ಧಾವಿಶೇಷಮಾತ್ರದಿಂದ ಕೂಡಿದವರೆಲ್ಲರಿಗೂ ಏಕಾದಶೀ ಶ್ರಾದ್ಧವು ಅವಶ್ಯಕವು, ಏಕಾದಶೀ ಭೋಜನವು ವಿಹಿತವು. ವಿಷ್ಣುವ್ರತವು ಅವರಿಗೆ ಅಮಂಗಳವು.

ಇದು ನಮ್ಮ ನಿರ್ಣಯವು. ವಚನವೂ ಹಾಗೆಯೇ ಇರುವುದು.

ಪ್ರಿಂಟಾದ ವರಾಹಪುರಾಣ ಚಾತುರ್ಮಾಸ್ಯ ಮಹಾತ್ಮ್ಯೆಯು ಅಧ್ಯಾಯ ನಾಲ್ಕರಲ್ಲಿ:-

''ಸೂತಕಾದೌ ಯಥಾಶ್ರಾದ್ಧಂ ಸೂತಕಾಂತೇ ವಿಧೀಯತೇ। ತಥೈವೈಕಾದಶೀಶ್ರಾದ್ಧಂ ವಿದದ್ಧ್ಯಾತ್ ದ್ವಾದಶೀದಿನೇ॥
ಪ್ರೇತದಾಹೇತುಸಂಪ್ರಾಪ್ತೇ ಜುಹುಯಾದ್ವೈಘೃತಾಹುತಿಂ। ನ ಚರುಂ ಶ್ರಪಯೇತ್ತತ್ರ ಪ್ರೇತಪಿಂಡಂ ಚ ಸಕ್ತುಭಿಃ॥
ವಿದಧೀತ ದ್ವಿತೀಯೇಽಹ್ನಿತತಃ ಶ್ರಾದ್ಧಂ ಸಮಾಚರೇತ್। ಏಕಾದಶ್ಯಾಂ ಅಯಂಧರ್ಮೋ ನಾಧರ್ಮಃ ಕರ್ಹಿಚಿದ್ಭವೇತ್॥''

ಕಿಂಚ ಸ್ಕಾಂದ ಪುರಾಣದ ಉತ್ತರಕಾಂಡದಲ್ಲಿ:-

''ಮಾತಾಪಿತ್ರೋರ್ದಿನೇಪ್ರಾಪ್ತೇ ವಿಷ್ಣೋರಹನಿವೈದ್ವಿಜ। ತತ್ರಶ್ರಾದ್ಧಂ ನ ಕರ್ತವ್ಯಂ ದ್ವಾದಶ್ಯಾಂಕಾರಯೇದ್ಬುಧಾಃ॥
ತದತಿಕ್ರಮಣೇ ದೋಷೋ ಮಹಾನ್ ಯೋ ಋಷಿಭಿಃ ಸ್ಮೃತಃ। ತದನ್ಯದಿವಸೇ ವಿಪ್ರಾಃ ತಸ್ಮಾತ್ತದ್ದಿವಸಂ ತ್ಯಜೇತ್।
ತತ್ರೈವ ಯದಿ ಮೋಹೇನ ಕುರ್ಯಾಚ್ಛ್ರಾದ್ಧಾದಿಕಂ ತತಃ। ರೌರವಂ ನರಕಂ ಯಾತಿ ಯಾವದಾಭೂತಸಂಪ್ಲವಂ॥''

ಈ ವಚನವು ಇದ್ದ ಮಾತ್ರಕ್ಕೆ [44]- ಇನ್ನೂ ಕೆಲವು ವಚನಗಳೂ ರಿಜರ್ವ ಆಗಿ ಇರುತ್ತವೆ. ಪ್ರಕೃತದಲ್ಲಿ ಒಂದು ವಿಷಯದಲ್ಲಿ ಒಂದು

---

[44] ಆಹ್ನಿಕೌಸ್ತುಭವೇ ಮುಂತಾದ ಗ್ರಂಥಗಳಲ್ಲಿ ಶ್ರುತ್ಯುದಾಹರಣ ಪೂರ್ವಕವಾಗಿ ಏಕಾದಶೀ ನಿರ್ಣಯವು ಮಾಡಲ್ಪಟ್ಟಿರುವುದು. ಇದು ಮತ್ತು ಅನೇಕ ಸ್ಕಾಂದವಚನಗಳನ್ನೂ ಸಹ ಸಮಗ್ರಗ್ರಂಥವನ್ನೂ ತರಿಸಿಕೊಂಡು ನೋಡಿ ಪಂಕ್ತಿಗಳನ್ನು ನಿರೂಪಿಸಿರುತ್ತೇವೆ. ದ್ವೈತತತ್ವವು ಸಿದ್ಧಾಂತಿತವಾಗುವುದಕ್ಕೆ ಸರ್ವಸಂಪ್ರತಿಪನ್ನವಾದ ಪ್ರಸಿದ್ಧ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳು ಸಾಕು. ವಿಶೇಷ ಸೂಕ್ಷ್ಮಗಳ ಅವಗಾಹನೆಗಾಗಿ ಮತ್ತು ದಾರ್ಢ್ಯಾರ್ಥವಾಗಿ ಶ್ರೀಮದಾಚಾರ್ಯರು ಈ ಲೋಕದಲ್ಲೇ ಹಾಲಿ ಉಪಲಬ್ಧವಾಗದ 100-120 ಗ್ರಂಥಗಳಿಂದ ಪ್ರಮಾಣಗಳನ್ನು ಉದಾಹರಿಸಿರುವರು. ಅವರು ಪ್ರಸಿದ್ಧ ಗ್ರಂಥಗಳಿಂದ ಉದಾಹರಿಸಿರುವ ವಚನ ಸಂಗ್ರಹವನ್ನು ಸಾಂಬಶಾಸ್ತ್ರಿಗಳು ನಮಗೆ ಮಾಡಿಕೊಟ್ಟರೆ, ನಾವು ಅಧ್ಯಾಯ ಪಂಕ್ತಿಗಳನ್ನು ಅವರಿಗೆ ಬರೆದು ತಲುಪಿಸುವೆವು. ಅಪ್ರಸಿದ್ಧ ಗ್ರಂಥೋದಾಹರಣೆಯು ಅವರ ಸರ್ವಜ್ಞತೆಗೆ ನಿದರ್ಶನವೇ ಆಗಿರುವುದು. ಪ್ರಸಿದ್ಧಶ್ರುತಿಸ್ಮೃತಿಗಳಿಂದ ಸಾಧಿಸುವುದಕ್ಕೆ ಅಸಾಧ್ಯವಾದ ಯಾವುದಾದರೂ ಒಂದು ಮುಖ್ಯಪ್ರಮೇಯವನ್ನು ಅವರು ಅಪ್ರಸಿದ್ಧಶ್ರುತಿಯಿಂದ ಸಾಧಿಸಿದ್ದರೆ ನಾವು ಕಥಂಚಿತ್ ಸಂದೇಹಪಡಬಹುದಾಗಿತ್ತು. ಶಾಸ್ತ್ರಿಗಳು ದ್ವೈತತತ್ವದ ಮುಖ್ಯಪ್ರಮೇಯವನ್ನೂ ಬೇಕಾದುದನ್ನೂ ಕೊಡಲಿ. ನಾವು ಅವರ ಪ್ರಸಿದ್ಧ ವಾಕ್ಯಗಳಿಂದಲೇ ಸಾಧಿಸಿಕೊಡುವೆವು. ಇದರ ಮೇಲೆ, 'ಅನಂತಾವೈವೇದಾಃ' ಇತ್ಯಾದಿ ಪ್ರಮಾಣಗಳಿಂದ ಶ್ರುತಿ, ಸ್ಮೃತಿ, ಇತಿಹಾಸಾದಿ ಗ್ರಂಥಗಳು ಭೂಲೋಕದಲ್ಲಿ ಇಲ್ಲದ್ದು ಎಷ್ಟೋ ಇರಬೇಕೆಂದು ಸಿದ್ಧವಾಗುತ್ತದೆ. ಅವುಗಳನ್ನು ಯಾರಾದರೂ ನೋಡಿರಬಹುದು. ಸರ್ವಜ್ಞರೆಂದು ಒಬ್ಬರು ಪ್ರಮಿತವಾದರೆ ನಂತರ ಅಪ್ರಸಿದ್ಧೋಧಾರಣೆಯು ಬಾಧಕವಿಲ್ಲವಷ್ಟೆ! ನಾವು ತೋರಿಸಿ ಕೊಡುವೆವು.

ಪ್ರಮಾಣವು:- ಹರತಿ ಆಚಾರ್ರು ಜಂಬ ಮಾಡುವುದಕ್ಕೆ ಕಾರಣವಿಲ್ಲ, ಇದು ವೈಷ್ಣವರ ವಿಷಯದಲ್ಲಿ ಪ್ರವೃತ್ತವಾದುದು. ಆ ವಿಷಯದಲ್ಲಿ ಸಂದೇಹರ್ವ ಇಲ್ಲ, ಲಕ್ಷ್ಮೀದೇವತೆಯು ಮೊದಲುಗೊಂಡು ಹರತೀ ಆಚಾರ್ರವರೆವಿಗೆ ಸಕಲ ವೈಷ್ಣವರಿಗೂ ಏಕಾದಶೀ ದಿನ ಹೊಟ್ಟೆಗೆ ಹಿಟ್ಟಿಲ್ಲ, ಶ್ರಾದ್ಧಬಂದರೂ , ಕಣ್ಣಿನ ಬಿಳಿಗುಡ್ಡೆ ಮೇಲಕ್ಕೆ ಹತ್ತಿಕೊಂಡರೂ ಅಷ್ಟೇ! ಕಲಿ ವಿಪ್ರಚಿತ್ತಿಯೇ ಮೊದಲಾದ ದಾನವ ಪ್ರಮುಖರೆಲ್ಲಾ ಏಕಾದಶೀ ಭೋಜನಪ್ರಿಯರು. ಇದು ಅವರ ಕುಲಧರ್ಮವು. ಇದು ಅವರ ಧರ್ಮವಲ್ಲವೆಂಬ ಪಕ್ಷದಲ್ಲಿ ಒಂದು ಶ್ರುತಿ, ಸ್ಮೃತಿ, ಇತಿಹಾಸ, ಪುರಾಣವಚನವಿದ್ದರೆ ಹರತಿ ಆಚಾರ್ರು ತೋರಿಸಲಿ. ಹೀಗಿರುವುದರಿಂದ ನಮ್ಮ ನಿರ್ಣಯವನ್ನು ಈ ಶಾಸ್ತ್ರಿಗಳ ಪರವಾಗಿಯೇ ಕೊಟ್ಟಿರುತ್ತೇವೆ. ಹರತಿ ಆಚಾರ್ರಪಕ್ಷವನ್ನು ಖಂಡನೆಮಾಡಿಲ್ಲವಾದುದರಿಂದ ಅವರು ಸಂಕಟಪಡಲಾರ ರೆಂದು ದೇವರನ್ನು ಪ್ರಾರ್ಥಿಸುತ್ತೇವೆ.[55]

ಇದೇ ಸಂದರ್ಭದಲ್ಲಿ ಮಧ್ವಾಚಾರ್ಯರ ಜೀವೋತ್ತಮತ್ವವೇ ಮೊದಲಾದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಆಡಬಹುದು ಜಗತ್ಪ್ರಾಣನಾದ ವಾಯುವು ವೈಷ್ಣವೋತ್ತಮನು ಮತ್ತು ಸರ್ವಜ್ಞನು ಎಂದೂ, ಅವನು ಕೇವಲ ವೈಷ್ಣವರ ಗುರುವಾದುದರಿಂದ ವಿಷ್ಣು ದ್ವೇಷಿಗಳ ಮುಖವನ್ನು ನೋಡುವುದಿಲ್ಲವೆಂದೂ, ಶಾಸ್ತ್ರಿಗಳಂಥಾವರಿಗೆ ಅವರು ಊರಲ್ಲಿರುವುದೂ ಸಹ ಗೊತ್ತಾಗಲಾರದೆಂದೂ ಸಯುಕ್ತಿಕವಾಗಿ ಸ್ಕಾಂದಪುರಾಣದ ವೈಶಾಖಮಾಸ ಮಾಹಾತ್ಮ್ಯೆ ಎಂಬ ವೆಂಕಟೇಶ್ವರ ಪ್ರೆಸ್ಸಿನಲ್ಲಿ ಪ್ರಿಂಟಾದ ಗ್ರಂಥದಲ್ಲೂ, ಗರುಡ ಪುರಾಣದಲ್ಲೂ ಇರುತ್ತದೆ. ವಾಯು ಜೀವೋತ್ತಮತ್ವದಲ್ಲಿ ಇನ್ನೂ ಅನೇಕ ಶ್ರುತಿಗಳನ್ನೂ ಗ್ರಂಥಾಂತರದಲ್ಲಿ ವಿವರಿಸುವೆವು. ಅಂಥಾ ವಾಯುದೇವತೆಯೇ ಮಧ್ವಾಚಾರ್ಯರಾದರೆಂಬಲ್ಲಿ ಅವರ ಸ್ವಂತಮಾತುಗಳೂ, ಮತ್ತು ತ್ರಿವಿಕ್ರಮ ಪಂಡಿತಾಚಾರ್ಯರು ಮತ್ತು ನಾರಾಯಣ ಪಂಡಿತಾಚಾರ್ಯರ ಮಾತೂ ಸಾಕು. ''ವೈಷ್ಣವರಿಗೆ ಸಾಕು.'' ಅವರು ವೈಷ್ಣವ ಗುರುಗಳು. ಅವರ ಮಹಿಮೆಯನ್ನು ಶಾಸ್ತ್ರಿಗಳಿಗೆ ತಿಳಿಸಿಕೊಡುವುದಕ್ಕೆ ಹರತೀ ಆಚಾರ್ರು ಹೊರಟಿದ್ದೇ ತಪ್ಪು. ಯದ್ಯಪಿ ಈ ವಿಷಯದಲ್ಲಿ ಅನೇಕ ಶ್ರುತಿಗಳೂ ಪುರಾಣಗಳೂ ಇರುತ್ತವೆ. ಇದ್ದರೆ ತಾನೇ ಏನು? ಶಾಸ್ತ್ರಿಗಳು ಹೇಳಲಿಲ್ಲವೇನು? ಪುರಾಣಗಳಲ್ಲಿ ನಿಮಗೆ ಬೇಕಾದ್ದಕ್ಕೆಲ್ಲಾ ವಚನವುಂಟು.

(3) ಇನ್ನೂ ಕೆಲವು ಗ್ರಂಥನಾಮಧೇಯಗಳನ್ನು ಶಾಸ್ತ್ರಿಗಳ ಮನಸ್ಸೃಪ್ತಿ ಬಗ್ಗ್ಯೆ ವಿವರಿಸುತ್ತೇವೆ. ಪುಟ. 26 ರಲ್ಲಿ ಮಧ್ವಮತವನ್ನು ಹೊಸದಾಗಿ ಖಂಡಿಸುವುದು ಅಪ್ರಕೃತವೆಂದು ಶಾಸ್ತ್ರಿಗಳು ಹೇಳಿರುತ್ತಾರೆ. ಈ ವಿಷಯದಲ್ಲಿ ಹಿಂದೆ ಬಹುಕಾಲದಲ್ಲಿ ತಿಮ್ಮಪ್ಪನಿಗೂ ಜಟ್ಟಪ್ಪನಿಗೂ ವಾಕ್ಯಾರ್ಥವು ನಡೆದೇ ಹೋಗಿದೆ. ನಾವು ಪೃಥಕ್ಕಾಗಿ ವಿವರಿಸಬೇಕಾಗಿಲ್ಲ, ಎಂದು ಹೇಳಿರುತ್ತಾರೆ. ಹಿಂದೆಯೇ ಮಧ್ವಮತ ವಿಧ್ವಂಸನ, ಮಧ್ವಮತ ಚಪೇಟಿಕಾ, ಮಧ್ವಮತ ಯೋಗ್ಯತಾ, ಧ್ವಾಂತದಿವಾಕರ ಎಂಬ ನಾಲ್ಕು ಕಥೇರಿ ಗ್ರಂಥಗಳು ಮಧ್ವಮತವನ್ನು ಸಾಯಿಸಿ ಹೊತ್ತುಕೊಂಡು ಹೋಗಿರುತ್ತವೆ ಎಂದು ಹೇಳಿದ್ದಾರೆ.

ಅದು ನಡೆದ ವೃತ್ತಾಂತವಲ್ಲ, ಸಮಾಧಿಯೋಗದಲ್ಲಿ ನಿರತನಾದ ಯೋಗಿಯು ಕಣ್ಣುಮುಚ್ಚಿಕೊಂಡಿರುವುದನ್ನು ನೋಡಿ ನಾಲ್ಕು ಜನ ಶತ್ರುಗಳು ಅವನನ್ನು ಬದುಕಿರುವಾಗಲೇ ಸುಟ್ಟುಬಿಟ್ಟು, ಆಶ್ರಮವನ್ನೆಲ್ಲಾ ಲೂಟಿ ಮಾಡಿಬಿಡಬೇಕೆಂದು ಎಣಿಸಿದ್ದರು. ಆಗ ಬೇಟೆಯ ಉದ್ದಿಶ್ಯ ಬಂದ ರಾಜನು ಅವರುಗಳನ್ನು ಸಂಹರಿಸಿ ಋಷಿಯನ್ನು ರಕ್ಷಿಸಿದನೆಂದು ಕಥಾಪ್ರಸಿದ್ಧವಾಗಿದೆ. ಪ್ರಕೃತದಲ್ಲಿ ಹಾಗೆಯೇ ಆಯಿತು. ಈ ನಾಲ್ಕು ಗ್ರಂಥಗಳೂ ಹಿಂದೆಯೇ ಸಪ್ರಮಾಣವಾಗಿ ಖಂಡಿಸಲ್ಪಟ್ಟಿವೆ ಎಂದು ಉತ್ತರ ಕೊಟ್ಟರೆ ಶಾಸ್ತ್ರಿಗಳಿಗೆ ಸ್ವಲ್ಪ ಕಷ್ಟಕ್ಕೆ ಬರುವುದು. ಮಧ್ವಮತ ವಿಭೂಷಣ, ಅಪ್ಪಯ್ಯದೀಕ್ಷಿತ ಚಪೇಟಿಕಾ, ಅದ್ವೈತಯೋಗ್ಯತಾ ಪ್ರದರ್ಶನ, ಅಂತ್ಯಾರ್ತ ಸಮಯ ಪ್ರೇತತ್ವ ಸಮರ್ಥನವೇ ಮುಂತಾದ ಭಂಜನ ಗ್ರಂಥಗಳು ಪ್ರಪಂಚದಲ್ಲಿ ಥೈ ಥೈ ಎಂದು ಕುಣಿಯುತ್ತಿರುವುವು ಎಂದು ನಾವೂ ಕೇಳಿರುತ್ತೇವೆ. ಅದ್ವೈತ ಮುಖಮರ್ದನ, ಪರತತ್ವ ಪ್ರಕಾಶಿಕಾ, ಅದ್ವೈತ ಕಾಲಾನಲವೇ ಮುಂತಾದ ಗ್ರಂಥಗಳು ಶತ್ರು ಸಂತಾಪಕರವಾಗುವಂತೆ ತಪಿಸುತ್ತಿಲ್ಲವೇ?

(4) ಇದೂ ಅಲ್ಲದೇ ಪೂರ್ವದಲ್ಲಿ ನಡೆದ ಅನೇಕ ವಾಕ್ಯಾರ್ಥಗಳಲ್ಲೂ ಇದುವರೆವಿಗೆ ವೈಷ್ಣವರೇ ಜಯಶೀಲರೆಂದೂ ಸ್ಮಾರ್ತರು ಆರ್ತರಾಗಿ ಪ್ರಯಾಣಮಾಡಿರುವರೆಂದೂ, ನಮಗೆ ತಿಳಿದು ಬರುತ್ತದೆ. ಅಪ್ಪಯ್ಯ ದೀಕ್ಷಿತರಿಗೂ, ವಿಜಯೀಂದ್ರ ಸ್ವಾಮಿಗಳಿಗೂ ವಾಕ್ಯಾರ್ಥವು ನಡೆದಾಗ ದೀಕ್ಷಿತರು ಅಸಂಬದ್ಧವಾದ ಕೆಲವು ಮಾತುಗಳನ್ನು ಆಡಿದರಂತೆ. ಆಗ ವಿಜಯೀಂದ್ರರು ಅಪಹಾಸ್ಯ ಮಾಡಿದರಂತೆ. ಆಗ ಸುತ್ತಲೂ

[55] ಏಕಾದಶೀ ನಿರಾಹಾರವು ವೇದೋಕ್ತವೆಂದು ಸ್ಮಾರ್ತವೈಷ್ಣವರಿಬ್ಬರೂ ಒಪ್ಪಿರುತ್ತಾರೆ. (ಕೈಲಾಗದೇ ಆಚರಣೆ ಮಾಡದಿರುವುದು ಬೇರೆ ವಿಷಯ). ಏಕಾದಶೀ ನಿರಾಹಾರವನ್ನು ಒಪ್ಪಿ ಆ ದಿವಸ ಶ್ರಾದ್ಧವನ್ನು ಮಾಡುವುದು ಹೇಗೆ ಕೂಡುವುದು? ನಿಮಂತ್ರಿತ ಬ್ರಾಹ್ಮಣರು, ಯಜಮಾನನು ಇವರೆಲ್ಲಾ ಭೋಜನಾದಿಗಳನ್ನು ಮಾಡಿದರೆ ಇವರು ಏಕಾದಶಿಯನ್ನು ನಾಶಮಾಡಿದ ಹಾಗೆ ಆಗಲಿಲ್ಲವೇ? ಪಿತೃಶ್ರಾದ್ಧವು ಏಕಾದಶೀ ದಿವಸ ಬಂದರೂ ಆ ದಿವಸವೇ ಮಾಡಿ ಭೋಜನ ಮಾಡಿದವರಿಗೆ ದೋಷವಿಲ್ಲವೆಂಬ ಒಂದು ಶ್ರುತಿಯು ಅಥವಾ ಅವಿರುದ್ಧ ಸ್ಮೃತಿಯು ಇದ್ದರೆ ಶಾಸ್ತ್ರಿಗಳು ತೋರಿಸಬಹುದು. ಅಂಥಾದ್ದು ಒಂದೂ ಇಲ್ಲ. ಈ ದಿನ ಸೃಷ್ಟಿ ಮಾಡಿದರೆ ಐವತ್ತು ವಾಕ್ಯಗಳನ್ನು ಕಲ್ಪಿಸಬಹುದು.

ಇದ್ದವರೆಲ್ಲರೂ ಫಕ್ಕನೆ ನಕ್ಕರಂತೆ. ಇದು ದಕ್ಷಿಣದೇಶದಲ್ಲೆಲ್ಲಾ ಅದ್ಯಾಪಿ ಸುಪ್ರಸಿದ್ಧವಾದ ವಿಷಯವು. ಇನ್ನೂ ಪೂರ್ವದಲ್ಲಿ ವಿದ್ಯಾರಣ್ಯರಿಗೂ ಅಕ್ಷೋಭ್ಯತೀರ್ಥರಿಗೂ ನಡೆದ ಸಂವಾದವು ವಿಶಿಷ್ಟಾದ್ವೈತಿಗಳ ಗ್ರಂಥದಲ್ಲೇ ಉಪಲಬ್ಧವಾಗುವು ದರಿಂದ ಸುಳ್ಳೆಂದು ಹೇಳುವುದಕ್ಕೆ ಕಾರಣವಿಲ್ಲ. ವೇದಾಂತದೇಶಿಕಾಚಾರ್ಯರು ನ್ಯಾಯಾಧಿಪತಿಗಳು. ವಿದ್ಯಾರಣ್ಯರು ತತ್ವಮಸಿ ವಾಕ್ಯಾರ್ಥದಲ್ಲಿ ಸೋತುಹೋದರೆಂದು ನಿರ್ಣಯವನ್ನು ಕೊಟ್ಟರು. ''ಅಸಿನಾ ತತ್ವಮಸಿನಾ ಪರಜೀವಪ್ರಭೇದಿನಾ। ವಿದ್ಯಾರಣ್ಯ ಮಹಾರಣ್ಯಂ ಅಕ್ಷೋಭ್ಯಮುನಿರಚ್ಛಿನತ್'' ಎಂಬುದು ಅವರ ನಿರ್ಣಯವಾಕ್ಯವು. ಇದು ನಿರವಕಾಶವಾದ ಜಡ್ಜಮೆಂಟ್. ಇಲ್ಲಿ ಶಾಸ್ತ್ರಿಗಳು ಸ್ವಲ್ಪ ಬೇರೆ ಕಥೆಯಿಂದ ಸ್ವಲ್ಪ ಮರುಳು ಮಾತನ್ನಾಡಿರುವರು. ಏನೆಂದರೆ, ವಿದ್ಯಾರಣ್ಯರು ವೇದಾಂತಾಚಾರ್ಯರ ನಿರ್ಣಯವನ್ನು ಕೇಳಿ ಹತಮನಸ್ಕರಾಗಿ ತುಟಿಯನ್ನು ಕೆಳಗೆ ಮಾಡಿಕೊಂಡು ಜೋಲುಮೋರೆಯಿಂದ ವೇದಾಂತಾಚಾರ್ಯರ ಸಮೀಪಕ್ಕೆ ಬಂದು ''ನೀವುಹೀಗೆ ನಿರ್ಣಯವನ್ನು ಕೊಟ್ಟು ಬಿಟ್ಟರಲ್ಲಾ! ನನ್ನ ಗತಿ ಏನು?'' ಎಂದು ಕೇಳಿದ ಹಾಗೂ, ಅದಕ್ಕೆ ದೇಶಿಕಾ ಚಾರ್ಯರು ಪ್ರಕಾರಾಂತರವಾಗಿ ತಮ್ಮ ಶ್ಲೋಕಕ್ಕೆ ಅರ್ಥವನ್ನು ಹೇಳಿ ಕಣ್ಣೀರೊರಸಿದ ಹಾಗೂ ಶಾಸ್ತ್ರಿಗಳು ಹೇಳುತ್ತಾರೆ. ಅಂತೂ ಸಭೆಯಲ್ಲಿ ನಾಲ್ಕು ಜನರ ಮುಂದೆ ವಿದ್ಯಾರಣ್ಯರು ಬಿದ್ದು ಹೋದರು ಎಂದು ಶಾಸ್ತ್ರಿಗಳು ಒಪ್ಪಿದ ಹಾಗಾಯಿತು. ಕಿಂಚ ಶಾಸ್ತ್ರಿಗಳು ಹೇಳುವಂಥಾ ಮಾತನ್ನು ದೇಶಿಕಾಚಾರ್ಯರು ಆಡಿರಲಾರರು. ಯಾತಕ್ಕೆಂದರೆ, ತಮ್ಮ ಮತಕ್ಕೆ ಪೆಂಗನಾಮವನ್ನು ಹಾಕಿಕೊಳ್ಳು ವಂಥಹ ರೀತಿಯಲ್ಲಿ ಮತಸ್ಥಾಪಕರಾದ ದೇಶಿಕಾಚಾರ್ಯರು ಹೇಗೆ ಆಡುವರು. ಅಲ್ಲದೇ ನಾವು ಕೇಳಿರುವುದೇನೆಂದರೆ, ದೇಶಿಕಾಚಾರ್ಯರು ವಿದ್ಯಾರಣ್ಯರನ್ನು ಕುರಿತು ಹೀಗೆ ಹೇಳಿದರಂತೆ:- ಎಲ್ಲಾ ಸರಿಯೇ! ಅಕ್ಷೋಭ್ಯತೀರ್ಥರು ನಿಮ್ಮನ್ನು ಸೋಲಿಸಿ ದರು. ನಾನೂ ನಿರ್ಣಯವನ್ನು ಕೊಟ್ಟೆನು. ನಿಮಗೆ ಏನು ತೊಂದರೆ? ''ಗಜೋಪಿ ಮಿಥ್ಯಾ ಪಲಾಯನಮಪಿ ಮಿಥ್ಯಾ'' ಎಂದು ಹೇಳಿದರಂತೆ. ವಿದ್ಯಾರಣ್ಯರು ನಗುತ್ತಾ ಮನೆಗೆ ಹೋದರಂತೆ. ಇನ್ನೂ ತತ್ವಮಸಿ ವಾಕ್ಯಾರ್ಥವು ಫೈಸಲ್ ಆಗದಿದ್ದ ಸಂದರ್ಭದಲ್ಲಿ ನಾವು ಪುನಃ ಆರಂಭಿಸಬಹುದು. ಶ್ಯಾನುಭೋಗರು ಹೋದರೆ ದಫ್ತರವು ಹೋಗುವುದೇನು? ಶಾಸ್ತ್ರಿಗಳ ಸರಣಿಯಿಂದ ತೋರಿಬರುವ ಇನ್ನು ಕೆಲವು ಯುಕ್ತಿಗಳನ್ನು ಮುಂದೆ ಶಾಸ್ತ್ರಾರ್ಥ ವಿಚಾರ ಮಾಡುವವರ ಸೌಕರ್ಯಕ್ಕಾಗಿ ಸಂಗ್ರಹಿಸಿ ನಿರೂಪಿಸಿ ಬಿಡುವೆವು. ಮೆಜಾರಿಟಿ ಪಕ್ಷವು ಸ್ಮಾರ್ತಸಂಘಕ್ಕೆ ಸೇರಿದವರಾದುದರಿಂದ ಅದ್ವೈತವು ವೈದಿಕ ಮತವು. ದಿವಾನ್ ಶೇಷಾದ್ರಯ್ಯನ ವರು ಅದ್ವೈತಿಗಳಾದುದರಿಂದ ಅದ್ವೈತವು ದೊಡ್ಡದು. ವಿದ್ಯಾರಣ್ಯರು ದೊಡ್ಡಪದವೀಧರರಾದ್ದರಿಂದ ಅದ್ವೈತವು ಹಿಮಾಚಲದ ಮೇಲಿನ ಮಂಜಿನಂತೆ ಬೆಳ್ಳಗಿರುವ ವೈದಿಕ ಮತವು. ವೇದಾಧ್ಯಯನ ಮಾಡಿದ ಶುಭ್ರಸಾತ್ವಿಕಪುರುಷರು ಸ್ಮಾರ್ತರಲ್ಲಿ ಹೆಚ್ಚಾಗಿರುವುದ ರಿಂದ ಅದ್ವೈತವು ವೈದಿಕ ಮತವು. ಅದ್ವೈತ ಮತಪ್ರವರ್ತಕರ ಹೆಸರು ಶಂಕರನೆಂದಿರುವುದರಿಂದಲೇ ಅದ್ವೈತಮತವು ಮೋಕ್ಷ ಪ್ರದವು. ಮೂವತ್ತೆರಡು ವರ್ಷಗಳಲ್ಲಿ ರೋಗಾದಿಗಳಿಂದ ಉಪದ್ರವವಾಗಿದ್ದರೂ ಸಹ ಲಕ್ಷಾಂತರ ಗ್ರಂಥಗಳನ್ನು ಬರೆದಿರುವುದ ರಿಂದಲೇ ಶಂಕರಾಚಾರ್ಯರ ಮತವು ವೈದಿಕ ಮತವು.

ಭೂಮಿಯಲ್ಲಿ ಬಹುದೂರ ಹೂತುಹೋಗಿರುವ ಮೇರು ಪರ್ವತದಂತೆ ಜಪ್ಪಯ್ಯ ಎಂದು ಮುಕ್ಕರಿಸಿ ಅಳ್ಳಾಡಿಸಿದರೂ, ಅಲುಗಾಡದಿರುವ ಈ ವಾಕ್ಯಾರ್ಥಗಳ ಚಾಲನದಲ್ಲಿ ಹರತೀ ಆಚಾರ್ರು ಸಮರ್ಥರು. ಅಭಿನವ ಶಂಕರಾಲಯವೆಂದು ಹೆಸರಿರುವು ದರಿಂದಲೇ ಶಂಕರಮತವು ನವೀನವು; ಮುರುಕಲು ಹೆಂಚುಗಳಿಂದ ಪುರಾತನವಾಗಿ ಕಂಗೊಳಿಸುತ್ತಿರುವುದರಿಂದಲೇ ದ್ವೈತ ತತ್ವವು ಪುರಾತನವು. ಇಪ್ಪತ್ತು ಮೂವತ್ತು ಉಪಾವಾಸ ಮಾಡಿದುದರಿಂದ ಗಾಂಧಿಯ ಸಾಂಕರ್ಯಮತವೇ ಶಂಕರಮತಕ್ಕಿಂತ ಮೀರಿದ್ದು. ಹೂಣಾದಿಗಳು ಬಹು ಸಂಖ್ಯಾಕರಾಗಿದ್ದರಿಂದಲೇ ವೇದವು ಅಪ್ರಮಾಣವು, ಇತ್ಯಾದಿ ಪ್ರತಿಬಂದೀ ಮಾತುಗಳಿಂದ ಉತ್ತರ ಹೇಳ ಬಹುದು. ಕಾವೇರಿ ಮಡುವಿನ ಸಮೀಪದಲ್ಲಿ ಕನ್ನಂಬಾಡಿ ಕಟ್ಟೆಯ ಮೇಲೆ ಶಾಸ್ತ್ರಿಗಳ ಈ ವಾಕ್ಯಾರ್ಥಕ್ರಮವು ಬಹು ದರ್ಶನೀಯ ವಾಗಿರುವುದು. ''ಯಶ್ಚಮೂಢತಮೋ ಲೋಕೇ ಯಶ್ಚಬುದ್ಧೇಃ ಪರಂಗತಃ। ತಾವುಭೌಸುಖಮೇಧೇತೇ ಕ್ಲಿಶ್ಯತ್ಯಂತರಿತೋ ಜನಃ'' ಎಂಬ ನೀತಿಯು ನಿದರ್ಶನದಿಂದ ಸಿದ್ಧವಾಯಿತು. ಸಂಘದ್ವೇಷ ವೃದ್ಧಿಗೆ ಅಶಿಕ್ಷಿತವಾದ ಇಂಥಾ ಜನರು ಬಿತ್ತುವ ವಿಷಬೀಜ ಕ್ಕಿಂತ ಬೇರೇ ಸಾಮಗ್ರಿಯು ಉಂಟೇ? ವಸ್ತುತಃ ಅದ್ವೈತಿ ಮಹಾಜನಗಳು ಶ್ರೇಷ್ಠರಾದ, ಸಂಪನ್ನರಾದ ಉತ್ತಮ ಬ್ರಾಹ್ಮಣರು. ಆದರೆ ಅದ್ವೈತತತ್ವವು ಪತಿಯನ್ನು ಪರಿತ್ಯಾಗಮಾಡಿ ತುರುಷ್ಕಸಂಗದಿಂದ ದುಷ್ಟಳಾದ ಭ್ರಷ್ಟಹೆಂಗಸಿನಂತೆ, ವೇದಾದಿರೂಪ- ಮೂಲರಹಿತವಾಗಿ ಬೌದ್ಧತತ್ವವನ್ನು ಅನುಕರಿಸಿದ ಅಶ್ರೇಯಸ್ಕರವಾದ ತತ್ವವಾಗಿರುತ್ತದೆ. ಇದು ಹಾಗಲ್ಲವೆನ್ನುವುದಾದರೆ, ಅಜ್ಞೇಯ ನಿರ್ಗುಣಬ್ರಹ್ಮವಾದವನ್ನೂ ಮಾಯಾವಾದವನ್ನೂ ಪ್ರಕಟಮಾಡುವ ನಿರವಕಾಶವಾದ ಮುಖ್ಯಾರ್ಥವನ್ನುಳ್ಳ ಒಂದು ಶ್ರುತಿ, ಸ್ಮೃತಿ, ಗೀತಾವಚನವನ್ನು ಯಾರಾದರೂ ಅದ್ವೈ ತಿಶಿಖಾಮಣಿಗಳು ತೋರಿಸಲಿ. ಅಥವಾ ಬ್ರಹ್ಮ, ಜಗತ್ತು, ಮೋಕ್ಷ, ಈ ಮೂರೂ ವಿಷಯಗಳಲ್ಲಿ ವಿಚಾರಮಾಡಿದ ಮೇಲೆ ಬೌದ್ಧತತ್ವದ ಸಮಗ್ರ ಸಾದೃಶ್ಯವು ಬರುವುದಿಲ್ಲ ಎಂಬಲ್ಲಿ ಒಂದು ಆಧಾರವನ್ನು ತೋರಿಸಲಿ. ನಾವೂ ಸಹಸ್ರರೂಪಾಯಿಗಳ ಪಣವನ್ನು ಕೊಟ್ಟು ನಮ್ಮ ತಪ್ಪನ್ನು ಒಪ್ಪಿಕೊಳ್ಳುವೆವು. ''ವಚನೇ ಪ್ರವೃತ್ತಿಃ ವಚನೇ ನಿವೃತ್ತಿಃ'' ಎಂದು ವಾಙ್ಮಾತ್ರದಲ್ಲಿ ತತ್ವವನ್ನು ಪರ್ಯವಸಾನಗೊಳಿಸುವ ಧರ್ಮಹೇಡಿಗಳಾಗಲು ಇಚ್ಛಿಸುವವರು ಬೇರೆ. ತಿಳಿದ ತತ್ವವನ್ನು ಅನುಷ್ಠಾನ ಮಾಡುವ ಶೀಲಪುರುಷರಿಗೆ ಅದ್ವೈತತತ್ವದ ಹೇಯತೆಯನ್ನು ಸ್ಪಷ್ಟವಾಗಿ ತಿಳಿಸಿಕೊಡುವ ಮಹಾಕಾರ್ಯದಲ್ಲಿ

ಸ್ಮಾರ್ತಬ್ರಾಹ್ಮಣರು ಸೇರಿಕೊಳ್ಳುವುದರಿಂದ ಅವರ ವಿಚಾರಶಕ್ತಿಗೆ ಒಂದು ಭೂಷಣವಾಗಿರುತ್ತದೆ ಎಂದು ಹೇಳುವುದರಲ್ಲಿ ಸಂಶಯವೇನು?
(5) ಇಷ್ಟು ವಿಷಯಗಳ ಪರಾಮರ್ಶದಿಂದ ನಮ್ಮ ನಿರ್ಣಯವು ಇದು. ಯದ್ಯಪಿ ನಾಲ್ಕು ವೇದಗಳೂ ವೈಷ್ಣವರದ್ದೇ. ''ವೇದೈಶ್ಚಸರ್ವೈಃ ಅಹಮೇವವೇದ್ಯಃ'' ಎಂಬ ಶ್ರೀಕೃಷ್ಣನೂ, ಗುದ್ದುವುದರಲ್ಲಿ ಘಟಿಂಗನಾದ ಭೀಮನೂ ಸೇರಿ ಕಾಪಟ್ಯ ಸಹಸ್ರ ದಿಂದ ಪ್ರಶಸ್ತವಾದ ತಮ್ಮ ಈ ವೈದಿಕ ಆಸ್ತಿಯನ್ನು ಅವೈಷ್ಣವರಿಂದ ಕಿತ್ತುಬಿಟ್ಟಿಟ್ಟಿರುವರು. ಶತ್ರುಗಳಾದ ವೈಷ್ಣವರಿಂದ ಉಪಭುಕ್ತವಾದ ಆ ವೇದನಾರಿಯನ್ನು ಇನ್ನು ಮೇಲೆ ಪುನಃ ಅದ್ವೈತಿಚೂಡಾಮಣಿಗಳು ವಾಪಸು ಬಂದರೂ ಸೇರಿಸಿಕೊಳ್ಳತಕ್ಕವರಲ್ಲ. ಅದಕ್ಕೆ ವೃದ್ಧರಾದ ಅಯೋಧ್ಯೆಯ ಗಾರ್ದಭನಾಯಕರು (ಅಗಸರು) ರಾವಣಾಂತಃಪುರದಲ್ಲಿ ವಾಸಮಾಡಿದ ಜಾನಕಿಯನ್ನು ಪುನಃ ರಾಮನು ಕರೆದುಕೊಂಡು ಬಂದದ್ದಕ್ಕಾಗಿ ನಿಂದಿಸಿದರು. ಆದರೂ ವೇದದ ನಾಲ್ಕು ಮಾತುಗಳ ಮೇಲಿರುವ ಗಂಜಿಯ ನೊರೆಯನ್ನು ಮಾತ್ರ ಪರ್ವಕಾಲಗಳಲ್ಲಿ ಪಾನ ಮಾಡಬೇಕೆಂದು ಐಕ್ಯವಾದಿಗಳ ಇಚ್ಛೆಯು. (ಎಂದರೆ ನಾಲ್ಕೈದುವಾಕ್ಯಗಳಲ್ಲಿ ಸಮಯ ವಿಶೇಷದಲ್ಲಿ ಬೋಧ್ಯವಾಗುವ ಅಖಂಡಾರ್ಥವಾದ ಐಕ್ಯವನ್ನು ಪ್ರತಿಪಾದಿಸುತ್ತವೆಂದು ಹೇಳುವರು.) ವೈಷ್ಣವ ಪಾಚಕರು ದೇವರ ನೈವೇದ್ಯವೇ ಆಗಿಲ್ಲ. ಬ್ರಾಹ್ಮಣರೂ ಊಟಮಾಡಿಲ್ಲ. ನಾವು ಅಷ್ಟಕ್ಕೆಲ್ಲಾ ಅವಕಾಶ ಕೊಡುವವರಲ್ಲ. ಎಂದು ಭದ್ರಮಾಡುವದಾದರೆ ಹೋಗಲಿ! ಹೊರಟು ಹೋಗಲಿ! ಎಲ್ಲಾ ವೇದಾರ್ಥವೂ ದುಷ್ಟರಾದ ಹರತಿ ಆಚಾರ್ರಿಗೂ ಅವರ ಗುರುಪರಂಪರೆಗೂ ಸೇರಿ ಕೊಂಡು ಹೋಗಲಿ! ಎಂದು ಶಾಸ್ತ್ರಿಗಳು ಪರಿತ್ಯಾಗ ಮಾಡಿಯೇ ಬಿಡುತ್ತಾರೆ. ಅದಕ್ಕೆ ಅವರು ನಿರ್ವಿಶೇಷ ಬ್ರಹ್ಮನು ಮುಖ್ಯವೃತ್ತಿಯಿಂದಲೂ ಮತ್ತು ಲಕ್ಷಣಾವೃತ್ತಿಯಿಂದಲೂ ವೇದದಲ್ಲಿ ಪ್ರತಿಪಾದ್ಯನಾಗುವುದಿಲ್ಲವೆಂದು ಒಂದು ಉಪಾಯದಿಂದ ತೋರಿಸಿ ಬಿಟ್ಟರು. ಮಹಾಲಾಭ ನಾಶದಿಂದುಂಟಾಗುವ ಸಂಕಟವನ್ನು ಮರೆಯುವುದಕ್ಕಾಗಿ ಸ್ವರಪೂರ್ವವಾಗಿ ವೇದವನ್ನು ಮೇಲಕ್ಕೂ ಕೆಳಕ್ಕೂ ಎಳೆಯುವುದಕ್ಕೆ ಆರಂಭಿಸಿದರು. ಅಕ್ಕಿಯೆಲ್ಲಾ ನಿಮಗೇ ಇರಲಿ! ಹೊಟ್ಟಾದರೂ ನಮಗೆ ಇರಲಿ ಎಂದು ಅವರ ಅಪೇಕ್ಷೆ. ಈ ಸ್ಥಿತಿಯು ಪುರಾಣೋಕ್ತವಾದ ಪೂರ್ವವೃತ್ತಾಂತಕ್ಕೆ ಸ್ಮಾರಕವಾಗಿರುವುದು. ಸಮುದ್ರಮಥನಕಾಲದಲ್ಲಿಯೇ ದೇವದೈತ್ಯರಿಗೆ ಕಲಹವು ಪ್ರಾಪ್ತ ವಾಗಿ ತುಚ್ಛವಾದ ಅಹಿಪುಚ್ಛವನ್ನು ಶ್ರೋತ್ರಿಯೋತ್ತಮರಾದ ದಾನವಾಗ್ರಣಿಗಳು ಹಿಡಿಯುವುದಿಲ್ಲವೆಂದು ನಿಶ್ಚಯಿಸಿಬಿಟ್ಟರು. ಇದು ಅವರ ಮಾತು :- '' ಸ್ವಾಧ್ಯಾಯ ಶ್ರುತಸಂಪನ್ನಾಃ ಪ್ರಖ್ಯಾತಾಜನ್ಮಕರ್ಮಭಿಃ। ನ ಗೃಹ್ಣೀಮೋ ವಯಂ ಪುಚ್ಛಮಹೇರಂಗಮ- ಮಂಗಲಂ'' ॥ ದೈತ್ಯರೆಲ್ಲರೂ ವೈದಿಕಶಿಖಾಮಣಿಗಳು, ವೇದರತ್ನರು, ವೇದಗರ್ಭರು, ವೇದನಿಧಿಗಳು, ಸಮುದ್ರದ ನೊರೆಯಂತೆ ಬೆಳ್ಳಗೆ ವೇದವು ಅವರ ಬಾಯಿಂದ ಹೊರಗೆ ಹೊರಡುವುದು. ಅಷ್ಟಿಲ್ಲದೇ ಮಹಾದೇವರು ರಾವಣ ಬಾಣಾದಿಗಳ ಮನೆಯ ಬಾಗಿಲನ್ನು ಕಾಯುವನೇ?

ಕ್ರೂರರಾದ ಹರತೀ ಆಚಾರ್ರು ಅವೈಷ್ಣವರಿಗೆ ವೇದಾಧ್ಯಯನದ ಫಲವೂ ಬರುವುದಿಲ್ಲವೆಂದು ಹೇಳುತ್ತಾರೆ. '' ಚತುರ್ವೇದ- ವಿದೋ ವಿಪ್ರಃ ವಾಸುದೇವಂ ನ ವಿಂದತಿ। ವೇದಭಾರಧರಾಕ್ರಾಂತಃ ಸವೈಬ್ರಾಹ್ಮಣಗಾರ್ದಭಃ॥'' ಎಂಬ ಉಪನಿಷತ್ತನ್ನು ಪ್ರಮಾಣ ವಚನವನ್ನಾಗಿ ಉದಾಹರಿಸಿ ವೇದಾರ್ಥವನ್ನು ತಿಳಿಯದಿರುವುದರಿಂದ ಸ್ಮಾರ್ತರೆಲ್ಲರೂ ಬ್ರಾಹ್ಮಣಗಾರ್ದಭರೆಂದು ನಿಂದಿಸಿಬಿಟ್ಟರು. ಆದರೆ ಹರತಿ ಆಚಾರ್ರು ಬರೆದ ಜಡ್ಜಮೆಂಟ್ ನಲ್ಲಿ ಒಂದು ತಪ್ಪು ಇತ್ತು. ವೇದಾರ್ಥಜ್ಞಾನಪೂರ್ವಕವಾದ ಅಧ್ಯಯನವೇ ಫಲಕಾರಿ ಯು; ಅದು ನಿಮಗಿಲ್ಲ; ಆದುದರಿಂದ ನೀವೆಲ್ಲರೂ ಬ್ರಾಹ್ಮಣ ಕತ್ತೆಗಳು ಎಂದು ಹೇಳಿದ್ದರು. ಶಾಸ್ತ್ರಿಗಳು ಮೊದಲೇ ಹರತಿ ಆಚಾರ್ರ ಸಂಗಡ ಸ್ಮಾರ್ತಪಕ್ಷವನ್ನು ಹಾಳು ಮಾಡಬೇಕೆಂದು ''ಪ್ಲಾಟ್'' ಮಾಡಿಕೊಂಡಿದ್ದರಷ್ಟೇ! ಸಾಂಬಶಾಸ್ತ್ರಿಗಳು ಹೀಗೆ ಹೇಳಿದರು ''ವೇದಾರ್ಥಪರ್ಯವಸಾಯಿಯಾದ ಅಧ್ಯಯನವೇ ಫಲಕಾರಿಯು[66]; ''ವೇದೈಶ್ಚಸರ್ವೈರಹಮೇವವೇದ್ಯಃ'' ಎಂದು ಕೃಷ್ಣನೇ ವೇದಾರ್ಥನೆಂದು ನೀವು ಚಚ್ಚಿಕೊಳ್ಳುವುದಾದರೆ, ಅದು ನಮಗಿಲ್ಲ ನಾವು ಬ್ರಾಹ್ಮಣಕತ್ತೆಗಳೇ! ಆದರೂ ನಿಮ್ಮ ಮೂಟೆಯನ್ನು ನೆಗೆದುಬಿದ್ದರೂ ನಾವು ಹೊರುವುದಿಲ್ಲ'' ಎಂದು ಅರ್ಥಬರುವಂತೆ ಪ್ರತಿಪಾದಿಸಿಬಿಟ್ಟರು. ಮಧ್ಯೆ ಮಾತ್ರ ಸಂಕೇತಾನುಸಾರವಾಗಿ ಹರತಿ ಆಚಾರ್ರನ್ನು ಬೈದರು. ಯದ್ಯಪಿ ಮಾಡುವುದೇನು? ಪ್ರಮಾಣವೇನೋ ವೇದಾರ್ಥನಾದ ವಿಷ್ಣುವನ್ನು ತಿಳಿಯದವನಿಗೆ ಬಲಮುರಿಶಂಖವನ್ನು ದುಗ್ಗಾಣಿಗೆ ಕೊಟ್ಟಂತೆ ಆ ವೇದಾಧ್ಯಯನ ಫಲವು ಅಲ್ಪವು, ಮತ್ತು ವಿರುದ್ಧಾರ್ಥವಾದ ಐಕ್ಯಾದಿಗಳನ್ನು ತಿಳಿಯುವವನಿಗೆ ತೊನ್ನನ ವೇದಾಧ್ಯಯನದಂತೆ ವೇದಾಧ್ಯಯನ ಫಲವು ವಿರುದ್ಧವು ಎಂದು ಹೇಳುವುದು. ''ಯಸ್ತನ್ನವೇದಕಿಮೃಚಾಕರಿಷ್ಯತಿ'' ಎಂದು ಶೃತಿಯೇ ಹೇಳುವುದು. ''ಹರಿಃ ಓಂ'' ಎಂಬ ಅಧ್ಯಯನೋಪಕ್ರಮಮಂತ್ರವೇ ಶ್ರೀ ಹರಿಯೇ ವೇದಾರ್ಥನಾದ ಪರಬ್ರಹ್ಮನು ಮತ್ತು ಅಧ್ಯಯನ ಫಲದಾತೃವು ಮುಂತಾದ ಸಕಲ ಪ್ರಮೇಯಗಳನ್ನೂ ಸೂಚಿಸುವುದು. ಅನ್ಯಥಾ ''ಹರಃ

---

[66] ಶಂಕರಾಚಾರ್ಯರೂ ಸಹ ವೇದಾಂತಜ್ಞಾನದಲ್ಲಿ ಪರ್ಯವಸಿತವಾಗದ ವೇದಾಧ್ಯಯನಾದಿ ಸರ್ವವಿದ್ಯೆಗಳೂ ನಿಷ್ಫಲವೆಂದು ಛಾಂದೋಗ್ಯಭಾಷ್ಯದಲ್ಲಿ ಬರೆದಿರುತ್ತಾರೆ. ವೇದಾರ್ಥವು ನಿರ್ಗುಣಬ್ರಹ್ಮನೋ ವಿಷ್ಣುವೋ ಎಂಬಲ್ಲಿ ಮಾತ್ರ ವಿವಾದವು. ವಾಸುದೇವನೇ ವೇದಾರ್ಥವೆಂದು ''ಚತುರ್ವೇದವಿದೋ ವಿಪ್ರಃ'' ಎಂಬ ವೇದವಾಕ್ಯದಿಂದಲೇ ತಿಳಿದು ಬರುವುದು. ಶಾಸ್ತ್ರಿಗಳು ಪುಟ.9 ರಲ್ಲಿ ಅಷ್ಟು ಗಲಾಟೆ ಮಾಡುವುದಕ್ಕೆ ಕಾರಣವಿರಲಿಲ್ಲ.

ಓಂ'' ಎಂದೋ ''ಬ್ರಹ್ಮ ಓಂ'' ಎಂದೋ ಇರುತ್ತಿತ್ತು. ಆದರೂ ಹರತಿ ಆಚಾರ್ರ ಆಗ್ರಹವು ಕೇವಲ ವೈಷ್ಣವರಿಗೆ ಉಚಿತ ವಾದುದೇ ಹೊರತು, ಸಂಭಾವಿತರಾದ ಅವೈಷ್ಣವರಿಂದ ಅಂಗೀಕೃತವಾಗಲಾರದು.

ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅವೈಷ್ಣವಾಚಾರ ನಿಷ್ಫಲತ್ವ ಪ್ರದರ್ಶನವೆಂಬ
ದ್ವಾದಶೋಲ್ಲಾಸವು ಮುಗಿದುದು.

## XIII ಕ್ಷುದ್ರಗ್ರಂಥಗಳಿಂದುಂಟಾದ ಅದ್ವೈತಿಗಳ ಮಾನಭಂಗ ಪ್ರದರ್ಶನವು.

ದ್ವೈತಸಿದ್ಧಾಂತ ವಿಚಾರ ಭಂಜನ, ಮತ್ತು ಸಾಂಬಭಂಜನ ಚಪೇಟಿಕಾ ಇವೇ ಮುಂತಾದ ಗ್ರಂಥಗಳಿಂದ ಅದ್ವೈತ ಪಂಡಿತಾಭಿಮಾನಿಗಳಿಗೆ ಆದಷ್ಟು ಮಾನಭಂಗವು ಕೋರ್ಟಿನಲ್ಲಿ ಮಾನನಷ್ಟದ ದಾವೆಯಿಂದ ಆಗಲಾರದು. ಕುರೂಪಿಯಾದ ಅಷ್ಟವಕ್ರನಾದ ಪುತ್ರನು ಉತ್ಪನ್ನನಾದರೆ ಹೆತ್ತತಾಯಿಗೆ ಅವಮಾನ; ದುರ್ಯೋಧನನು ಉತ್ಪನ್ನನಾದರೆ ಕುರುಕುಲಕ್ಕೆ ಅವಮಾನ; ವ್ಯಾಪಾರಮಾಡದ ವಿಮೂಢನು ಹುಟ್ಟಿದರೆ ವ್ಯಾಪಾರಿವೈಶ್ಯ ಸಂಘಕ್ಕೆ ಅವಮಾನ; ಪುತ್ರನು ವ್ಯಭಿಚಾರ ಪರನಾಗಿ ತಲೆಯನ್ನು ಬೈತಲೆಯಂತೆ ಜೋಡಿಸಿಕೊಂಡು ಸ್ವೇಚ್ಛಾಚಾರಿಯಾದರೆ ವೈದಿಕ ತಂದೆಗೆ ಮರಣವಾದಷ್ಟು ದುಃಖವು. ದ್ವೈತಿಗಳನ್ನು ಅವೈದಿಕ ರೆಂದು ಬೈದು ತಪ್ಪುಬರೆದುದಕ್ಕಾಗಿ ಮತ್ತು ತಪ್ಪು ಪ್ರಕಟಿಸಿದುದಕ್ಕಾಗಿ ಅದ್ವೈ ತಿದೀಕ್ಷಿತರು ಒಂದು ಮಹಾಸಭೆಯಲ್ಲಿ ಕ್ಷಮಾಪಣೆಯನ್ನು ಬೇಡಿಕೊಂಡರು. ಅದೂ ಅಷ್ಟು ಅವಮಾನಕರವಲ್ಲ. ಅಲ್ಲಿ ಪ್ರತಿಜ್ಞಾಭಂಗವಾದುದಕ್ಕೋಸ್ಕರ ಕ್ಷಮಾಪಣೆಯ ಪ್ರಾರ್ಥನೆಯಾಯಿತೇ ಹೊರತು ಅದ್ವೈತವೇ ವೈದಿಕಮತವು ಎಂದು ನಾವು ಬರೆದುದಕ್ಕೋಸ್ಕರ ಎಂದು ನಾವು ತಿಳಿದಿರುವುದಿಲ್ಲ. ''ಕಸ್ಯಾಪ್ಯನುದ್ವೇಗಕರಂ ವಾಕ್ಯಂ'' ಎಮದರೆ ವಿಚಾರಮಾಡದ ಮಂದನಿಗೂ ಮನೋವ್ಯಥೆಯನ್ನು ಮಾಡುವುದಿಲ್ಲ ಎಂದು ಪತ್ರಿಕಾ ಅಧಿಕಾರಿಗಳು ಪ್ರತಿಜ್ಞೆ ಮಾಡಿದ್ದರು. ಅಂದ ಮೇಲೆ ಯಾವ ವೇದಾಂತವಿಚಾರವನ್ನು ಈ ಪತ್ರಿಕೆಯಲ್ಲಿ ಪ್ರಕಟಿಸುವುದಿಲ್ಲ ಎಂದು ಹೇಳಿದಂತಾಯಿತು. ಇಂಥಾ ಪ್ರತಿಜ್ಞೆಯನ್ನು ಮೀರಿ ವೇದಾಂತ ವಿಷಯವಿಚಾರವನ್ನು ಮಾಡಿದುದಕ್ಕೋಸ್ಕರ ದ್ವೈತಿಗಳಿಗೆ ಸಾಷ್ಟಾಂಗ ಕ್ಷಮಾಪಣೆಯನ್ನು ಅದ್ವೈತಿಗಳು ಬೇಡಿಕೊಂಡರು. ಇದರಿಂದ ಬರೆದ ವಿಷಯವು ತಪ್ಪೋಸರಿಯೋ ಎಂದು ಸಿದ್ಧಿಸಲಿಲ್ಲ. ಮುಯ್ಯಿಗೆ ಮುಯ್ಯಿ. ಪಂಡಿತರತ್ನರು ಹಿಂದೆ ಅದ್ವೈತಿಗಳಿಗೆ ವಿರೋಧವಾಗಿ ಬರೆದುದಕ್ಕೋಸ್ಕರ ಟೊಂಕಕ್ಕೆ ಪಂಚೆಸುತ್ತಿ, ಅದ್ವೈತಿಮಹಾಜನಗಳಿಗೆ ನಮಸ್ಕರಿಸಿದರು. ಈಗ ಅದ್ವೈತಿಗಳು ದ್ವೈತಿಗಳಿಗೆ ವಿರೋಧವಾಗಿ ಬರೆದುದಕ್ಕೋಸ್ಕರ ಕ್ಷಮಾಪ್ರಾರ್ಥನೆ ಮಾಡಿಕೊಂಡು ಕೋಪಶಾಂತಿಯನ್ನು ಮಾಡಿದರು. ಇನ್ನೆಷ್ಟು ವರ್ಷಗಳ ಮೇಲೆ ಸಂಘಮನಸ್ತಾಪಗಳನ್ನು ಉಂಟುಮಾಡದ ತತ್ವಯುದ್ಧಗಳು ಉತ್ಪನ್ನವಾಗುವವೋ ದೇವರೊಬ್ಬನು ಬಲ್ಲನು.[77] ಏವಂಚ ವಿಚಾರಪರರಿಗೆ ಹೇಗಾದರೂ ಆಗಲಿ. ಕೆಲವರು ಅದ್ವೈತಾಭಿಮಾನಿಗಳಿಗೆ ಸಂಸ್ಕೃತ ಕಾಲೇಜು ಪತ್ರಿಕಾಸಂಪಾದಕರೂ ಲೇಖಕರೂ ಮಾಡಿಕೊಂಡ ಈ ಪ್ರಾರ್ಥನೆಯು ಮರಣತುಲ್ಯವಾದುದು. ಆದರೆ ವಿಚಾರಶೀಲರಾದ ಅದ್ವೈತಿ ಪಂಡಿತರಿಗೂ ಕೂಡ ''ಸಾಂಬಭಂಜನ ಚಪೇಟಿಕಾ'' ಗ್ರಂಥಗಳು ಹೆಚ್ಚು ಅವಮಾನಕರವು.

ಪರಸ್ಪರ ವಿರುದ್ಧವಾದ ಅನಂತವಿಷಯಗಳಿಂದ ಪೂರ್ಣವಾದ ಈ ಸಣ್ಣ ಗ್ರಂಥವು ಅದ್ವೈತತತ್ವದ ದೋಷವನ್ನು ತೊಳೆದ ಕನ್ನಡಿಯು ಮುಖವನ್ನು ತೋರಿಸುವಂತೆ ಸ್ವಚ್ಛವಾಗಿ ತೋರಿಸುವುದು. ಒಂದೆರಡು ದೃಷ್ಟಾಂತಗಳನ್ನು ಕೊಡುವೆವು.

(1) ''ಬ್ರಹ್ಮವು ಅಜ್ಞಾನಾವೃತವಾಗಿದೆ ಎಂಬ ಇವರ ನುಡಿಯು ಅವೈದಿಕೋಕ್ತಿಯೇ ಸರಿ. ಜೀವಾಶ್ರಿತವಾದ ಅಜ್ಞಾನಕ್ಕೆ ಬ್ರಹ್ಮನು ವಿಷಯವೇ ಹೊರತು ಬ್ರಹ್ಮನಲ್ಲಿ ಅಜ್ಞಾನವಿಲ್ಲ''. ಇಷ್ಟು ಶಾಸ್ತ್ರಿಗಳ ಮಾತು. ಶಾಸ್ತ್ರಿಗಳು ಇಷ್ಟನ್ನು ಹೇಳಿ, ನಿರ್ಗುಣನಿರಾಕಾರ ಬ್ರಹ್ಮವೇ ''ನಾನು'' ಎಂಬ ಜೀವನು ಎಂಬ ವಿಷಯದಲ್ಲಿ ತೇಜೋಬಿಂದು, ನಾದ ಬಿಂದು ಮೊದಲಾದ ಶ್ರುತಿಗಳು ''ಬ್ರಹ್ಮೈವಾಹಂ ನಿರ್ಜೀವೋಹಂ'' ಎಂದು

---

[77] ಪದ್ಮಪುರಾಣಸ್ಥ ಶ್ಲೋಕವನ್ನು ಉದಾಹರಿಸಿದ ಅಪರಾಧಕ್ಕೇ ಕ್ಷಮಾಪಣೆಯನ್ನು ಬೇಡಿಸಿಕೊಂಡುದು, ಪುನಃ ತಮ್ಮ ಮತವೇ ವೈದಿಕವೆಂದು ''ಕಲ್ಪಿತಮನು'' ಕೃತಮಾನವ ಪುರಾಣ, ತಾಮಸ ಲಿಂಗಪುರಾಣ, ಧರ್ಮಬಾಹ್ಯರ ಕೆಲವು ನೀತಿಗಳಿಂದ ವಿಚಾರದಿಂದ ಒಂದು ಶ್ರುತಿಯನ್ನೂ ಉದಾಹರಿಸದೇ ಅದೇ ಪತ್ರಿಕೆಯಲ್ಲಿ ಬರೆದುದು; ಇವೆರಡು ಕೆಲಸಗಳು ಅದ್ವೈತಿ ವೈದಿಕ ಸಭೆಯಲ್ಲಿ ಮನೋಧಾರಾಳವು ಬಂದಿಲ್ಲವೆಂದು ಸ್ವಚ್ಛ ನಿದರ್ಶನವಾಗಿರುತ್ತದೆ. ಈ ಸರಣಿಯಲ್ಲಿಯೇ ಅಭಿಪ್ರಾಯವೃದ್ಧಿಯು ನಡೆಯುವು ದಾದರೆ ಒಂದು ಮತವೆಂದರೆ ಪತ್ನಿಯಂತೆ ಅಥವಾ ತಾಯಿಯಂತೆ ಸ್ವೀಕೃತವಾದ ಒಂದು ಪದಾರ್ಥವು ಎಂದು ಏರ್ಪಡುವುದು. ಅದರ ದೋಷವನ್ನು ಮತ್ತೆ ಯಾರೂ ತೋರಿಸಕೂಡದು; ಅವರವರ ಕುಟುಂಬ ನಿಂದೆಯಿಂದ ಅವರಿಗೆ ಸಂಕಟವಾಗುತ್ತದೆ. ಹೀಗೆಯೇ ಮತದಲ್ಲಿರುವ ಆತ್ಮಾಶ್ರಯತ್ವಾದಿ ದೋಷಗಳನ್ನು ತೋರಿಸಿದರೂ ನಮ್ಮ ಸಮಾಜಕ್ಕೆ ತೊಂದರೆಯಾಗುತ್ತದೆ. ಪರಿಣಾಮ ವೇನಾದರೂ ಚಿಂತಿಲ್ಲ. ಅಪ್ಪಹಾಕಿದ ಆಲದ ಮರವು. ಅದರಲ್ಲಿ ನೇಣುಹಾಕಿಕೊಳ್ಳುವುದೂ ಲೇಸು ಎಂದು ಪ್ರಾಪ್ತವಾಯಿತು.

ಬರೆದಿರುತ್ತವೆ ಎಂದು ಹೇಳಿರುತ್ತಾರೆ. ಮಿತ್ರರನ್ನು ಮಡುವಿನಲ್ಲಿ ಕೆಡುವುದಕ್ಕೆ ಇನ್ನು ಬೇರೆ ಉಪಾಯವು ಬೇಕಿಲ್ಲ. ಹರತಿ ಆಚಾರ್ರು ಆರಂಭಿಸಿದ ಕಾರ್ಯವನ್ನು ಶಾಸ್ತ್ರಿಗಳು ಪೂರ್ಣಮಾಡಿಬಿಟ್ಟರು. ನಿರ್ಗುಣಬ್ರಹ್ಮಾಶ್ರಿತಾಜ್ಞಾನ ಪಕ್ಷವನ್ನು ಒಪ್ಪುವವರು ಅವೈದಿಕರು ಎಂದು ತಮ್ಮ ಸ್ವಹಸ್ತದಿಂದ ಬರೆದುಬಿಟ್ಟರು. ಮುಂದಿನ ಪಂಕ್ತಿಯಲ್ಲಿಯೇ ಅಂಥಾ ನಿರ್ಗುಣ ನಿರಾಕಾರ ಬ್ರಹ್ಮನೇ ಜೀವನು ಎಂದು ಹೇಳಿ ಪ್ರಮಾಣವನ್ನೇ ಹೇಳಿಬಿಟ್ಟರು. ಬ್ರಹ್ಮಾಶ್ರಿತಾಜ್ಞಾನವಾದವು ಅವೈದಿಕವು ಎಂದು ಶಾಸ್ತ್ರಿಗಳ ಮಾತಿ ನಿಂದಲೇ ಸಿದ್ಧವಾಯಿತು. ಶಾಸ್ತ್ರಿಗಳು ಅದ್ವೈತಮತದ ಅಜ್ಞಾನವಾದವು ಅವೈದಿಕವು ಎಂದು ಸ್ವಹಸ್ತಾಕ್ಷರಗಳಿಂದ ರಚಿಸಿದಂತಾಯಿತು.

(2) ಶಾಸ್ತ್ರಿಗಳು ಇನ್ನೂ ಒಂದು ಕೆಲಸವನ್ನು ಮಾಡಿದರು. ''ಬ್ರಹ್ಮೈವಾಹಂ ನಿರ್ಜೀವೋಹಂ'' ಇತ್ಯಾದಿ ತೇಜೋ ಬಿಂದು ನಾದಬಿಂದೂಪನಿಷತ್ತುಗಳು ವಚನಗಳು ನಮಗೆ ಸಹಾಯವೆಂದು ಬರೆದರು. ಸಪಾದಲಕ್ಷಗ್ರಂಥವನ್ನು ಬರೆದ ಭಗವತ್ಪಾದರು ಜೀವಬ್ರಹ್ಮರ ಅಭೇದಾರ್ಥವಾಗಿ ಉದಾಹರಿಸಿದ ವಚನವನ್ನೆಲ್ಲಾ ಬಿಟ್ಟು ಭಾಷ್ಯರಹಿತವಾದ ಸಂದಿಗ್ಧ ಉಪನಿಷತ್ತುಗಳನ್ನು ಮಹಾ ವಾಗ್ಯುದ್ಧಸಮಯದಲ್ಲಿ ಉದಾಹರಿಸಿ ಅವುಗಳಿಗೆ ದುರರ್ಥವನ್ನು ಕಲ್ಪಿಸಿ ಮೆರೆಯುವುದಕ್ಕೆ ಆರಂಭಿಸಿದರೆ, ಇನ್ನು ಮೇಲೆ ಅಲ್ಲಾ ಉಪನಿಷತ್ತು, ಕುರಿ ಉಪನಿಷತ್ತು, ತೋಳನ ಉಪನಿಷತ್ತು, ಜಾಬಾಲ ಉಪನಿಷತ್ತು, ಗೋಪೀಚಂದನ ಉಪನಿಷತ್ತು, ರುದ್ರಾಕ್ಷಿ ಉಪನಿಷತ್ತು, ಸುಣ್ಣದ ಉಪನಿಷತ್ತು ಇಂಥಾ ಉಪನಿಷತ್ತುಸಮುದಾಯವನ್ನು ಶಾಸ್ತ್ರಿಗಳೂ ಹರತೀ ಆಚಾರ್ರೂ ಉದಾಹರಿಸುತ್ತಾ ಊರನ್ನು ಮಂಕುಕೆಡುವುದು ಸತ್ಯವು. ಆತ್ಮಹತ್ಯಕ್ಕೆ ಇದಕ್ಕಿಂತ ಬೇರೆ ದೃಷ್ಟಾಂತವು ಬೇಕೇ? ಹೇಗೆಂದರೆ ''ನಿರ್ಜೀವೋಹಂ'' ಎಂದು ಸಾಂಬಶಾಸ್ತ್ರಿಗಳು ಉದಾಹರಿಸಿರುವ ಶ್ರುತಿಯ ಅನುಪೂರ್ವಿಯು. ಶಾಸ್ತ್ರಿಗಳು ತಮ್ಮ ಮತದ ರೀತ್ಯಾ ಶ್ರುತಿಗೆ ಏನು ಅರ್ಥಮಾಡಿದರೆ ತಾನೇ ಬದುಕಿಕೊಳ್ಳುವರು?

(ಅ) ನಿರ್ಜೀವೋಹಂ = ನನ್ನ ದೇಹವು ಜೀವರಹಿತವು ಎಂದು ಅರ್ಥವಾಗುವುದು.

ಹಾಗಾದರೆ, ನಾನು ಸತ್ತ ಹೆಣವು ಎಂದು ಅರ್ಥವಾಯಿತು= ಬರೀ ಜಡದೇಹವು. ''ನಾನು'' ಎಂಬುದು ಜೀವವಲ್ಲ ಎಂದು ಹೇಳಿದಹಾಗಾಯಿತು.

(ಆ) ನಿರ್ಜೀವೋಹಂ= ನಾನು ಜೀವರಹಿತನೂ ಎಂದೂ ಅರ್ಥವಾಗುವುದು= ಜೀವನು ಜೀವರಹಿತನು ಎಂದಾಯಿತು. ಹಾಗೆಂದರೆ ಜೀವನು ಹೆಣವು ಎಂದು ಅರ್ಥವಾಗುವುದು.

(ಇ) ನಿರ್ಜೀವೋಹಂ ಎಂದು ಈ ರೀತಿ ಹೇಳಿದಮೇಲೆ ''ಬ್ರಹ್ಮೈವಾಹಂ'' ಎಂಬ ಶ್ರುತಿಯ ಪೂರ್ವಭಾಗಕ್ಕೆ ಅದ್ವೈತಮತದ ರೀತ್ಯಾ ಏನು ಅರ್ಥಮಾಡಿದರೆ ತಾನೇ ಅವಿರುದ್ಧವಾಗುವುದು? ನಾನು ಬ್ರಹ್ಮನು; ನಾನು ನಿರ್ಜೀವನು ಎಂಬ ವಾಕ್ಯದ್ವಯಗಳು ನಾನು ಪೂರ್ಣನು; ನಾನು ಹೆಣವು ಎಂಬ ಅಭಿಪ್ರಾಯಗಳ ಸಮಾಹಾರದಂತೆ ಯಾವ ವಿಧವಾದ ಯೋಜನೆಗೂ ಅನುಕೂಲಿಸಲಾರವು.

ದ್ವೈತಮತದಲ್ಲಾದರೋ ಅರ್ಥವು ಸುಲಲಿತವಾಗಿರುವುದು. ಹೇಗೆಂದರೆ;

(1) ಬ್ರಹ್ಮೈವಾಹಂ= ಎಂದರೆ ಅಹಂ= ನನ್ನ ಅಂತರ್ಯಾಮಿಯು, ಬ್ರಹ್ಮೈವ= ಪರಿಪೂರ್ಣ ಬ್ರಹ್ಮನು; ಅಹಂ= ನನ್ನ ಅಂತರ್ಯಾಮಿಯು ನಿರ್ಜೀವಃ= ಮತ್ತೊಬ್ಬ ಅಂತರ್ಯಾಮಿ ಜೀವನಿಂದ ರಹಿತನು. ಪ್ರತಿಯೊಬ್ಬ ಜೀವನೂ ಜೀವನಾಮಕ ಪರಮಾತ್ಮನಿಂದ ನಿಯಮ್ಯನು. ಪರಮಾತ್ಮನಿಗೆ ಜೀವಾಂತರ ನಿಯಮ್ಯತ್ವವು ಇಲ್ಲ ಎಂದು ಅರ್ಥವು. ಅದ್ವೈತಮತದಲ್ಲಿ ಈ ಅರ್ಥವು ಕೂಡುವುದಿಲ್ಲ. ಕಿಂಚ ಈ ಅರ್ಥಮಾಡುವುದರಲ್ಲಿ ''ಅಧ್ಯಾತ್ಮಸಂಬಂಧಭೂಮಾಹ್ಯಸ್ಮಿನ್'' ಮುಂತಾದ ಸೂತ್ರಗಳು ಆಧಾರವಾಗಿರುತ್ತವೆ. (11) ಮತ್ತೊಂದು ವಿಷಯವನ್ನು ನಿರೂಪಿಸುವೆವು. ಪಟಪಟನೆ ಗದೆಯಿಂದ ತಲೆಯಮೇಲೆ ಹೊಡೆದಂತೆ, ಪುನಃ ಪುನಃ ಅದ್ವೈತಿಗಳು ಯಾವ ಶ್ರುತಿಗೂ ಮುಖ್ಯಾರ್ಥವನ್ನು ಒಪ್ಪಿಕೊಂಡಿಲ್ಲವೆಂದು ನಾವು ನಿರೂಪಿಸಿಯೇ ಇರುತ್ತೇವೆ. ದ್ವೈತಸಿದ್ಧಾಂತ ವಿಚಾರವೆಂಬ ಉತ್ಕೃಷ್ಟಪ್ರಕರಣ ಗ್ರಂಥವೂ ಈ ವಿಚಾರವನ್ನು ಸ್ಫುಟವಾಗಿ ತೋರಿಸಿರುತ್ತದೆ. ''ಬ್ರಹ್ಮೈವಾಹಂ'' ಇತ್ಯಾದಿ ಶ್ರುತಿಗಳು ಅಖಂಡಾರ್ಥ ಪರವೆಂದು ಅದ್ವೈತಮತವು. ಈ ದೂಷಣೆಯು ತತ್ವಮಸ್ಯಾದಿ ವಾಕ್ಯಗಳಿಗೆ ಲಗ್ನವಾಗುವುದೆಂದು ಭ್ರಮಿಸಿ ''ಬ್ರಹ್ಮೈವಾಹಂ ನಿರ್ಜೀವೋಹಂ'' ಎಂಬ ವಾಕ್ಯವು ಇಂಥಾ ತೊಂದರೆ ರಹಿತವಾಗಿರುವುದೆಂದು ತಪ್ಪು ತಿಳಿದುಕೊಂಡು ಶಾಸ್ತ್ರಿಗಳು ಉದಾಹರಿಸಿರಬಹುದು. ಇದು ಅವರ ಮನಸ್ಸಿನ ಮಂಡಿಗೆಯು; ಆಕಾಶದ ಉಪ್ಪರಿಗೆಯು; ತಿರುಕನ ಸೌಭಾಗ್ಯವು; ಮಂಕನ ಆಶಾಪಂಕ್ತಿಯು. ಶಾಸ್ತ್ರಿಗಳ ಇಷ್ಟಾಪೂರ್ತಿಯು ಯಾವ ಶ್ರುತಿವಾಕ್ಯದಿಂದಲೂ ಆಗಲಾರದು. ''ಬ್ರಹ್ಮೈವಾಹಂ ನಿರ್ಜೀವೋಹಂ'' ಎಂಬ ಶ್ರುತಿಗೆ ಸಮ್ಮತವಾದ ಅದ್ವೈತಾರ್ಥವೇನೆಂದರೆ, ''ಬ್ರಹ್ಮ'' ಎಂದು ಇಷ್ಟು ಮಾತ್ರವು. ಇದು ಶಾಸ್ತ್ರಿಗಳಿಗೆ ಬೇಕಾಗುವ ಜೀವಬ್ರಹ್ಮೈಕ್ಯದಲ್ಲಿ ಪ್ರಮಾಣವಾಗಲಾರದು. ನೀರಿನಲ್ಲಿ ಮುಳುಗಿ ಹೋಗುವವನು ತೃಣವನ್ನು ಹಿಡಿದುಕೊಳ್ಳುವಂತೆ ತತ್ವಮಸಿ, ಅಹಂ ಬ್ರಹ್ಮಾಸ್ಮಿ ಮುಂತಾದ ವಾಕ್ಯಗಳೆಲ್ಲಾ ದ್ವೈತಿಗಳಿಗೆ ವಶನಾಗಿ ಕೈಬಿಟ್ಟುಹೋದನಂತರ ಶಾಸ್ತ್ರಿಗಳು ''ಬ್ರಹ್ಮೈವಾಹಂ ನಿರ್ಜೀವೋಹಂ'' ಎಂಬ ಅದೇ ಗುಂಪಿಗೆ ಸೇರಿದ ಮತ್ತೊಂದು ವಾಕ್ಯವನ್ನು ಹಿಡಿದುಕೊಂಡು ಸ್ವಾರ್ಥವನ್ನು ಸಾಧಿಸುವನೆಂದು ಪ್ರಯತ್ನ ಮಾಡಿದುದು ಅವರ ಕಾವ್ಯಕೌಶಲ್ಯಕ್ಕೆ ನಿದರ್ಶನವಾಗುವುದು; ಅವರ ಬಾಲ್ಯವನ್ನು ಪ್ರಕಟಿಸುವುದು.

(3) ಬ್ರಹ್ಮಾಶ್ರಿತಾಜ್ಞಾನವಾದವು ಅವೈದಿಕವೆಂದು ಶಾಸ್ತ್ರಿಗಳು ಬರೆದಿರುತ್ತಾರಷ್ಟೆ. ಇದು ಶಾಸ್ತ್ರಿಗಳ ಹಿರಿಯರ ಮಾತು.
''ಆಶ್ರಯತ್ವವಿಷಯತ್ವಭಾಗಿನೀ ನಿರ್ವಿಶೇಷ ಚಿತಿರೇವ ಕೇವಲಾ। ಪೂರ್ವಸಿದ್ಧತಮಸೋಹಿಪಶ್ಚಿಮಃ ನಾಶ್ರಯೋಭವತಿನಾಪಿ ಗೋಚರಂ ॥'' ನಿರ್ವಿಶೇಷ ಬ್ರಹ್ಮನೇ ಅವಿದ್ಯೆಗೆ ಆಶ್ರಯನೂ ವಿಷಯನೂ ಆಗಿರುವನು. ಎಂದು ಅರ್ಥವು. ಇದು ಅದ್ವೈತವಾದಿ ಗಳಲ್ಲಿ ಅಗ್ರಗಣ್ಯರಾದ ವಿದ್ಯಾರಣ್ಯರ ಮಾತು:-- ''ಚಿನ್ಮಾತ್ರಾಶ್ರಿತಾಚಾವಿದ್ಯಾ॥''

ಸಾಂಬಶಾಸ್ತ್ರಿಗಳು ಇವರೆಲ್ಲಾ ಅವೈದಿಕರು ಎಂದು ಒಂದೇ ಕೊಡಲಿ ಪೆಟ್ಟಿನಿಂದ ಸ್ಮಾರ್ತರ ಪಕ್ಷವನ್ನು ತುಂಡುಮಾಡಿ ಕೆಡವಿಬಿಟ್ಟರು. ತಮ್ಮನ್ನು ನಂಬಿ ಹರತೀ ಆಚಾರ್ರನ್ನು ಮೋಟುಮಾಡಬೇಕೆಂದು ಪ್ರಾರ್ಥಿಸಿಕೊಂಡ ಸ್ಮಾರ್ತಶಿಖಾಮಣಿಗಳನ್ನು ಮಡುವಿನಲ್ಲಿ ಹಾಕಿ ಬಿಟ್ಟರು.

ಜೀವಾಶ್ರಿತಾಜ್ಞಾನಪಕ್ಷವು ಅತ್ಯಂತ ಹೇಯವಾದದ್ದು ಮತ್ತು ಬ್ರಹ್ಮಾಶ್ರಿತಾಜ್ಞಾನಪಕ್ಷಕ್ಕೇ ಇಳಿಯುವುದು. ಹೇಗೆಂದರೆ ಜೀವ= ಬ್ರಹ್ಮ+ ಅಹಂಕಾರವು. ಅಂತಃಕರಣಾವಚ್ಛಿನ್ನನಾದ ಶುದ್ಧ ಚೈತನ್ಯನೇ ಜೀವನು. ಅಂತಃಕರಣಾದಿಗಳೆಲ್ಲಾ ಅಜ್ಞಾನಪರಿಕಲ್ಪಿತವಾದು ವುಗಳು. ಅಂತೂ ಜೀವಭಾವವು ಬ್ರಹ್ಮಾಶ್ರಿತಾಜ್ಞಾನದಿಂದ ಬರಬೇಕೇ ಹೊರತು ಜೀವಾಶ್ರಿತಾಜ್ಞಾನದಿಂದ ಬರಲಾರದು . ಅನ್ಯಥಾ ಆತ್ಮಾಶ್ರಯತ್ವಾದಿ ಅನೇಕ ದೋಷಗಳು ಬರುವುವು. ಕಿಂಚ ಬ್ರಹ್ಮಾತಿರಿಕ್ತಜೀವವೆಂಬ ಭಿನ್ನಪದಾರ್ಥವು ಅದ್ವೈತಮತದಲ್ಲಿ ಎಲ್ಲಿಂದ ಬಂತು? ಅದ್ವೈತಮತದಲ್ಲಿ ಬ್ರಹ್ಮನು ನಿತ್ಯನು. ತದತಿರಿಕ್ತವೆಲ್ಲಾ ಮಿಥ್ಯಾ ಬ್ರಹ್ಮಭಿನ್ನವಾದ ಜೀವವೆಂಬ ಪದಾರ್ಥವು ಸತ್ಯವಾಗಿದ್ದರೆ, ಅಜ್ಞಾನವು ಜೀವನಲ್ಲಿರುವುದು, ಬ್ರಹ್ಮನಲ್ಲಿಲ್ಲ ಎಂದುಹೇಳಬಹುದು. ಆದುದರಿಂದ ಅಜ್ಞಾನವು ಬ್ರಹ್ಮನಲ್ಲಿದ್ದೇ ಜೀವಭ್ರಮಕ್ಕೂ ನಂತರ ಜಗದ್ಭ್ರಮಕ್ಕೂ ಕಾರಣವಾಗುವುದೆಂದು ಒಪ್ಪಬೇಕು. ಬ್ರಹ್ಮಾಶ್ರಿತಾಜ್ಞಾನವಾದವು ಅವೈದಿಕವೆಂದು ಶಾಸ್ತ್ರಿಗಳೇ ಹೇಳಿರುತ್ತಾರೆ. ಏವಂಚ ಅಜ್ಞಾನವಾದವು ಅವೈದಿಕವಾಯಿತು. ಆದುದರಿಂದಲೇ, ಸ್ಮಾರ್ತಮತ ನಿಂದೆಯನ್ನು ಮಾಡಬೇಕೆಂದು ಶಾಸ್ತ್ರಿಗಳು ಹರತಿ ಆಚಾರ್ರ ಸಂಗಡ ''ಪ್ಲಾಟ್'' ಮಾಡಿಕೊಂಡಿದ್ದಾರೆಂದು ನಾವು ನಿರೂಪಿಸಿದೆವು. ಹಿಮ್ಮೇಳದವರ ಪ್ರೇರಣೆಯಂತೆ ಹಾಡಿದ್ದೇ ಹಾಡುವ ಕಿಸಬಾಯಿ ದಾಸರೆಂದು ಹರತಿ ಆಚಾರ್ರನ್ನು ಶಾಸ್ತ್ರಿಗಳು ತಿವಿದರು. ಶಾಸ್ತ್ರಿಗಳವರ ಈ ವಾಕ್ಯಾರ್ಥವು ಹಿಮ್ಮೇಳದವರ ಪ್ರೇರಣೆಯಿಂದ ಹುಟ್ಟಿದ್ದೋ ಅಥವಾ ನೂತನವಾದ ಮದ್ದಿನ ಭಿರಿಕಿಯೇ ನಮಗೆ ತಿಳಿಯದು.

(4) ''ಮಾಯೇತ್ಯಸುರಾಃ'' ಎಂಬ ಶ್ರುತಿಯನ್ನು ಆಧಾರವಾಗಿಟ್ಟುಕೊಂಡು ಮಾಯಾವಾದವನ್ನು ಉಪಾಸನೆ ಮಾಡುವವರು ಅಸುರರು ಎಂದು ಹರತೀ ಆಚಾರ್ರು ಪ್ರತಿಪಾದನೆ ಮಾಡಿದರು. ಬುರುಡೆ ಮುಳ್ಳಿನಂತಿರುವ ಹರತೀ ಆಚಾರ್ರ ಶ್ರುತ್ಯರ್ಥದ ಬಲಾಬಲಪರೀಕ್ಷೆಗೆ ನಾವು ಕಾಲಿಡುವುದಿಲ್ಲ. ಆದರೆ ಸಾಂಬಶಾಸ್ತ್ರಿಗಳ ಅರ್ಥವಿವರಣವು ಸಕಲ ಅದ್ವೈತೋಪಾಸಕರೂ ದೇವ, ಪಿತೃ, ಗಂಧರ್ವ, ನಾಗಾದಿ ಸಕಲ ಉತ್ತಮರಿಗೂ ವಿರೋಧಿಗಳೆಂದು ತಿಳಿಸಿಕೊಡುವುದು. ತಥಾಹಿ :- ಮುದ್ಗಾಲೋಪನಿಷತ್ತಿನಲ್ಲಿ ಹೀಗೆ ಇರುವುದು. ''ಏಕೋ ದೇವೋ ಬಹುಧಾನಿವಿಷ್ಟಃ ತಮೇತಮಗ್ನಿರಿತ್ಯಧ್ವರ್ಯವ ಉಪಾಸತೇ, ಯಜುರಿತ್ಯೇಷ ಹೀದಂ ಸರ್ವಂ ಯುನಕ್ತಿ, ಸಾಮೇತಿ ಛಂದೋಗಃ, ವಿಷಮಿತಿ ಸರ್ಪಾಃ, ಊರ್ಗಿತಿ ದೇವಾಃ, ರಯಿರಿತಿ ಮನುಷ್ಯಾಃ, ಮಾಯೇತ್ಯಸುರಾಃ, ಸ್ವಧೇತಿ ಪಿತರಃ, ರೂಪಮಿತಿ ಗಂಧರ್ವಾಃ, ತಂ ಯಥಾಯಥೋಪಾಸತೇ ತಥೈವಭವತಿ, ತಸ್ಮಾದ್ಬ್ರಾಹ್ಮಣಃ ಪರಂಬ್ರಹ್ಮೈವಾಹಮಿತಿ ಭಾವಯೇತ್, ಸ ತದ್ರೂಪೋ ಭವತಿ॥''

ಎಂದರೆ '' ಸರ್ವಾಂತರ್ಯಾಮಿಯಾದ ಒಬ್ಬದೇವನನ್ನು ಅಧ್ವರ್ಯುವು ಅಗ್ನಿಯೆಂತಲೂ, ಯಜುಸ್ಸೆಂದು ಯಜುರ್ವೇದಿಯೂ, ಸಾಮನೆಂದು ಸಾಮವೇದಿಯೂ, ವಿಷವೆಂದು ಶೇಷಾದಿ ಸರ್ಪಗಳೂ, (ಇತರ ಸರ್ಪಗಳಿಗೆ ಉಪಾಸನಾ ಸಾಮರ್ಥ್ಯವಿಲ್ಲ), ಊರ್ಜನೆಂದು ದೇವತೆಗಳೂ, ರಯಿಃ ಎಂದು ಮನುಷ್ಯರೂ, ಮಾಯಾ ಎಂದು ಅಸುರರೂ, ಸ್ವಧಾ ಎಂದು ಪಿತೃಗಳೂ, ರೂಪನೆಂದು ಗಂಧರ್ವರೂ ಉಪಾಸನೆ ಮಾಡುತ್ತಾರೆ. ಪರಮಾತ್ಮನನ್ನು ಉಪಾಸನೆ ಮಾಡಿದಂತೆ ಫಲವು ಬರುವುದು. ತಸ್ಮಾತ್= ಆದುದರಿಂದ ಬ್ರಾಹ್ಮಣನು ''ಪರಬ್ರಹ್ಮಾಹಮಿತಿ ಭಾವಯೇತ್ ಸ ತದ್ರೂಪೋ ಭವತಿ'' ಎಂದು ಹೇಳಿರುವುದು.

(ಅ) ಸಾಂಬಶಾಸ್ತ್ರಿಗಳು ಹೇಳುವುದೇನೆಂದರೆ, ಇವೆಲ್ಲವೂ ಕ್ಷುಲ್ಲಕೋಪಾಸನೆಗಳಾದುದರಿಂದ ಬ್ರಾಹ್ಮಣನು ''ನಾನೇ ಪರಬ್ರಹ್ಮನು'' ಎಂದು ಉಪಾಸನೆ ಮಾಡಿ ಬ್ರಹ್ಮವೇ ಆಗಬೇಕು ಎಂದರ್ಥ ನಿರ್ಣೀತವಾಗಿದೆ'' ಎಂದು ಹೇಳಿರುವರು. ನಿರ್ಣೀತವಾ ಗಿರಲಿ! ಅದರ ಜೊತೆಯಲ್ಲಿ ಇದೂ ನಿರ್ಣೀತವಾಗಿದೆ. ಏನೆಂದರೆ, ನಾನೇ ಪರಬ್ರಹ್ಮನೆಂದು ಉಪಾಸನೆ ಮಾಡುವ ಬ್ರಾಹ್ಮಣನು ದೇವತೆಯಲ್ಲ; ಗಂಧರ್ವನಲ್ಲ; ಪಿತೃದೇವನಲ್ಲ; ನಾಗಾದಿ ಸರ್ಪನಲ್ಲ; ಪ್ರಹ್ಲಾದಾದಿ ಅಸುರನಲ್ಲ; ಇವರೆಲ್ಲರಿಗಿಂತಲೂ ಅಪರ ಬುದ್ಧಿವಂತನು ಎಂದರೆ ದೈತ್ಯನು, ರಾಕ್ಷಸನು ಅಥವಾ ಪಿಶಾಚಿಯು. ದೇವಋಷಿಪಿತೃಗಂಧರ್ವರೆಲ್ಲರೂ ವಿಮೂಢರು! ನಾನು ಪರಬ್ರಹ್ಮ ನೆಂದು ಭಾವನೆಯನ್ನು ಮಾಡುವ ಬ್ರಾಹ್ಮಣನನ್ನು ಸಾಂಬಶಾಸ್ತ್ರಿಗಳು ಕರೆದು ಔತಣಮಾಡಬೇಕೇ ಹೊರತು ದೇವಋಷಿಪಿತ್ರಾದಿಗಳ ಪಕ್ಷವನ್ನು ಸ್ವೀಕರಿಸಿದವರು ಆದರಿಸಲಾರರು. ನಮಗೆ ಕ್ಷುಲ್ಲಕೋಪಾಸನೆಯಾದರೂ ಚಿಂತಿಲ್ಲ, ದೇವತೆಗಳ ಉಪಾಸನೆಯು ಬೇಕು.

(ಆ) ಇಲ್ಲಿ ಹೇಳಿರುವ ಫಲಕಥನದಿಂದಲೂ ಅಭೇದವು ಸಿದ್ಧಿಸುವುದಿಲ್ಲ. 'ತಂ ಯಥಾ ಯಥೋಪಾಸತೇ ತಥೈವಭವತಿ' ಎಂಬ

ಶ್ರುತಿಯು ಉಪಾಸನಾನುಗುಣವಾಗಿ ಫಲವು ಬರುವುದೆಂದು ಹೇಳಿರುವುದು. ಪ್ರತಿಯೊಂದು ಉಪಾಸನೆಯ ಫಲವೂ ಭೇದವನ್ನೇ ಸೂಚಿಸುವುದು.

1. ಅಧ್ವರ್ಯುವು ಬ್ರಹ್ಮನನ್ನು ಅಗ್ನಿಯೆಂದು ಉಪಾಸನೆ ಮಾಡುತ್ತಾನೆ. (ಸಾಂಬಶಾಸ್ತ್ರಿಗಳ ಕೆಟ್ಟ ಅರ್ಥವನ್ನೇ ಇಟ್ಟು- ಕೊಳ್ಳೋಣ) ಹೀಗಿದ್ದರೂ ಅಧ್ವರ್ಯುವು ಅಗ್ನಿಯನ್ನು 'ಉಳ್ಳ' ದೀಕ್ಷಿತನಾಗುವನೇ ಹೊರತು ಅಗ್ನಿಯೇ ಆಗುವುದಿಲ್ಲ. ಅಧ್ವರ್ಯು ಸ್ಪರ್ಶದಿಂದ ಇದುವರೆಗೂ ಸುಟ್ಟುಹೋದವರು ಯಾರೂ ಇಲ್ಲ.

2. ಯಜುರ್ವೇದಿಯು ಯಜುಸ್ಸೆಂದು ಬ್ರಹ್ಮನನ್ನು ಉಪಾಸನೆ ಮಾಡುತ್ತಾನೆ. ಅವನು ಯಜುರ್ವೇದವುಳ್ಳವನಾಗುತ್ತಾನೆ.

3. ಛಂದೋಗಾಯಕನು ಸಾಮವೆಂದು ಉಪಾಸನೆ ಮಾಡುತ್ತಾನೆ. ಅವನೂ ಸಾಮವೇದವನ್ನುಳ್ಳವನಾಗುತ್ತಾನೆ.

4. ಸರ್ಪಗಳು ವಿಷವೆಂದು ಉಪಾಸನೆ ಮಾಡುತ್ತವೆ. ವಿಷವುಳ್ಳವುಗಳಾಗುತ್ತವೆ.

5. ದೇವತೆಗಳು ಊರ್ಜನೆಂದು ಉಪಾಸನೆ ಮಾಡುತ್ತಾರೆ. ಊರ್ಜತೆಯನ್ನು ಉಳ್ಳವರಾಗಿರುತ್ತಾರೆ.

6. ಅಸುರರು ಮಾಯಾ ಎಂದು ಉಪಾಸನೆ ಮಾಡುತ್ತಾರೆ. ಮಾಯಾವುಳ್ಳವರಾಗುತ್ತಾರೆ.

7. ಸ್ವಧಾ ಎಂದು ಪಿತೃಗಳು ಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. ಉತ್ಕೃಷ್ಟಸ್ವಧಾವುಳ್ಳವರಾಗುತ್ತಾರೆ.

8. ಗಂಧರ್ವರು ರೂಪ ನೆಂದು ಉಪಾಸನೆ ಮಾಡುತ್ತಾರೆ. ರೂಪವುಳ್ಳವರಾಗುತ್ತಾರೆ.

9. ಬ್ರಾಹ್ಮಣರು ಪರಬ್ರಹ್ಮನೆಂದು ಉಪಾಸನೆ ಮಾಡುತ್ತಾರೆ. ಪರಬ್ರಹ್ಮನನ್ನು ಉಳ್ಳವರಾಗುತ್ತಾರೆ.

(ಇ) '' ಸ ತದ್ರೂಪೋ ಭವತಿ'' ಎಂಬ ಶ್ರುತಿಯೇ ಈ ಅರ್ಥವನ್ನು ಬೋಧಿಸುವುದು. ಪರಬ್ರಹ್ಮನ ರೂಪದಂತೆ ರೂಪವು ಬರುವುದೇ ಹೊರತು ಪರಬ್ರಹ್ಮನೇ ಆಗಲಾರನು.

(ಈ) ಪರಂತು 'ತಸ್ಮಾತ್ ಬ್ರಾಹ್ಮಣಃ ಪರಂ ಬ್ರಹ್ಮೈವಾಹಮಿತಿ ಭಾವಯೇತ್' ಎಂಬ ಶ್ರುತಿಯಲ್ಲಿರುವ ಹೇತು ವಾಚಕ ಪದವೂ ಅದ್ವೈತಾರ್ಥಕ್ಕೆ ಕೋಪಿಸಿಕೊಳ್ಳುವುದು. ಯಾವ ಕಾರಣದಿಂದ ದೇವತೆಗಳೆಲ್ಲರೂ ಹೀಗೆ ಬ್ರಹ್ಮನನ್ನು ಉಪಾಸನೆ ಮಾಡುತ್ತಾರೋ ಆ ಕಾರಣದಿಂದ ಬ್ರಾಹ್ಮಣನೂ ಬ್ರಹ್ಮನನ್ನು ಉಪಾಸನೆ ಮಾಡಬೇಕು ಎಂದು ಅದರ ಅರ್ಥವು. ''ದೇವತೆಗಳು ಕ್ಷುಲ್ಲೋಪಾಸಕರಾದು ದರಿಂದ'' ಎಂದು ಅರ್ಥಮಾಡುವುದು ಪೂರ್ವದೇವತೆಗಳ ಪಕ್ಷಾವಲಂಬಿಗಳಿಗೆ ಉಚಿತವು.

(ಉ) ಆದುದರಿಂದ, ಶ್ರುತಿಗೆ ಹೀಗೆ ಅರ್ಥವು ಸುಲಲಿತವಾಗಿ ತೋರುವುದು. ಯಾವ ಕಾರಣದಿಂದ ದೇವಾದಿಗಳು ಬ್ರಹ್ಮನನ್ನು ಉಪಾಸನೆ ಮಾಡಿ ಅಭೀಷ್ಟವನ್ನು ಹೊಂದಿದರೋ ಆ ಕಾರಣದಿಂದ ಬ್ರಾಹ್ಮಣನೂ ಸಹ ''ಪರಂ ಬ್ರಹ್ಮಾಹಮಿತಿ ಭಾವಯೇತ್'' ಎಂದರೆ ದೇವತೆಗಳಿಗೆ ಮುಂತಾದವರುಗಳೆಲ್ಲಾ ಅಭೀಷ್ಟಪ್ರದನಾದ ಪರಬ್ರಹ್ಮನು ನನ್ನ ಅಂತರ್ಯಾಮಿಯೇ ಎಂದು ಉಪಾಸನೆ ಮಾಡಬೇಕು. ಹಾಗೆ ಮಾಡಿದರೆ, ಸತದ್ರೂಪೋಭವತಿ, ದೇವತೆಗಳು ಹೇಗೆ ತದ್ರೂಪರಾದರೋ ಹಾಗೆಯೇ ತದ್ರೂಪನಾಗುವನು ಎಂದರೆ ಪರಬ್ರಹ್ಮನ ಅನುಗ್ರಹದಿಂದ ಅವನ ರೂಪಕ್ಕೆ ಸದೃಶವಾದ ರೂಪವುಳ್ಳವನಾಗುವನು. ಜಯವಿಜಯರು ಯಾವ ರೂಪದಿಂದ ವೈಕುಂಠಲೋಕದಲ್ಲಿ ದ್ವಾರಪಾಲನೆಯನ್ನು ಮಾಡುತ್ತಿದ್ದರೆಂಬುದನ್ನು ಜ್ಞಾಪಿಸಿಕೊಂಡರೆ ಅರ್ಥವು ವಿಶದವಾಗುವುದು.

(5) ಅದ್ವೈತಿಗಳಲ್ಲಿ ಎಲ್ಲರೂ ನಾನೇ ಬ್ರಹ್ಮನು ಎಂದು ಹೇಳುವುದಿಲ್ಲ; ಕೆಲವರು ಜ್ಞಾನಿಗಳು ಮಾತ್ರ ಹಾಗೆ ಉಪಾಸನೆ ಮಾಡುತ್ತಾರೆ; ಹರತೀ ಆಚಾರ್ರು ಎಲ್ಲರನ್ನೂ ಒಟ್ಟಿಗೆ ನಿಂದಿಸಿರುತ್ತಾರೆ. ಇದು ಸರಿಯಲ್ಲ ಎಂದು ಶಾಸ್ತ್ರಿಗಳು ಎಂದು ಪುಟ 4 ರಲ್ಲಿ ಅತ್ತಿರುತ್ತಾರೆ. ಇದರಿಂದ ಅದ್ವೈತ ಜ್ಞಾನಿಗಳನ್ನು ನಿಂದಿಸುವುದು ಉಚಿತವೆಂದೂ, ಅಜ್ಞಾನಿಗಳನ್ನು ನಿಂದಿಸಿರುವುದು ತಪ್ಪೆಂದೂ ಹೇಳಿದಂತಾಯಿತು. ಇದು ದ್ವೈತಿಗಳಿಗೆ ಸಮ್ಮತವೇ. ಗುರುವಾಕ್ಯದಲ್ಲಿ ವಿಶ್ವಾಸವಿಲ್ಲದೆ, ನಾನೇ ಬ್ರಹ್ಮನು ಎಂದು ಉಪಾಸನೆ ಮಾಡಬೇಕೆಂದು ಶಂಕರಾಚಾರ್ಯರು ಹೇಳಿದರೂ ಕೇಳದೇ, ನನಗೆ ಮೋಕ್ಷವು ಬೇಡ, ನಾನು ಬ್ರಹ್ಮನು ಎಂದು ಉಪಾಸನೆ ಮಾಡುವುದಿಲ್ಲ ಎಂದು ಹೇಳುವ ಅದ್ವೈತಿ ದಡ್ಡನನ್ನು ಸಾಂಬಶಾಸ್ತ್ರಿಗಳ ದೊಣ್ಣೆಪೆಟ್ಟಿಗೆ ವಶಮಾಡಿ, ಹರತೀ ಆಚಾರ್ರು ಸಾಂಬಶಾಸ್ತ್ರಿಗಳಂಥಾ ಅದ್ವೈತೋಪಾಸಕರಾದ ಜ್ಞಾನಿಗಳನ್ನು ನಿಂದಿಸಿದರು. ''ಅಹಂ ಬ್ರಹ್ಮ'' ಎಂದು ಉಪಾಸನೆ ಮಾಡುವವನು ಅನರ್ಥಗಳನ್ನು ಹೊಂದುವವನೆಂದು ಅವರು ಹೇಳುವರೇ ಹೊರತು, ಏನೂ ತಿಳಿಯದ ಮೂಢನು ಮಹಾಪಾಪಕ್ಕೆ ಭಾಗಿಯಾಗುವನು ಎಂದು ಅವರು ಹೇಳುವುದಿಲ್ಲ. ಕಿಂಚ ಜ್ಞಾನಿಯು ನಾನೇ ಬ್ರಹ್ಮನು ಎಂದು ಉಪಾಸನೆ ಮಾಡುವುದಾದರೆ, ಅಜ್ಞಾನಿಯು ಹಾಗೆ ಯಾತಕ್ಕೆ ಉಪಾಸನೆ ಮಾಡಬಾರದು? ಇದೊಂದು ಬ್ರಹ್ಮಹತ್ಯೆಯಂಥಾ ಪಾಪಕರ್ಮವೆಂದು ಅದ್ವೈತಿಗಳು ಒಪ್ಪಿದ್ದರೆ, ಜ್ಞಾನಿಯು ಈ ಮಹಾ ಪಾಪರೂಪವಾದ ಉಪಾಸನೆಯನ್ನು ಮಾಡಿ ಜಯಿಸಿಕೊಳ್ಳುವನು. ಅಜ್ಞಾನಿಯು ಸಾಮರ್ಥ್ಯಹೀನನು; ಆದುದರಿಂದ ಅವನು ಈ ಉಪಾಸನೆಯನ್ನು ಮಾಡಕೂಡದು ಎಂದು ಹೇಳಬಹುದಾಗಿತ್ತು. ಇದು ಹಾಗಲ್ಲ. ''ಯದ್ಯದಾಚರತಿ ಶ್ರೇಷ್ಠಃ'' ಎಂಬ ನ್ಯಾಯದಿಂದ ಜ್ಞಾನಿಯ ಮತವನ್ನು ಆಚರಿಸಿ ಅಜ್ಞಾನಿಗಳೂ ನಾನೇ ಬ್ರಹ್ಮನೆಂದು ಹೇಳುತ್ತಾ ತಾವೂ ಜ್ಞಾನಿಗಳಾಗಬೇಕೆಂದು ಅದ್ವೈತಮತವು. ಹಾಗೆ ಮಾಡುವವನು

ಮಂದನು.

ಕಿಂಚ ಜ್ಞಾನಿಗೆ ಅದ್ವೈತೋಪಾಸನೆಯನ್ನು ಮಾಡುವ ವಿಷಯದಲ್ಲಿ ಪ್ರಮಾಣವಿರುವುದೆಂದು ಶಾಸ್ತ್ರಿಗಳು ಹೇಳಿರುತ್ತಾರೆ. ಯಾವ ಪ್ರಮಾಣವು? ಪುತ್ರ ಮಿತ್ರ ಕಳತ್ರಾದಿಗಳು ರಹಸ್ಯದಲ್ಲಿ ಮಾಡುವ ಸ್ತುತಿವಚನಗಳೇ ಹೊರತು ಉಪನಿಷತ್ತುಗಳು ಪೊರಕೆ ಯನ್ನು ತೆಗೆದುಕೊಳ್ಳುತ್ತವೆ.

1. ಅನನ್ಯ ಪ್ರೋಕ್ತೇ ಗತಿರತ್ರನಾಸ್ತಿ.

2. ಅಂಧಂತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ.

ಇಲ್ಲಿ ''ವಿದ್ಯಾತ್ಮನಿ ಬಿಧಾಬೋಧಃ''[88] ಎಂಬ ಭಾಗವತ ವಚನದಿಂದ ಬ್ರಹ್ಮವಿಷಯಕ ಭೇದಜ್ಞಾನವು ವಿದ್ಯಾ ಎನ್ನಿಸುವುದು; ಅವಿದ್ಯಾ ಎಂದರೆ ಅದಕ್ಕೆ ವಿರೋಧಿಯಾದ ಐಕ್ಯಜ್ಞಾನವೇ ಮೊದಲಾದ ವಿಪರೀತ ಜ್ಞಾನಗಳು. ವಿದ್ಯಾವಿರೋಧಿಯಾದ ವಿಪರೀತಜ್ಞಾನವನ್ನು ಹೊಂದಿದವರು ಅಂಧಂತಮಸ್ಸೆಂಬ ಲೋಕಾಲೋಕ ಪರ್ವತಕ್ಕಿಂತ ಹೊರಗಿರುವ ಲೋಕವನ್ನು ಪ್ರವೇಶಿಸುತ್ತಾರೆ ಎಂದು ಸರಳವಾಗಿ ಅರ್ಥವಾಗುವುದು. ತತ್ವಮಸಿ ಎಂಬುದು ಭೇದಸಾಧಕವೆಂದು ನಾವು ತೋರಿಸಿರುತ್ತೇವೆ. ''ಅಹಂ ಬ್ರಹ್ಮಾಸ್ಮಿ'' ಎಂಬುದು ದೇವರ ಮಾತು. ಪ್ರಜ್ಞಾನನು ಪೂರ್ಣವಾದ ಬ್ರಹ್ಮನು ಎಂಬ ಅರ್ಥವುಳ್ಳ ಪ್ರಜ್ಞಾನಂ ಬ್ರಹ್ಮ ಮುಂತಾದ ಇತರ ವಾಕ್ಯಗಳೂ ಹೀಗೆಯೇ ಪ್ರತ್ಯಕ್ಷಾದಿ ಪ್ರಮಾಣವಿರುದ್ಧವಾಗಿರುವುದರಿಂದ, ಅನ್ಯಾರ್ಥದಲ್ಲಿ ಅವಶ್ಯವಾಗಿ ಯೋಜಿಸಲ್ಪಡಬೇಕೆಂದು ದ್ವೈತಸಿದ್ಧಾಂತ ವಿಚಾರದಲ್ಲಿ ಹೇಳಿರುತ್ತದೆ.

(6) ಶಾಸ್ತ್ರಿಗಳೇ ಮುಂತಾದ ಅದ್ವೈತಿಗಳು ಇನ್ನು ಮೇಲೆ ಶಂಕರಾಚಾರ್ಯರಿಂದ ಪರಿಗೃಹೀತವಾದ ಪ್ರಾಯೇಣ ವ್ಯಾಖ್ಯಾನದಿಂದ ವಿಶದವಾದ ಅರ್ಥವುಳ್ಳ ಪ್ರಸಿದ್ಧ ಉಪನಿಷತ್ತುಗಳನ್ನು ಉದಾಹರಿಸಿ , ಪ್ರಿಂಟಾದ ಭಾರತ, ರಾಮಾಯಣ, ಭಾಗವತಾದಿ ಪ್ರಸಿದ್ಧ ಪುರಾಣವಚನಗಳನ್ನು ಉಪಬೃಂಹಣ ರೂಪವಾಗಿ ಕೊಟ್ಟು ವಾದ ಮಾಡುವುದು ಉಚಿತವು. ಸ್ವತಂತ್ರವಾಗಿ ಪುರಾಣಗಳನ್ನು ಉದಾಹರಿಸಿದರೆ ಅವುಗಳು ಶ್ರುತಿಗೆ ವಿರುದ್ಧವೆಂದೂ, ಪುರಾಣಕ್ಕೆ ಪ್ರಾಮಾಣ್ಯವನ್ನು ಒಪ್ಪುವುದು ಅದ್ವೈತಿಗಳಿಗೆ ಸಮ್ಮತವೆಂದೂ ಪ್ರತಿಜ್ಞೆಮಾಡಿ ತೋರಿಸಿ ಪುರಾಣವಾಕ್ಯಗಳನ್ನು ಉದಾಹರಿಸಬೇಕು. ಈಗ ಹರತಿ ಆಚಾರ್ರನ್ನು ಮೋಟುಮಾಡುವುದಕ್ಕೆ ಹೊರಟಂತೆ ಇನ್ನು ಮುಂದೆಯೂ ಹೋಟಲು ಆಚಾರ್ರುಗಳು, ಚಟ್ನಿ ಆಚಾರ್ರು , ಹಪ್ಪಳದ ಆಚಾರ್ರುಗಳನ್ನು ಮೋಟುಮಾಡುವ ಉದ್ದಿಶ್ಯವೇ ಗ್ರಂಥಗಳನ್ನು ಬರೆಯುವುವು, ಶಾಸ್ತ್ರಾರ್ಥವು ನಮಗೆ ಬೇಕಿಲ್ಲ ಎಂಬುದು ಶಾಸ್ತ್ರಿಗಳ ಅಭಿಪ್ರಾಯವಾದರೆ, ಅವರೂ ಹರತೀ ಆಚಾರ್ರೂ ಕನ್ನಂಬಾಡಿ ಕಟ್ಟೆಯ ಮೇಲೆ ಮಾರಾಮಾರಿ ಯುದ್ಧವನ್ನು ನೋಡುತ್ತಿರಲಿ; ನಾವುಗಳೂ ನಗುತ್ತಾ ನೋಡುತ್ತೇವೆ.

(7) ''ಸರ್ವಸಂಪ್ರತಿಪನ್ನವಾದ ಔಪಾಧಿಕ ಭೇದವನ್ನು (ದ್ವೈತಿಗಳು) ಅಂಗೀಕರಿಸದಿರುವುದು ಅನ್ಯಾಯವೇ ಆಗಿರುವುದು'' ಎಂಬುದು ಶಾಸ್ತ್ರಿಗಳ ಮಾತು. ದ್ವೈತಿಗಳು ಒಪ್ಪದಿರುವುದರಿಂದಲೇ ಈ ವಿಷಯವು ಸರ್ವ ಸಂಪ್ರತಿಪನ್ನವಲ್ಲ. ಇದು ಮೌಢ್ಯ ವಿಜೃಂಭಿತವಾದ ವಾದವು. ಒಂದೇ ಆಕಾಶವಾದರೂ ಘಟಮಠಗಳಂತೆ ಭಿನ್ನವಾಗಿರುವುದು ಎಂಬುದು ಶಾಸ್ತ್ರಿಗಳ ವಾಕ್ಯಾರ್ಥವು. ಆಕಾಶದಲ್ಲಿ ಸ್ವಾಭಾವಿಕ ಅನಂತ ಅಂಶಗಳಿರುತ್ತವೆ; ಘಟ ಸಂಬಂಧದಿಂದಲೂ ಮಠಸಂಬಂಧದಿಂದಲೂ ಸ್ವಾಭಾವಿಕ ಭೇದವು ವ್ಯಕ್ತ ವಾಗುತ್ತದೆ ಎಂಬುದು ಮಾಧ್ವವಾಕ್ಯಾರ್ಥವು. ಸರ್ವಥಾ ಭೇದಯೋಗ್ಯನಲ್ಲದ ಬ್ರಹ್ಮನು ಅಂತಃಕರಣಗಳಿಂದ ಭಿನ್ನನಾಗುವನು ಎಂಬ ಶಾಸ್ತ್ರಿಗಳ ಹೇಳಿಕೆಯು ಅವರ ಮಾಯಾವಾದದಲ್ಲಿ ಯುಕ್ತವೇ ಹೊರತು ಶಾಸ್ತ್ರಾರ್ಥವಾಗಲಾರದು. ಉಪಾಧಿಯಿಂದ ಸುಳ್ಳು ಭೇದವು ಬ್ರಹ್ಮನಲ್ಲಿ ಉಂಟಾಗುವುದು ಎಂದು

---

[88] ಭಿದಾ+ ಅಬೋಧಃ ಎಂದೂ, ಭಿದಾ+ ಬೋಧಃ ಎಂದೂ ಎರಡು ವಿಧವಾಗಿಯೂ ಪದಚ್ಛೇದವಾಗುವುದು. ನಾವು ಮಾಡಿರುವ ಪದಚ್ಛೇದವು ಭಾಗವತದಲ್ಲಿ ವಿವಕ್ಷಿತವೆಂಬುದನ್ನು ಸಾಂಬಶಾಸ್ತ್ರಿಗಳು ಪ್ರತಿಭಟಿಸುವುದಾದರೆ ತೋರಿಸುತ್ತೇವೆ. ಇದೇ ಮುಂದಿನ ಶ್ರುತಿಯಲ್ಲಿ 'ವಿದ್ಯಾಯಾಂ ಉ'' ಎಂದರೆ ಕೇವಲ ವಿದ್ಯೆಯಿಂದಲೂ ತಮಸ್ಸು ಆಗುವುದೆಂದು ಹೇಳಿರುತ್ತದೆ. ಅದರ ಅರ್ಥವೇ ನೆಂದರೆ, ಕೇವಲ ಭೇದಜ್ಞಾನವುಳ್ಳವನು ತಮಸ್ಸನ್ನು ಹೊಂದುವನು. ಜೀವಬ್ರಹ್ಮರ ಭೇದವು ಪಾರಮಾರ್ಥಿಕವೆಂದು ತಿಳಿದು, ಅಯಥಾರ್ಥವಾದ ಐಕ್ಯಜ್ಞಾನದ ತಿರಸ್ಕಾರದಿಂದ ಸಹಿತವಾದ ದೃಢವಾದ ಭೇದಜ್ಞಾನವೇ ಮೋಕ್ಷಜನಕವೆಂದು ಅರ್ಥವು. ದೃಷ್ಟಾಂತವೂ ಹೀಗೆಯೇ ಲೋಕದಲ್ಲಿರುವುದು. ಕೇವಲ ರಾಜಸೇವೆ ಮಾಡುವವನಿಗೆ ಕಲ್ಯಾಣವಿಲ್ಲ. ಶತ್ರುರಾಜನಲ್ಲಿ ದ್ವೇಷಪೂರ್ವಕ ವಾಗಿ ಸ್ವರಾಜ್ಯ ಸೇವೆಯೇ ಕಲ್ಯಾಣಪ್ರದವು. ಕೇವಲ ಪರರಾಜರನ್ನು ಆಶ್ರಯಿಸುವವನು ದುಃಖ ಪಡುವನು; ಹಾಗೆಯೇ ರಾಜನ ಸಮೀಪಕ್ಕೆ ಬರುತ್ತಾ, ಪರರಾಜನ ಕಾರ್ಯವನ್ನು ಮಾಡುವ ದ್ರೋಹಿಯು ಹೆಚ್ಚು ರಾಜದ್ವೇಷಕ್ಕೆ ಪಾತ್ರನು. ಆದುದರಿಂದ ಕೇವಲ ಭೇದಜ್ಞಾನಿಯು ಮಹಾತಮಸ್ಸಿಗೆ ಬೀಳುವುದು ಉಚಿತವು . ಅಭೇದಮತನಿರಾಕರಣ ಪೂರ್ವಕವಾದ ಭೇದಜ್ಞಾನವೇ ಮೋಕ್ಷಪ್ರದವು.

''ಅನನ್ಯಪ್ರೋಕ್ತೇ ಗತಿರತ್ರನಾಸ್ತಿ'' ಎಂಬುದಕ್ಕೆ ಶಂಕರಾಚಾರ್ಯರೂ ದ್ವೈತಿಗಳಂತೆಯೇ ಅರ್ಥಮಾಡಿರುತ್ತಾರೆ.

ಶಾಸ್ತ್ರಿಗಳು ಹೇಳುವುದಾದರೆ, ಉಪಾಧಿಯಿಂದ ಭೇದವು ಉಂಟಾಗುವುದಿಲ್ಲಎಂದು ಅರ್ಥವಾಯಿತು. ಅದೇ ಹರತೀ ಆಚಾರ‍್ರರ ಮಾತು. ಉಪಾಧಿಯಿಂದ ಭೇದವು ಉಂಟಾಗುವುದಿಲ್ಲ. ಸರ್ವಥಾ ಭೇದವಿಲ್ಲದಿದ್ದರೆ ಅಂಶಾಂಶಿಭಾವವು ಕೂಡುವುದಿಲ್ಲ. ಅಂಶಾಂಶಿ ಭಾವವು ಗೀತೆಯಲ್ಲಿಹೇಳಿರುವುದು. ಆದುದರಿಂದ ನಿರ್ಭೇದನಾದ, ಉಪಾಧಿಯಿಂದ ಸೀಳುವುದಕ್ಕೆ ಬರದಿರುವ ಅಖಂಡಬ್ರಹ್ಮನನ್ನು ಬಿಟ್ಟುಬಿಡಿ ಎಂದು ಹೇಳಿದರು. ಶಾಸ್ತ್ರಿಗಳು ಹೇಳಿದ್ದೇ ಹರತೀ ಆಚಾರ‍್ರೂ ಹೇಳಿದ್ದು. ಅಷ್ಟಲ್ಲದೇ ನಾವು ಇವರಿಬ್ಬರೂ ಒಟ್ಟುಗೂಡಿ ಅದ್ವೈತತತ್ವವನ್ನು ನೆಲಸಮ ಮಾಡುವರೆಂದು ನಾವು ನಿರೂಪಿಸುತ್ತಿರಲಿಲ್ಲ.

(8) ಇದು ಅದ್ವೈತಮತದ ಮುಖ್ಯದೋಷವು; ಕೀತು ಕೊಳೆತುಹೋಗಿರುವ ಮಾಯವಾಗದ ವ್ರಣವು. ಬ್ರಹ್ಮನು ಸತ್ಯನು. ತದತಿರಿಕ್ತವಾಗಿ ಒಂದೂ ಇರುವುದಿಲ್ಲಎಂದು ಹೇಳಿದಮೇಲೆ, ಜೀವ ಜಗತ್ತು, ಅಜ್ಞಾನ, ತ್ರಿವಿಧಸತ್ತಾ, ಬಂಧ, ಮೋಕ್ಷ, ಇತ್ಯಾದಿ ಒಂದು ವಿಷಯವೂ ಪ್ರಸಕ್ತವಾಗುವುದಕ್ಕೇ ಅವಕಾಶವಿಲ್ಲ. ಅಜ್ಞಾನದಿಂದ ಬರುವುದೆಂದರೆ, ಅಜ್ಞಾನವು ಸತ್ಯವೆಂದೂ. ಅಜ್ಞಾನ ವಿಷಯಕ ವ್ಯವಹಾರಾದಿಗಳು ಸತ್ಯವೆಂದೂ, ಸತ್ತಾತ್ರೈವಿಧ್ಯವು ಸತ್ಯವೆಂದೂ, ಮಿಥ್ಯಾಭೂತವಾದ ಜಗತ್ತುಸತ್ಯವೆಂದೂ, ಅವುಗಳಿಂದ ನಾನಾ ಪದಾರ್ಥಗಳು ಉಂಟಾಗುವುದು ಸತ್ಯವೆಂದೂ ಒಪ್ಪಬೇಕು. ಅನುಭವಾನುರೋಧೇನ ಇವುಗಳನ್ನು ಒಪ್ಪುವುದಾದರೆ, ಅದ್ವೈತವು ಬೆಂಕಿಗೆ ಬಿತ್ತು. ಒಪ್ಪದಿದ್ದರೆ, ಇತರ ವಿಷಯಗಳಿಗೆ ಪ್ರಸಕ್ತಿಯೇ ಇಲ್ಲದೇ ಹೋಗುವುದರಿಂದ ಸಕಲ ಅನುಭವ ವಿರೋಧ ವನ್ನೂ ಸಹಿಸಬೇಕಾಗುವುದು. ಅದ್ವೈತಮತದಲ್ಲಿಯಾವರೀತಿಯಿಂದ ನೋಡಿದರೂ, ಜೀವಭಾವಾದಿಗಳಿಗೆ ಕಾರಣವಾದ ಭ್ರಮವು ಉಂಟಾಗುವುದಕ್ಕೇ ಅವಕಾಶವಿರುವುದಿಲ್ಲವೆಂದು ಭಾಮತೀಕಾರರೇ ಮುಂತಾದ ಅದ್ವೈತಿಗಳೇ ಸ್ಪಷ್ಟವಾಗಿ ಹೇಳಿರುತ್ತಾರೆ. ಬ್ರಹ್ಮನು ಒಬ್ಬನೇ ಇರುವವನಾದರೆ ಅವಿದ್ಯೆಯು ಎಲ್ಲಿಂದ ಬಂತು? ಅದ್ವೈತತತ್ವದ ಪರಮ ರಹಸ್ಯವು ಈ ಶ್ಲೋಕದಲ್ಲಿಹೇಳಿರುವುದು:-

''ಮೃಗತೃಷ್ಣಾಂಭಸಿ ಸ್ನಾತಃ ಖಪುಷ್ಪಕೃತಶೇಖರಃ। ಅಹೋ ವಂಧ್ಯಾಸುತೋ ಯಾತಿ ಶಶಶೃಂಗ ಧನುರ್ಧರಃ॥''

ವಂಧ್ಯಾಪುತ್ರನು ವಿದ್ವಾಂಸನಾಗಿ ಸಹಸ್ರರೂಪಾಯಿಗಳನ್ನುತಂದು ಜಗದುದ್ಧಾರ ಮಾಡುವುದು ಸಂಭಾವಿತವೇ? ಹೀಗೆ ಇಲ್ಲದೇ ಇರುವ ಅಜ್ಞಾನ(ಅವಿದ್ಯೆ)ಕ್ಕೆನಾಮನಿರ್ದೇಶವೂ, ಲಕ್ಷಣೋಕ್ತಿಯೂ, ಅರ್ಥಕ್ರಿಯಾಕಾರಿತ್ವವೂ, ಅದಕ್ಕೆ ಬಂಧಕತ್ವವೂ ಬಂಧದಲ್ಲೂ ವ್ಯವಸ್ಥೆಯು, ಅದರಿಂದ ಮುಕ್ತಿಯು ಇಂಥಾದ್ದೆಲ್ಲಾ ಹೇಳುವ ಗ್ರಂಥಗಳು ಎಂಜಲು ಹಾಳೆಗಳಾಗದಮೇಲೆ, ಇನ್ನು ಮೇಲೆ ಯಾವುದನ್ನು ಸುಳ್ಳೆಂದು ನಿಂದಿಸಬೇಕು? ಶಂಕರಾಚಾರ್ಯರಲ್ಲಿ ಬಹುಗೌರವದಿಂದ ಸಹಿತನಾದ ಡಾಸನ್ ಸಾಹೇಬನೂ ಅದನ್ನೇ ಹೇಳುತ್ತಾನೆ.

" In reality, there is nothing else besides Brahman alone. If we imagine that we perceive a transformation (vikara) of him into the world, a division (Bheda) of him into a plurality of individuals this depends on Avidya. But how does this happen? How do we manage to decieve ourselves into seeing a plurality of individuals where in reality, Brahman alone is? On this question our authors give no explanation. ____ Paul Deussen.

ಅರ್ಥವು:- ನಿಜವಾಗಿ ಅದ್ವೈತಮತದಲ್ಲಿ ಬ್ರಹ್ಮಾತಿರಿಕ್ತವಾಗಿ ಒಂದೂ ಇಲ್ಲ. ಬ್ರಹ್ಮನೇ ನಾನಾ ವಿಕಾರಗಳನ್ನು ಹೊಂದಿ ನಾನಾ ಭೇದ ಗಳನ್ನೂ, ನಾನಾ ಜೀವಭಾವಗಳನ್ನೂ ಹೊಂದುವನೆಂದು ನಾವು ತಿಳಿಯುವುದಾದರೆ , ಅದು ಅವಿದ್ಯಾಮೂಲಕವು. ಆದರೆ ಇದು ಹೇಗೆ ಸಾಧ್ಯವಾಗುವುದು? ಒಂದೇ ಬ್ರಹ್ಮನು ಇರುವುದಾದರೆ, ನಾನಾ ವಿಕಾರಗಳನ್ನೂ ಭೇದಗಳನ್ನೂ ತಿಳಿಯುವ ಭ್ರಮವು ಹೇಗೆ ಬರುವುದು? ಈ ಪ್ರಶ್ನೆಗೆ ನಮ್ಮ ಗ್ರಂಥಕಾರರು (ಅದ್ವೈತಿಗಳು) ಯಾವಉತ್ತರವನ್ನೂ ಕೊಡುವುದಿಲ್ಲ.

ಡಾಸನ್ ಸಾಹೇಬನ ನಿಶ್ಚಯವು ಇಲ್ಲಿಗೇ ನಿಂತಿತ್ತು. ರಾಧಾಕೃಷ್ಣರು ಅದ್ವೈತಿಗಳು ಉತ್ತರ ಕೊಡದೇ ಇರುವುದರಲ್ಲಿ ಕಾರಣವನ್ನು ನಿರೂಪಿಸಿಬಿಟ್ಟರು. "They give us no information, simply because no information is possible"__ S.Radhakrishnan, M.A. , D.Litt.

ಅರ್ಥವು:- ಅವರು ಅದ್ವೈತಿಗಳು ಉತ್ತರ ಕೊಡಲಿಲ್ಲ. ಯಾತಕ್ಕೆಂದರೆ ಯಾವ ಉತ್ತರವನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ.[99]

ಮತ್ತು ಗೌಡಪಾದರ ತತ್ವ ನಿರೂಪಣಾವಸರದಲ್ಲಿಮಾಯಾವಾದದ ಹೇಯತೆಯನ್ನು ಪ್ರಕಟವಾಗಿ ಹೇಳಿರುವರು:-

---

[99]ಇದು ಗ್ರಂಥದ ಮಾತು. ಮೊನ್ನೆತಾನೇ (17-9-1930) ಸಾಯಂಕಾಲ ಟೌನ್ ಹಾಲಿನಲ್ಲಿ(ಮೈಸೂರು) ಕೊಟ್ಟ ಉಪನ್ಯಾಸದಲ್ಲಿ ಡಾಕ್ಟರ್ ರಾಧಾಕೃಷ್ಣರವರು ಪೌರ್ವಾತ್ಯ ಜನಾಂಗವು ''ಪ್ರಪಂಚವು ಮಿಥ್ಯಾ ಎಂದು ಪ್ರಪಂಚವನ್ನು ದುರ್ಲಕ್ಷಿಸುತ್ತಿರುವುದರಿಂದ'' ಬಹಳ ಅನರ್ಥವನ್ನು ಹೊಂದಿ ಆತ್ಮೋದ್ಧಾರದಲ್ಲಿ ಅಸಮರ್ಥವಾಗಿರುವುದೆಂದು ಹೇಳಿರುತ್ತಾರೆಂದು ಪ್ರಚುರಪಡಿಸಲ್ಪಟ್ಟಿದೆ.

"The general idea pervading Goudapada's work, that bondage and liberation, the individual soul and the world are all unreal, makes the caustic critic observe that the theory which has nothing better to say that that an unreal soul is trying to escape from an unreal bondage in an unreal world, to accomplish an unreal supreme good, may itself be an unreality. It is one thing to say that the secret of existence................ is a mystery and another to dismiss the whole changing universe as a mere mirage. If we have to play the game of life, we cannot do so with the conviction that the play is a show and all the prizes in it mere blanks. No philosophy can consistently hold such a view and be at rest with itself. The greatest condemnation of such a theory is that we are obliged to occupy ourselves with objects, the existence and value of which, we are continually denying in theory. __________ S.RADHAKRISHNA, M.A. , D.Litt., (INDIAN PHILOSOPHY VOL---II. i-463).

ಇಂಥಾ ಉದ್ದಾಮ ಪಂಡಿತರಿಗೆ ಆಗದ ಕೆಲಸವನ್ನು ನವೀನ ಅದ್ವೈತಿ ಶಾಸ್ತ್ರಿಗಳು ಮಾಡಿ ತೋರಿಸಿರುವರು. ಅದೇ ಬ್ರಹ್ಮನ ಕುರೂಪ ಸಮುದಾಯವು; ಅಗ್ನಿಗೆ ಔಷ್ಣ್ಯದಂತೆ ಬ್ರಹ್ಮನ ಸ್ವಾಭಾವಿಕ ಧರ್ಮವು.

ಇಲ್ಲಿಗೆ ಕ್ಷುದ್ರಗ್ರಂಥಗಳಿಂದುಂಟಾದ ಅದ್ವೈತಿಗಳ ಮಾನಭಂಗ ಪ್ರದರ್ಶನವೆಂಬ
ತ್ರಯೋದಶೋಲ್ಲಾಸವು ಮುಗಿದುದು.

## XIV ವಾಸುದೇವ ಶ್ರುತ್ಯುದ್ಧಾರವು.

ಶಾಸ್ತ್ರಿಗಳೂ, ಹರತೀ ಆಚಾರ್ರೂ ಮುಷ್ಟಾಮುಷ್ಟಿ, ಕೇಶಾಕೇಶೀ, ಮುಂಡಾಮುಂಡೀ, ಕೈಯಾ ಕೈಯಿ ! ಬೇಕಾದಷ್ಟು ಯುದ್ಧವನ್ನು ಮಾಡಲಿ! ನಮಗೆ ಯಾವುದಕ್ಕೂ ಪೇಚಾಟವಿಲ್ಲ. ವಾಸುದೇವ ಶ್ರುತಿಯನ್ನು ಮಾತ್ರ ಕುಲಗೆಡಿಸುವುದಕ್ಕೆ ಶಾಸ್ತ್ರಿಗಳು ಯತ್ನ ಮಾಡಿದರು. ಇಲ್ಲಿ ಅವರು ತಮ್ಮ ಗುರುಗಳಾದ ಶಂಕರಾಚಾರ್ಯರನ್ನು ತಿರಸ್ಕರಿಸಿ, ವಿಚಾರ ಶಕ್ತಿಯನ್ನು ಉಪಯೋಗಿಸದೇ ಕೆಲವು ವಾಕ್ಯೋದಾಹರಣ ಮಾತ್ರದಿಂದಲೇ ಪರಪಕ್ಷ ನಿರಾಕರಣವಾಯಿತೆಂದು ತಿಳಿದು ಕುಪ್ಪಳಿಸಿ ಬಿಟ್ಟನು. ಒಂದು ಶ್ರುತ್ಯರ್ಥ ವನ್ನು ನಿರ್ಣಯಿಸಬೇಕಾದರೆ, ಪರೋಕ್ಷಾರ್ಥಕ್ಕೆ ಇರುವ ಬಾಧಕವನ್ನೂ ಸ್ವಪಕ್ಷಕ್ಕೆ ಇರುವ ಸಾಧಕವನ್ನೂ ವಿವರಿಸಬೇಕು. ಶಾಸ್ತ್ರಿಗಳು ಹಾಗೆ ಮಾಡಲಿಲ್ಲ. ವಾಸುದೇವಶ್ರುತಿಯು ಹೀಗೆ ಹೇಳುವುದು:- '' ವಾಸುದೇವೋ ವಾ ಇದಮಗ್ರ ಆಸೀತ್ ನ ಬ್ರಹ್ಮಾ ನ ಚ ಶಂಕರಃ'' ಇತ್ಯಾದಿ. ಇದಕ್ಕೆ ವಿರೋಧವೆಂದು ಶಾಸ್ತ್ರಿಗಳು ಉದಾಹರಿಸಿರುವ ವಾಕ್ಯಗಳಲ್ಲೆಲ್ಲಾ ಒಟ್ಟು ತಿಳಿದುಬರುವ ಸಂಕ್ಷೇಪವು ಏನೆಂದರೆ:- ''ಒಬ್ಬ ಈಶಾನ ನಾಮಕ ಮಹಾದೇವನಿಂದ ಬ್ರಹ್ಮವಿಷ್ಣುರುದ್ರರು ಹುಟ್ಟಿರುವರು'' ಎಂದು ಹೇಳಿರುತ್ತದೆ ವಿಷ್ಣುವು ಈಶಾನನಿಂದ ಹುಟ್ಟಿದನು ಎಂದು ಹೇಳಿರುವುದರಿಂದ ಈ ವಿಷ್ಣುವು ಹೇಗೆ ಸರ್ವೋತ್ತಮನು? ರುದ್ರನು ಮಹಾದೇವ ನಿಂದ ಹುಟ್ಟಿದನೆಂದು ಹೇಳಿರುವುದರಿಂದ ರುದ್ರನು ಹೇಗೆ ಸರ್ವೋತ್ತಮನು? ಬ್ರಹ್ಮೇಂದ್ರಾದಿಗಳು ಯಾವನೋ ಮಹಾದೇವನಿಂದ ಹುಟ್ಟಿರುವರೆಂದು ಹೇಳಿರುವುದರಿಂದ ಬ್ರಹ್ಮೇಂದ್ರಾದಿಗಳು ಹೇಗೆ ಸರ್ವೋತ್ತಮರು? ಎಂದು ಕೇಳಿರುವರು. ಪ್ರಶ್ನೆಗೆ ಅವಕಾಶವಿದೆ. ಇದರಿಂದ ಒಬ್ಬರೂ ಸರ್ವೋತ್ತಮರಲ್ಲ. ವೇದದಲ್ಲಿ ಒಂದೊಂದು ಕಡೆ ಒಂದೊಂದು ಚೇತನವು ಸರ್ವೋತ್ತಮವೆಂದು ಬರುವುದು. ಎಲ್ಲವೂ ಅಬದ್ಧವೇ ಎಂದು ಶಾಸ್ತ್ರಿಗಳು ಸಿದ್ಧಾಂತ ಮಾಡಿರುವರು. ವಿಶೇಷಶ್ರುತಿವಿಚಾರವನ್ನು ಬೇರೆ ನಾವು ಮಾಡುವೆವು. ಪ್ರಕೃತದಲ್ಲಿ ಇಷ್ಟು ಹೇಳಿದರೆ ಸಾಕು. ಅಪೌರುಷೇಯವಾದ ಶ್ರುತಿಯು ಎಲ್ಲೂ ಅಬದ್ಧವನ್ನು ಹೇಳುವುದಿಲ್ಲ. ಈ ಶ್ರುತಿಯಲ್ಲಿ ಹೇಳಿರುವ ಮಹಾದೇವನು ಅಥವಾ ಈಶಾನನು ಮೂಲರೂಪಿ ನಾರಾಯಣನು. ''ಈಶಾನಃ ಸರ್ವಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ'' ಎಂಬ ಗೀತಾ ಶ್ಲೋಕದಲ್ಲಿರುವ ಈಶಾನ ಶಬ್ದಕ್ಕೆ ಈಶನ ಶೀಲನಾದ ನಾರಾಯಣನೆಂದೇ ಅರ್ಥವು ಎಂದು ಶಂಕರಾಚಾರ್ಯರೇ ಅರ್ಥ ಮಾಡಿರು ತ್ತಾರೆ. ಶಾಸ್ತ್ರಿಗಳ ಜ್ಞಾನಚಕ್ಷುಸ್ಸಿನಲ್ಲಿ ಪರೆಯು ಇದ್ದುದರಿಂದ ತಮ್ಮ ಗುರುಗಳು ಮಾಡಿರುವ ಈಶಾನ ಶಬ್ದಾರ್ಥವೇ ಅವರಿಗೆ ತೋರಲಿಲ್ಲ. ಮೂಲರೂಪಿ ನಾರಾಯಣನಿಂದ ಬ್ರಹ್ಮ ವಿಷ್ಣು ರುದ್ರರೆಂಬ ಮೂರು ಸ್ವರೂಪಭೂತವಾದ ಅವತಾರಗಳು ಪ್ರಾದುರ್ಭವಿಸಿರುವುವು. ಇವುಗಳಲ್ಲಿ ಬ್ರಹ್ಮರೂಪವು ಚತುರ್ಮುಖ ಬ್ರಹ್ಮನಲ್ಲಿ ವಿಭೂತಿರೂಪದಿಂದ ಇದ್ದು ಜಗತ್ಸರ್ಜನಾದಿ ನಾನಾ ವ್ಯಾಪಾರಗಳನ್ನು ಮಾಡುವುದು. ರುದ್ರರೂಪವು ಉಮಾಪತಿಯಲ್ಲಿ ವಿಭೂತಿ ರೂಪದಿಂದ ಇದ್ದು ಜಗತ್ಸಂಹಾರ ಕಾರ್ಯವನ್ನು ಮಾಡುವುದು. ವಿಷ್ಣುರೂಪವು ಪೃಥಕ್ ಮತ್ತೊಂದು ಚೇತನನಲ್ಲಿ ಅಂತರ್ಗತನಾಗದೇ ಪಾಲನ ವ್ಯಾಪಾರವನ್ನು ಮಾಡುವುದು ಎಂದು ಭಾಗವತಾದಿ ಅನೇಕ

ಗ್ರಂಥಗಳಲ್ಲಿ ಸುಪ್ರಸಿದ್ಧ ವಿಷಯವು.

''ಬ್ರಹ್ಮಣಿಸ್ಥೋऽಸೃಜದ್ವಿಷ್ಣುಃ ಸ್ಥಿತ್ವಾರುದ್ರೇತ್ವಭಕ್ಷಯತ್ । ಪೃಥಕ್ ಸ್ಥಿತ್ವಾ ಜಗತ್ಪಾತಿ ತದ್ಬ್ರಹ್ಮಾದ್ಯಾಹ್ವಯೋ ಹರಿಃ॥''

ಇತ್ಯಾದಿ ಅನೇಕ ಪ್ರಮಾಣಗಳು ಇರುವುವು. ಈಶಾನಾದಿ ಅನಂತನಾಮಗಳುಳ್ಳ ನಾರಾಯಣನಿಂದ ರುದ್ರನು ಎಂದರೆ ಉಮಾಪತಿಯು ಹುಟ್ಟಿದನೆಂದು ಹೇಳುವುದರಲ್ಲಿ ಬಾಧಕವಿಲ್ಲ. ''ಬ್ರಹ್ಮಣೋ ಅಧಿಪತಿಃ'' ಎಂದರೆ ಚತುರ್ಮುಖ ಬ್ರಹ್ಮದೇವರಿಗೆ ನಾರಾಯಣನು ಅಧಿಪತಿಯು ಎಂದು ಹೇಳಬೇಕು. ವಿಷ್ಣುವಿಗೆ ಜನಕನು ನಾರಾಯಣನು ಎಂದರೆ ವಿಷ್ಣುರೂಪೇಣ ಆವಿರ್ಭವಿಸಿದನು ಎಂದು ಅರ್ಥವು. ''ಕತೌರುದ್ರೋಮಹಾದೇವಃ ದೇವಾನಾಮೀಶ್ವರಃ ಪ್ರಭುಃ'' ಎಂದು ಶಾಸ್ತ್ರಿಗಳು ಉದಾಹರಿಸಿರುವ ಶ್ಲೋಕವು ಯಾರಿಗೂ ಬಾಧಕವಲ್ಲ. ''ರುದ್ರೋ ಸಮಾಶ್ರಿತೋ ದೇವಾಃ ರುದ್ರೋಬ್ರಹ್ಮಾಣಮಾಶ್ರಿತಃ । ಬ್ರಹ್ಮಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥'' ಎಂಬ ವಚನಾನುಸಾರ ಇಂದ್ರಾದಿ ದೇವತೆಗಳಿಗೆ ಈಶ್ವರನಾದ ರುದ್ರನು ಕಲಿಯುಗದಲ್ಲಿ ವಿಶೇಷವಾಗಿ ಪ್ರಭುವು ಎಂದು ಅರ್ಥವು. ಇದು ದ್ವೈತಿಗಳ ಸಿದ್ಧಾಂತವು. ತಾಮಸ ಕಾರ್ಯವು ರುದ್ರದೇವರ ವ್ಯಾಪಾರವಾದುದರಿಂದ ವಿಷ್ಣುವಿನಿಂದ ಅಜ್ಞಪ್ತನಾದ ರುದ್ರದೇವರು ಕಲಿಯುಗದಲ್ಲಿ ಐಕ್ಯಶಾಸ್ತ್ರಾದಿ ತಾಮಸ ಶಾಸ್ತ್ರಗಳಿಗೆ ಪ್ರವೃತ್ತಿ ಉಂಟುಮಾಡಿ ಶಾಸ್ತ್ರಿಗಳಂಥಾ ಜನರುಗಳಿಗೆ ಮಿಥ್ಯಾಜ್ಞಾನವನ್ನುಂಟುಮಾಡುವನು. ಮತ್ತು ತಾಮಸ ಜನರಿಂದ ಭೂಯಿಷ್ಠವಾದ ಕಲಿಯುಗದ ಕಾರ್ಯಗಳಿಗೆ ಆತನೇ ವಿಶೇಷ ಪ್ರವರ್ತಕನು. ಅಂಥಾ ಮಹಾರುದ್ರನ ವ್ಯಾಪಾರವು ಪ್ರಬಲವಾಗಿಲ್ಲದೇ ಇದ್ದರೆ ಸಾಂಬಶಾಸ್ತ್ರಿಗಳ ಚಪೇಟಿಕೆಯಂಥಾ ಗ್ರಂಥಗಳ ಉತ್ಪತ್ತಿಗೆ ಅವಕಾಶವೆಲ್ಲಿಂದ ಬರುವುದು?

ವಾಸುದೇವ ಶ್ರುತಿಯು ನಿರವಕಾಶವಾಗಿ ನಾರಾಯಣನು ಒಬ್ಬನೇ ಪೂರ್ವದಲ್ಲಿ ಸ್ವತಂತ್ರನಾಗಿ ಇದ್ದನು, ಬ್ರಹ್ಮಶಂಕರೇಂದ್ರಾದಿಗಳು ಇರಲಿಲ್ಲ ಎಂದು ಸೋಪಪತ್ತಿಕವಾಗಿ ವಿಷ್ಣುಸರ್ವೋತ್ತಮವನ್ನು ಹೇಳುವುದು.

ಭಾರತ ಭಾಗವತ ವಾಕ್ಯಗಳಿಂದಲೂ ಇದು ನಿಶ್ಚಿತವಾಗುವುದು.

(1) ಮಹಾಭಾರತೇ:-

ಪುರಾತುಪ್ರಳಯೇ ಪ್ರಾಪ್ತೇ ನಷ್ಟೇ ಸ್ಥಾವರಜಂಗಮೇ । ಬ್ರಹ್ಮಾದಿಷು ಪ್ರಲೀನೇಷು ನಷ್ಟೇಲೋಕೇ ಚರಾಚರೇ ॥

ಆಭೂತ ಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾನ್। ಏಕಸ್ತಿಷ್ಠತಿ ವಿಶ್ವಾತ್ಮಾ ಸ ತು ನಾರಾಯಣಃ ಪ್ರಭುಃ ॥

(2) ಭಾಗವತೇ :- ಏಕೋ ನಾರಾಯಣೋದೇವಃ ಪೂರ್ವಸೃಷ್ಟಂ ಸ್ವಮಾಯಯಾ।

ಸಂಹೃತ್ಯಕಾಲಕಲಯಾ ಕಲ್ಪಾಂತ ಇದಮೀಶ್ವರಃ। ಏಕಏವಾದ್ವಿತೀಯೋಭೂದಾತ್ಮಾಧಾರೋನಿರಾಶ್ರಯಃ॥

(3) ಪದ್ಮಪುರಾಣೇ:- ಆಸೀದೇಕೋಹವೈಚಾತ್ರ ವಿಷ್ಣುರ್ನಾರಾಯಣೋವ್ಯಯಃ।

ನ ಬ್ರಹ್ಮಾ ನ ಚ ರುದ್ರಶ್ಚ ನ ದೇವಾ ನ ಮಹರ್ಷಯಃ।

ನ ಇಮೇದ್ಯಾವಾಪೃಥಿವೀ ನ ಚ ಸೋಮೋ ನ ಚ ಭಾಸ್ಕರಃ।

ನ ನಕ್ಷತ್ರಾಣಿಲೋಕಾಶ್ಚ ನ ಚಾಂಡಂ ಮಹದಾವೃತಂ॥

(4) ಅಗ್ನಿರ್ವೈ ದೇವಾನಾಮವಮಃ ವಿಷ್ಣುಃ ಪರಮಃ

ತದಂತರೇಣ ಅನ್ಯಾ ಸರ್ವಾ ದೇವತಾಃ............................ ॥ ಋಗ್ವೇದೇ॥

ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ವಾಸುದೇವಶ್ರುತ್ಯುದ್ಧಾರ ವೆಂಬ
ಚತುರ್ದಶೋಲ್ಲಾಸವು ಸಮಾಪ್ತವಾಯಿತು.

## XV ತಾಂಡವಲೀಲೋಪಸಂಹಾರವು.

ನಮ್ಮ ಸಮೀಪದಲ್ಲಿ ಇನ್ನೂ ಮೂಲಬಲಗಳು ಅನೇಕವಿರುತ್ತವೆ. ಮತ್ತು ಹಿಮ್ಮೇಳದವರು ಮುಮ್ಮೇಳದವರು, ಎಡಮೇಳದವರು, ಬಲಮೇಳದವರು, ನಮಗೆ ಬಹಳ ಮಂದಿಯುಂಟು. ಶಾಸ್ತ್ರಿಗಳಂತೆ ಏಕಾಂಗಿಯಾಗಿ ತಾಳತಂಬೂರಿರಹಿತರಾಗಿ ನಾವು ಕುಣಿಯುವವರಲ್ಲ. ನಮ್ಮ ತಾಂಡವವನ್ನು ಒಂದು ಸ್ಥಾಯಿ ಸ್ಥಳವಾದುದರಿಂದ ನಿಲ್ಲಿಸುವೆವು. ಗಾಯಕರಾದ ಶಾಸ್ತ್ರಿಗಳ ಸ್ವರವನ್ನು ನೋಡಿಕೊಂಡು ಪುನಃ ಪ್ರಾರಂಭಿಸುವೆವು. ನರ್ತನ ಭೂಮಿಗೆ ಬಂದುದಾಯಿತು. ಸಾಮಾನ್ಯ ಆರಂಭಕ್ಕೆ ಸಾಮಾನ್ಯ ಗಾಯಕರು ದೊರೆತರು. ಹರತೀ ಆಚಾರ್ಯರಂಥಾ ತಾಳಹಾಕುವವರು, ದ್ವೈತವೇದಾಂತ ವಿಶಾರದರು, ಅದ್ವೈತ ವಿದ್ಯಾನಿಧಿಗಳು, ಸರ್ವಶಾಸ್ತ್ರಪ್ರವೀಣರು ಮತ್ತು ಆಂಗ್ಲೇಯ ವಿದ್ಯಾಕುಶಲರು ಇವರೆಲ್ಲಾ ಹಿಮ್ಮೇಳಕ್ಕೆ ಇರುತ್ತಾರೆ. ಶ್ರುತಿ, ಸ್ಮೃತಿ, ಇತಿಹಾಸ ಪುರಾಣಗಳೆಲ್ಲವೂ ನಮ್ಮ

ನರ್ತನದ ಹಾವಭಾವಗಳು. ವಾಚಕರೆಲ್ಲರೂ ಬಲಮೇಳ, ಎಡಮೇಳ, ಹಿಮ್ಮೇಳ, ಬಾಜಾಭಜಂತ್ರಿ ಎಲ್ಲವೂ ಸಿದ್ಧವಾಗಿದೆ. ದೇವಮನೋರಂಜಕವಾದ ಈ ತಾಂಡವಕ್ಕೆ ನಮ್ಮ ತಿರುಮಕೂಡ್ಲು ನಟೇಶ್ವರನೇ ಗುರುವು. ಅಶ್ವತ್ಥನಾರಾಯಣನೇ ದೇವತೆಯು. ಇಂಥಾ ನಾಟ್ಯಕೌಶಲ್ಯವು ಅದ್ವೈತಿಗಳಿಗೆಲ್ಲಿಂದ ಬಂತು? ಒಂಟಿ ಶೀನಿನಂತೆ ''ಚಿತ್'' ಎಂದು ಇಷ್ಟೇ ಹೇಳಿ ಮೌನವನ್ನು ಧರಿಸುವ ಅದ್ವೈತಿಗಳಿಗೆ ನರ್ತನದ ಸೊಬಗೆಲ್ಲಿಂದ ಬಂತೆಂದು ಮೂರುವರ್ಷಗಳ ಹಿಂದೆ ಒಬ್ಬರು ಪಂಡಿತರು ಉಪನ್ಯಾಸದಲ್ಲಿ ಹೇಳಿದರು. ಅವರು ಸರಿಯಾಗಿ ಹೇಳಿದರು. ಶಾಸ್ತ್ರಿಗಳು ತಮ್ಮ ಗ್ರಂಥವನ್ನು ಇತಿ ಶಿವಂ(ಧ್ಯಾಯಾಮಿ) ಎಂದು ಮುಗಿಸಿರುವರು. ಅದು ಕೃಷ್ಣದೇವತಾಕವಾದ ತಮ್ಮ ತಾಂಡವಲೀಲೆಗೆ ಉಚಿತವಾದ ಮಂಗಳವಲ್ಲ. ನಾವು ''ಇತಿ ಣಂ'' ಎನ್ನುತ್ತೇವೆ. ಯಾತಕ್ಕೆಂದರೆ ಅಪ್ಪಯ್ಯ ದೀಕ್ಷಿತರು ಎಲ್ಲಾ ನಾಮಗಳನ್ನೂ ಶಿವಪರವಾಗಿ ಅರ್ಥ ಮಾಡಿದರೂ, ನಾರಾಯಣ ನಾಮವು ಪ್ರಾಣತೆಗೆಯುವುದು, ''ಣತ್ವಂ ಬಾಧಿಕ್ಯದ್ರಿ'' ಎಂದು ಹೇಳಿದ್ದರು. ಅಥವಾ ಇತಿ ಝಂ ಎಂದು ಹೇಳುತ್ತೇವೆ. ಇದು ನಮ್ಮ ತಾಂಡವಲೀಲೆಗೆ ಉಚಿತವಾದುದು.

## ಅರ್ಪಣವು

ಈ ಗ್ರಂಥ ರತ್ನವನ್ನು ಯಾರಿಗೆ ಅರ್ಪಿಸಲಿ? ಇದನ್ನು ಸಾಂಬಶಾಸ್ತ್ರಿಗಳಿಗೆ ಅರ್ಪಿಸಬಹುದು. ಯಾತಕ್ಕೆಂದರೆ ಇದು ಅವರು ಕೊಟ್ಟ ಚಪೇಟಿಕಾಜನಿತ ''Nerve Stimulus'' ನರಗಳ ಕುಣಿತದಿಂದ ಉಕ್ಕಿಬಂದದ್ದು. ಅವರು ಪ್ರಥಮ ಶ್ಲೋಕ ದಲ್ಲಿಯೇ ವೈಷ್ಣವರು ಖಳರು, ಅವೈದಿಕರು ಎಂದು ಚುಚ್ಚದಿದ್ದರೆ ನಾವು ಕುಣಿಯುತ್ತಿರಲಿಲ್ಲ. ಅಥವಾ ಶಿವನಾದ, ವಿರೂಪಾಕ್ಷನಾದ ನಮ್ಮ ನಂಜುಂಡದೇವರಿಗೆ ಇದನ್ನು ಅರ್ಪಿಸಬಹುದು. ಯಾತಕ್ಕೆಂದರೆ ಇದು ಮನಃಪ್ರೇರಕನೆಂದು ಪ್ರಸಿದ್ಧನಾದ ಅವನಿಂದ ಹುಟ್ಟಿದ್ದು. ಅಥವಾ ಇದನ್ನು ನಮ್ಮ ಕಾನನದೇವತೆಯಾದ ಬೆಟ್ಟದ ದೊಡ್ಡನಾರಾಯಣ ದೇವರಿಗಾದರೂ ಅರ್ಪಿಸಬಹುದು. ಯಾತಕ್ಕೆಂದರೆ, ಅವನು ನಮ್ಮಪ್ಪನು. ನಾನು ಇದೊಂದೂ ಮಾಡುವುದಿಲ್ಲ. ನಮ್ಮ ದುರ್ಗಾನರಸಿಂಹ ದೇವರಿಗೆ ಇದನ್ನು ಸಮರ್ಪಿಸಿರುತ್ತೇನೆ. ಅವನೀಗ ದುಷ್ಟಮರ್ದನನು, ದುರ್ಜನ ದಮನನು, ಸಾಧುವೈಷ್ಣವಪಾಲಕನು, ಮಾಯಾಭಂಜಕನು, ನಿರ್ವಿಶೇಷವಾದ ನಿರಾಸಕನು. ಅವನು ನಮ್ಮ ಕುಲಸ್ವಾಮಿಯು, ಕುಲದೈವವು, ಕುಲಗುರುವು. ನಾವು ಅವನ ಎಂಜಲು ತಿನ್ನುವ ಗುಲಾಮರು. ಸಾಂಬಶಾಸ್ತ್ರಿಗಳು ಬೈದರೆ ಬೈಯಲಿ. ನಾವು ಉತ್ತರ ಕೊಡುತ್ತೇವೆ.

ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಭಿನ್ನ

ಶ್ರೀಕೃಷ್ಣಾರ್ಪಣಮಸ್ತು.

ಜಯತ್ಯಾನಂದ ತೀರ್ಥೇಷ್ಟದೇವತಾ ನರಕೇಸರೀ। ವಿಪಾಟಿತಾಜ್ಞಾನತಮಃ ಕಪಾಟಾತ್ಯುರುಹುಂಕೃತಃ॥

ಜಯತ್ಯಮಿತಪೌರುಷಃ ಸ್ವಜನತೇಷ್ಟಚಿಂತಾಮಣಿಃ। ಅಜೇಶಮುಖವಂದಿತೋ ಗುಣಗಣಾರ್ಣವಃ ಶ್ರೀಪತಿಃ॥

ಹೀಗೆ ಸಾಂಬ ಗಳಹಸ್ತಿಕಾ ಮುಗಿದುದು.

ಇದನ್ನು ವಿರಚಿಸಿದ ಶ್ರೀಹೆಚ್.ಸುಬ್ಬರಾಯರಿಗೆ ನಮನಗಳು.

ಅವರ ವೈಷ್ಣವಪ್ರಮಾಣ ಪತ್ರಿಕಾವನ್ನು ಓದಲೇಬೇಕು. ಆಗ ನಮ್ಮ ಆದ್ಯಕರ್ತವ್ಯದ ಅರಿವು ಆಗುತ್ತದೆ.

ಶ್ರೀಹೆಚ್.ಸುಬ್ಬರಾಯಾಂತರ್ಗತ ಶ್ರೀವಾದಿರಾಜಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು.

(ಗಣಕೀಕರಣ ಮುಗಿದುದ್ದು. ಶ್ರೀವೃಷನಾಮಸಂವತ್ಸರ ಆಷಾಢ ಬಹುಳ ಚತುರ್ದಶಿ ಗುರುವಾರ.

ತಾ॥ 19/7/2001)

ಶ್ರೀಭಾರತೀರಮಣೋ ಮಧ್ವೋ ಸೃಷ್ಟಿಸ್ಥಿತ್ಯಂತಕಾರಕಃ॥

ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ॥